ತುಳು ಅನುವಾದ ವಾಙ್ಮಯ : ಸಾಂಸ್ಕೃತಿಕ ಅನುಸಂಧಾನದ ನೆಲೆಗಳು

ಪಿಹೆಚ್.ಡಿ. ಪದವಿಗಾಗಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುತ್ತಿರುವ

ಮಹಾಪ್ರಬಂಧದ ಅಂತಿಮ ಸಾರಲೇಖ

ಸಂಶೋಧಕರು

ಸುಧಾರಾಣಿ

ಮಾರ್ಗದರ್ಶಕರು

ಡಾ. ನಾಗಪ್ಪಗೌಡ ಆರ್.

ಸಹ ಪ್ರಾಧ್ಯಾಪಕರು

ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ

ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ– ೫೭೪೧೯೯

ಸಂಶೋಧನ ಕೇಂದ್ರ

ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ

ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ –೫೭೪ ೧೯೯

೨೦೨೧

ಪರಿವಿಡಿ

ತುಳು ಅನುವಾದ ವಾಙ್ಮಯ : ಸಾಂಸ್ಕೃತಿಕ ಅನುಸಂಧಾನದ ನೆಲೆಗಳು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವೈಧಾನಿಕತೆ ೧–೧೧

ಪ್ರಸ್ತಾವನೆ

ಉದ್ದೇಶ

ವ್ಯಾಪ್ತಿ ಮತ್ತು ಆಕರಗಳ ಸ್ವರೂಪ

ವೈಧಾನಿಕತೆ

ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಸಮೀಕ್ಷೆಯಿಂದ ಕಂಡುಕೊಂಡ ತಥ್ಯಗಳು

ಅಧ್ಯಾಯ – ೧ ಅನುವಾದ ಪರಿಕಲ್ಪನೆ, ತುಳು ಅನುವಾದ ವಿದ್ಯಮಾನ : ತಾತ್ವಿಕ ಪ್ರವೇಶ ೧೨–೬೩

೧.೧ ಅನುವಾದ : ಒಂದು ಸಂಕಥನ

೧.೧.೧ ಅನುವಾದ ನಿರ್ವಚನ, ವ್ಯಾಪ್ತಿ ಮತ್ತು ತಾತ್ವಿಕತೆ

೧.೧.೨ ವಾದ ವಾಗ್ವಾದವಾಗಿ

೧.೧.೩ ಚೈತನ್ಯಪೂರ್ಣವಾದ ಸಿದ್ಧಾಂತ

೧.೧.೪ ಭಾಷೆಯ ಶಕ್ತಿಯುತ ಸಂವರ್ಧನೆ

೧.೨ ತುಳುನಾಡು – ನುಡಿ–ಸಂಸ್ಕೃತಿ – ಸಾಹಿತ್ಯ

೧.೨.೧ ನಾಡು–ನುಡಿ – ಸಂಸ್ಕೃತಿ

೧.೨.೨ ಪ್ರಾಚೀನ ಕಾವ್ಯಗಳು ಮತ್ತು ಮಧ್ಯಕಾಲೀನ ಭಕ್ತಿಪರಂಪರೆ

೧.೩ ತುಳು ಅನುವಾದ : ಒತ್ತಾಸೆ, ನಿಲುವು ಮತ್ತು ಪ್ರೇರಣೆಗಳು

೧.೩.೧ ವಸಾಹತುಪೂರ್ವ ಕಾಲಘಟ್ಟ

೧.೩.೨ ವಸಾಹತು ಕಾಲಘಟ್ಟ

೧.೩.೩ ವಸಾಹತೋತ್ತರ ಕಾಲಘಟ್ಟ

ಅಧ್ಯಾಯ – ೨ ಮಿಶನರಿ ಅನುವಾದಗಳು ೬೪–೧೦೬

೨.೧ ಅನುವಾದಗಳು ಮತ್ತು ಪರಿಕರಗಳ ಸಮೀಕರಣ

೨.೨ ವಸಾಹತುಶಾಹಿ ಪ್ರಜ್ಞೆ ಮತ್ತು ಕಾರ್ಯಸೂಚಿ

೨.೩ ಅನುವಾದಗಳು ಮತ್ತು ತೌಳವ ಮುಂಚಲನೆ

ಅಧ್ಯಾಯ – ೩ ಯಕ್ಷಗಾನ ಅನುವಾದಗಳು ೧೦೭–೧೪೩

೩.೧ ಯಕ್ಷಗಾನ ಅನುವಾದ : ಒಂದು ಚಾರಿತ್ರಿಕ ವಿದ್ಯಮಾನ

೩.೨ ತುಳುತನದ ಸಂಯೋಜಿತ ಅನುವಾದ

೩.೩ ಪ್ರದರ್ಶನ ಪಠ್ಯವಾಗಿ ರೂಪಾಂತರಗಳು

ಅಧ್ಯಾಯ – ೪ ಜಾನಪದ ಅನುವಾದಗಳು ೧೪೪–೧೮೮

೪.೧ ತುಳು ಜಾನಪದ : ಬಹುಶಿಸ್ತೀಯ ತಾತ್ವಿಕ ಭಿತ್ತಿಗಳು

೪.೨ ಸಿರಿ ಪಾಡ್ದನ : ಬಹು ವಿನ್ಯಾಸದ ವಿಶ್ಲೇಷಣೆಗಳು

೪.೩ ಸಾಂಸ್ಕೃತಿಕ ಅನನ್ಯತೆಯ ಶೋಧ ಮತ್ತು ವಿನಿಮಯ

೪.೩.೧ ತುಳುವಿನಿಂದ ಕನ್ನಡ

೪.೩.೨ ಫಿನ್ನಿಶ್‌ನಿಂದ ತುಳು

೪.೪ ಸಂಬಂಧ ವಿಸ್ತರಿಸಿದ ಜ್ಞಾನಶಿಸ್ತುಗಳು

೪.೪.೧ ಮಲೆಯಾಳಂನಿಂದ ತುಳು

೪.೪.೨ ತುಳುವಿನಿಂದ ಇಂಗ್ಲೀಷ್

ಅಧ್ಯಾಯ – ೫ ಪುನರುಜ್ಜೀವನ : ಸಂವರ್ಧನೆಯ ನೆಲೆಗಳು ೧೮೯–೨೫೪

೫.೧ ತುಳುವಿಗೆ ಮೂಡಿದ ಅರಿವು ಮತ್ತು ಎಚ್ಚರ

೫.೨ ಪದ್ಯ ಕೃತಿಗಳು

೫.೨.೧ ಧಾರ್ಮಿಕ – ತಾತ್ವಿಕ ರಚನೆಗಳು

೫.೨.೨ ಮಧ್ಯಕಾಲೀನ ಕನ್ನಡ ರಚನೆಗಳು

೫.೨.೩ ಆಧುನಿಕ ರಚನೆಗಳು

೫.೩ ಗದ್ಯಕೃತಿಗಳು

೫.೩.೧ ಕಾದಂಬರಿ

೫.೩.೨ ನಾಟಕ

೫.೩.೩ ಸಂಕೀರ್ಣ ಬರಹಗಳು

೫.೪ ಕೆದಂಬಾಡಿ ಜತ್ತಪ್ಪ ರೈ ಪ್ರತಿನಿಧೀಕರಣ

೫.೫ ಸಮಕಾಲೀನ ಪ್ರೇರಣೆ ಮತ್ತು ಪೋಷಣೆ

ಅಧ್ಯಾಯ – ೬ ಪುನರುಜ್ಜೀವನ : ವಿಸ್ತರಣೆಯ ನೆಲೆಗಳು ೨೫೫–೩೦೩

೬.೧ ಸ್ವತಂತ್ರ ಸಾಹಿತ್ಯ ರೂಪೀಕರಣ

೬.೨ ತುಳುವಿನಿಂದ ಕನ್ನಡಕ್ಕೆ

೬.೩ ತುಳುವಿನಿಂದ ಇಂಗ್ಲೀಷ್‌ಗೆ

೬.೪ ತುಳುವಿನಿಂದ ಇತರ ಭಾಷೆಗಳಿಗೆ
೬.೫ ಯಾಜಮಾನ್ಯ ಮತ್ತು ಪ್ರತಿರೋಧ

ಅಧ್ಯಾಯ – ೭ ಅನುಸಂಧಾನದ ಆಯಾಮಗಳು **೩೦೪–೩೬೩**

೭.೧ ಭಾಷಿಕ – ಸಾಂಸ್ಕೃತಿಕ ಚಹರೆಗಳು
೭.೧.೧ ಭಾಷಿಕ
೭.೧.೨ ಸಾಂಸ್ಕೃತಿಕ
೭.೨ ಅನುವಾದಕರ – ಓದುಗರ ಸಂವಹನ
೭.೩ ಮಹಿಳಾ ಪ್ರತಿನಿಧೀಕರಣ : ಆಯ್ಕೆಯ ವಿನ್ಯಾಸಗಳು
೭.೪ ಅನುವಾದದ ಸವಾಲುಗಳು
೭.೪.೧ ಭೌಗೋಳಿಕ ಸವಾಲುಗಳು
೭.೪.೨ ವ್ಯಾಕರಣಾತ್ಮಕ ಸವಾಲುಗಳು
೭.೪.೩ ಭಾಷಿಕ ಸವಾಲುಗಳು
೭.೪.೪ ಸಾಂಸ್ಕೃತಿಕ ಸವಾಲುಗಳು

ಸಮಾರೋಪ **೩೬೪–೩೭೪**

ಪ್ರಸ್ತಾವನೆ
ಫಲಿತಗಳು
ಮುಂದಿನ ಅಧ್ಯಯನದ ಸಾಧ್ಯತೆಗಳು

ಅನುಬಂಧ **೩೭೫–೩೮೬**

ಪ್ರಧಾನ ಆಕರಗಳು
ಆನುಷಂಗಿಕ ಆಕರಗಳು

ತುಳು ಅನುವಾದ ವಾಙ್ಮಯ : ಸಾಂಸ್ಕೃತಿಕ ಅನುಸಂಧಾನದ ನೆಲೆಗಳು

ಪ್ರಸ್ತಾವನೆ

ಭಾಷೆ ಒಂದು ಸಾಮಾಜಿಕ ಘಟಕ. ಭಾಷೆಯಲ್ಲಿ ರೂಪಿತವಾಗುವ ನಿಯಮಿತ ಆಕಾರವುಳ್ಳ ಕಲಾ ಮೀಮಾಂಸೆಗೆ ಒದಗಿ ಬರುವ ಅಭಿವ್ಯಕ್ತಿಗಳನ್ನು ಸಾಹಿತ್ಯವೆನ್ನುತ್ತೇವೆ. ಸಮಾಜದಲ್ಲಿರುವ ಮನುಷ್ಯ ಸಾಹಿತ್ಯದ ಕೇಂದ್ರ ಶಕ್ತಿ. ಮನುಷ್ಯನ ಯೋಚನೆ–ಯೋಜನೆ, ಕಲ್ಪನೆ–ಅನುಭವ, ಜ್ಞಾನ–ಅಜ್ಞಾನ ಇವುಗಳು ಸಾಹಿತ್ಯದಲ್ಲಿ ರೂಪುಗೊಳ್ಳುತ್ತವೆ. ಭಾಷೆಯಲ್ಲಿ ಸೃಷ್ಟಿಯಾಗುವ ಈ ಸಾಹಿತ್ಯ ಪಠ್ಯಗಳಿಗೆ ಪೂರಕವಾಗಿ ಅನುವಾದ ಪ್ರಕ್ರಿಯೆಯು ಚಲನಶೀಲವಾಗಿ, ನಿರಂತರವಾಗಿ ಜಾರಿಯಲ್ಲಿರುತ್ತದೆ. ಅನುವಾದ ಪ್ರಕ್ರಿಯೆ ಪ್ರತಿಯೊಂದು ಭಾಷೆ, ಸಾಹಿತ್ಯದೊಳಗೆ ಅನುಸಂಧಾನ ನಡೆಸಿಕೊಂಡು ಬಂದಿರುವ ಚಟುವಟಿಕೆಯಾಗಿದೆ. 'ಅನುವಾದ' ಎಂಬ ಪದ ಆಧುನಿಕ ವ್ಯಾಖ್ಯೆಯಾಗಿ ಚಲಾವಣೆಗೆ ಬಂದಿದ್ದರೂ, ಅನುವಾದ ಪ್ರಕ್ರಿಯೆ ಆಧುನಿಕವಲ್ಲ. ಭಾಷೆ ಹುಟ್ಟಿದಂದಿನಿಂದಲೇ ಅನುವಾದ ಕೂಡ ಹುಟ್ಟಿಕೊಂಡಿದೆ. ಭಾಷೆಗೆ ಇರುವ ಚರಿತ್ರೆಯ ಹಳಮೆಯೇ ಅನುವಾದ ಚರಿತ್ರೆಗೂ ಇದೆ. ಭಾಷೆಯ ಚರಿತ್ರೆಯೊಳಗೆ ಅನುವಾದ ಚರಿತ್ರೆಯು ಸೇರಿದೆ.

ಯಾವುದೇ ಭಾಷೆ, ಸಾಹಿತ್ಯಗಳ ಬೆಳವಣಿಗೆಗೆ ಅನ್ಯ ಭಾಷೆ, ಸಂಸ್ಕೃತಿ, ಸಾಹಿತ್ಯದ ಸಂಪರ್ಕ ಅಗತ್ಯ. ಅನ್ಯ ಭಾಷಾ ಸಂಪರ್ಕಗಳ ಪರಸ್ಪರ ಅನುವಾದದಿಂದ ಜ್ಞಾನವಲಯಗಳು ಪರಿಚಿತಗೊಳ್ಳುತ್ತವೆ. ಸಾಂಸ್ಕೃತಿಕ ಪರಿಭಾಷೆಗಳು ಅನನ್ಯವಾಗಿ ರೂಪುಗೊಳ್ಳುತ್ತವೆ. ಭಾಷಾಕೋಶಗಳು ವಿಸ್ತಾರಗೊಳ್ಳುತ್ತವೆ. ಸಾಹಿತ್ಯ ರೂಪಗಳು ಸಮೃದ್ಧಿಯಿಂದ, ಘನತೆಯಿಂದ ಉತ್ಪಾದನೆಗೊಳ್ಳುತ್ತ ಸಮಕಾಲೀನಗೊಳ್ಳುತ್ತ ಸಾಗುತ್ತವೆ. ಭಾಷೆಯ ಅಭಿವ್ಯಕ್ತಿ ಸಾಧ್ಯತೆಗಳು ಹೆಚ್ಚುತ್ತವೆ. ಹೀಗೆ ನಿರ್ಮಾಣಗೊಳ್ಳುತ್ತ ಸಾಗುವ ಬಹುತ್ವದ ಚಲನೆಗಳು ನೆಲದ ಸಂಸ್ಕೃತಿಗೂ, ಬಹುಭಾಷಿಕ ಸಾಂಸ್ಕೃತಿಕ ಅಸ್ಮಿತೆಗಳಿಗೂ ಜಾಗ ನೀಡುತ್ತ ಆರೋಗ್ಯಕರ ಯೋಚನಾ ಕ್ರಮವನ್ನು ಸೃಷ್ಟಿಸುತ್ತವೆ.

ಸಾಹಿತ್ಯ ಕೃತಿ ಮೂಲವಿರಲಿ, ಅನುವಾದವಿರಲಿ, ಅದೊಂದು ಸ್ವತಂತ್ರ ಘಟಕ ಅಲ್ಲ. ನಿರ್ದಿಷ್ಟ ಕಾಲದ ಅಗತ್ಯಗಳಿಗೆ ತಕ್ಕಂತೆ ರೂಪುಗೊಳ್ಳುವ ಸಾಂಸ್ಕೃತಿಕ ರೂಪ. ಈ ಸಾಂಸ್ಕೃತಿಕ ಸಂರಚನೆಗಳು ಸೈದ್ಧಾಂತಿಕವಾಗಿದ್ದು ಒಂದು ಕಾಲಘಟ್ಟದ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಒತ್ತಡಗಳು ಇವುಗಳ ರೂಪುರೇಷೆಗಳನ್ನು ನಿರ್ಧರಿಸುತ್ತವೆ. ಜಗತ್ತಿನ ಎಲ್ಲಾ ಭಾಷೆ, ಸಾಹಿತ್ಯಗಳನ್ನು ಭಾಷಾಂತರ ಪ್ರಕ್ರಿಯೆ ಪೋಷಿಸಿಕೊಂಡು ಬಂದಿದೆ. ಭಾಷಾಂತರ ಪ್ರಕ್ರಿಯೆ ಒಂದು ಭಾಷೆಗೆ, ಜನಾಂಗದ ಬದುಕಿಗೆ ಹೊಸ ಆಯಾಮವನ್ನು ನೀಡುವುದರೊಂದಿಗೆ ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಶಕ್ತಿಯನ್ನು ನೀಡುವ ಪ್ರಯತ್ನವಾಗಿದೆ. ತನ್ನ ಸಾಂಸ್ಕೃತಿಕ ಚೌಕಟ್ಟನ್ನು ಮೀರಿ ಬೆಳೆಯಬೇಕೆಂಬ ತುಡಿತವಿರುವ ಪ್ರತಿಯೊಂದು ಭಾಷಿಕ ಜನಾಂಗ ಅನುವಾದ ಪ್ರಕ್ರಿಯೆಗೆ ತೆರೆದುಕೊಳ್ಳುತ್ತದೆ. ಆಧುನಿಕ ಕನ್ನಡ ಸಾಹಿತ್ಯದ

ಆರಂಭ ಕಾಲದಲ್ಲಿ ಇಂಗ್ಲೀಷ್‌ನಿಂದ ಕನ್ನಡಕ್ಕೆ ನಡೆದ ಅನುವಾದಗಳು ಕನ್ನಡ ಭಾಷೆ, ಸಾಹಿತ್ಯದ ಶಕ್ತಿಯನ್ನು ಸಂವರ್ಧಿಸುವ ಅಗತ್ಯ ಮಾದರಿಯಾಗಿದ್ದು ಮಾತ್ರವಲ್ಲ ಆ ಕಾಲದ ನಿರ್ದಿಷ್ಟ ರಾಷ್ಟ್ರೀಯತೆಯನ್ನು ನಿರ್ವಚಿಸುವ ಸಂಕಥನವೂ ಆಗಿರುವುದನ್ನು ಗಮನಿಸಿಕೊಳ್ಳಬಹುದು. ಅನುವಾದ ಬೇರೆ ಬೇರೆ ಭಾಷೆಗಳ ನಡುವೆ ನಡೆಯುವ ಬೌದ್ಧಿಕ ಚಟುವಟಿಕೆ. ಸಾಂಸ್ಕೃತಿಕ ವಿನಿಮಯ. ಅನುವಾದ ಪ್ರಕ್ರಿಯೆಯು ಸಾಹಿತ್ಯಿಕ ಚಟುವಟಿಕೆ ಎಂಬ ಸರಳ ವ್ಯಾಪ್ತಿಯನ್ನು ಮೀರಿ ಅದೊಂದು ರಾಜಕೀಯ, ಸಾಂಸ್ಕೃತಿಕ ಪ್ರಕ್ರಿಯೆಯಾಗಿ ಸಂಕಥನವೆನ್ನಿಸಿಕೊಂಡಿದೆ.

ತುಳುನಾಡು–ಕನ್ನಡ ನುಡಿಯ ನಿರ್ವಚನದೊಳಗಿನ ಜನಭಾಷೆ ತುಳು ಅನುವಾದ ಸಂಕಥನವನ್ನು ಜೀರ್ಣಿಸಿಕೊಂಡ ಬಗೆ ಇಂದಿನ ಭಾಷಿಕ ರಾಜಕಾರಣದ ಆಯಾಮಗಳನ್ನು ಅರ್ಥೈಸಿಕೊಳ್ಳುವುದಕ್ಕೆ ಮುಖ್ಯವಾಗುತ್ತದೆ. ಬದಲಾಗುತ್ತಿರುವ ಭಾಷಿಕ ವ್ಯಾಖ್ಯೆಗಳ ವ್ಯವಸ್ಥೆಯಲ್ಲಿ ತುಳುವಿನಂತಹ ಮೌಖಿಕ ಭಾಷೆ ತನ್ನ ಅಸ್ತಿತ್ವವನ್ನು ಸಾಬೀತುಪಡಿಸಲು ಆಯ್ದುಕೊಂಡ ಮಾರ್ಗಗಳಲ್ಲಿ ಸಾಹಿತ್ಯ ಬರಹದ ಕ್ರಿಯಾಚರಣೆಯು ಒಂದು. ಈ ಕ್ರಿಯಾಚರಣೆಗೆ ಅನುವಾದ ಪ್ರಕ್ರಿಯೆ ಒದಗಿಬಂದ ಬಗೆ ತುಳು ಭಾಷೆ, ಸಾಹಿತ್ಯದ ಬೆಳವಣಿಗೆಯ ಕುರಿತಾದ ಅರಿವಿನ ಜೊತೆಗೆ ಅನುವಾದ ಚಿಂತನೆಗಳ ಅಧ್ಯಯನಕ್ಕೂ ಹೊಳಹುಗಳನ್ನು ನೀಡಬಹುದಾಗಿದೆ.

ಭಾಷೆಗಳು ಸಂಗಮಿಸಿ, ಭಾಷೆಯೊಳಗೆ ಹರಿಯುತ್ತಿರುವ ಜ್ಞಾನಮೀಮಾಂಸೆಯನ್ನು ಪರಸ್ಪರ ಆದಾನ–ಪ್ರದಾನ ಮಾಡಿಕೊಂಡ ಸಮನ್ವಯತೆಯನ್ನು ಮರುಮಂಡನೆ ಮಾಡಿಕೊಳ್ಳಬೇಕಾದುದು ಸದ್ಯದ ತುರ್ತು. ಇಂದಿನ ವಿವಿಧ ರಾಜಕಾರಣಗಳ ವ್ಯಾಕರಣದ ನಡುವೆ ನಡೆಸುವ ಬಹುತ್ವದ ಅನುಸಂಧಾನ ಮತ್ತು ಮರುಮಂಡನೆ ಭಾಷೆ ಮತ್ತು ಬದುಕನ್ನು ಪೋಷಿಸುತ್ತದೆ ಎಂಬ ತಿಳುವಳಿಕೆಯನ್ನು ಜೊತೆಯಾಗಿರಿಸಿಕೊಂಡು ತುಳು ಅನುವಾದ ವಾಙ್ಮಯದ ಅನುಸಂಧಾನದ ಮಾರ್ಗಗಳನ್ನು ಹುಡುಕಿಕೊಳ್ಳಬಹುದು. ಭಾಷಿಕ ಪ್ರತಿನಿಧೀಕರಣದ ಶಕ್ತಿಯುತ ಮಾಧ್ಯಮವಾದ ಅನುವಾದ, ಯಾಜಮಾನ್ಯ–ಪ್ರಭುತ್ವ–ಅಧಿಕಾರದ ರೂಪಣೆ–ನಿರೂಪಣೆಯಲ್ಲಿ ಪಾಲು ಪಡೆಯುವ ಬಗೆಯನ್ನು ಅಧ್ಯಯನ ನಡೆಸುವುದು ವರ್ತಮಾನದ ಅಗತ್ಯವಾಗಿದೆ.

ಉದ್ದೇಶ

ತುಳುನಾಡು ಕನ್ನಡ ನುಡಿಯ ಕರಾವಳಿಯ ಭೌಗೋಳಿಕ ಪ್ರದೇಶದಲ್ಲಿ ತುಳು ವ್ಯಾಪಕ ಚಲನೆಯನ್ನು ಹೊಂದಿದ ವ್ಯಾವಹಾರಿಕ ಭಾಷೆ. ತುಳು ಅತ್ಯಂತ ಬಲವಾದ, ಘನವಾದ ಶಬ್ದಸಂಪತ್ತು, ನುಡಿಗಟ್ಟು ಹೊಂದಿದ್ದರೂ ವಿವಿಧ ಕಾರಣಗಳಿಂದಾಗಿ ಸಾಹಿತ್ಯಿಕವಾಗಿ ಮರೆಯಲ್ಲಿ ಉಳಿಯುವಂತಾಯಿತು. ಪ್ರತಿಯೊಂದು ಭಾಷೆಯೂ ತನ್ನ ಸಂವರ್ಧನೆ ಮತ್ತು ವಿಸ್ತರಣೆಯ ಆಯಾಮಗಳಿಗೆ ತಕ್ಕಂತೆ ಬೇರೆ ಬೇರೆ ಭಾಷೆಗಳಿಂದ ಕೊಡುಕೊಳ್ಳುವಿಕೆಯನ್ನು ನಿರ್ವಹಿಸುತ್ತದೆ. ಈ ನಿರ್ವಹಣೆ ಲಕ್ಷ್ಯಭಾಷೆಯ ಅಗತ್ಯವೂ, ಆಕರ ಭಾಷೆಯ ನಿರ್ಧಾರವೂ ಆಗಿರಬಹುದು. ತುಳುವಿನಲ್ಲಿಯೂ ಕೂಡ ಈ ರೀತಿಯ ಅಗತ್ಯ ಮತ್ತು

ನಿರ್ಧಾರಗಳೂ ಕಾಲಕಾಲದಿಂದ ವಿವಿಧ ಸ್ಥಿತಿಗತಿಗಳಲ್ಲಿ ನಡೆದಿದೆ. ತುಳುನಾಡು–ನುಡಿ–ಸಾಹಿತ್ಯ, ಸಂಸ್ಕೃತಿಯ ವಿಕಾಸದ ಹೆಜ್ಜೆಗಳಲ್ಲಿ ಅನುವಾದಗಳು ಪ್ರಮುಖ ಪಾತ್ರ ನಿರ್ವಹಿಸಿ ತುಳು ಅನುವಾದ ವಾಙ್ಮಯವನ್ನು ಸೃಷ್ಟಿಸಿಕೊಂಡಿದೆ.

ಪ್ರಾಚೀನ, ವಸಾಹತು ಮತ್ತು ವಸಾಹತೋತ್ತರ ಕಾಲಘಟ್ಟಗಳಲ್ಲಿ ಭಿನ್ನಭಿನ್ನ ಒತ್ತಡಗಳು ಮತ್ತು ಪ್ರೇರಣೆಗಳು ಒದಗಿ ಬಂದು ಈ ಅನುವಾದ ವಾಙ್ಮಯ ರೂಪುಗೊಂಡಿದೆ. ಈ ಒತ್ತಡಗಳು ಮತ್ತು ಪ್ರೇರಣೆಗಳನ್ನು ತುಳುಭಾಷೆ ಅನುಸಂಧಾನಿಸಿಕೊಂಡ ಬಗೆಗಳನ್ನು ಕುರಿತು ಸಮಗ್ರ ಅಧ್ಯಯನ ನಡೆಸುವುದು ಅಗತ್ಯ. ತುಳುವಿನ ಭಾಷಾಂತರ ಪ್ರಕ್ರಿಯೆಯಲ್ಲಿ ಆಯ್ಕೆ ಮಾಡಿಕೊಂಡ ಕೃತಿಗಳ ಮಾನದಂಡ, ಜರೂರು ಯಾವುವು ಎಂಬವುಗಳನ್ನು ಅರಿಯುವ ಮೂಲಕ ಪ್ರಾದೇಶಿಕ ಸಂಸ್ಕೃತಿಯೊಂದರ ಸಾಂಘಿಕ ಚಹರೆಗಳನ್ನು, ಸ್ಥಿತ್ಯಂತರಗಳನ್ನು ಗುರುತಿಸುವುದಕ್ಕೆ ಸಾಧ್ಯವಿದೆ. ಭಾಷಾಂತರವು ತುಳುಭಾಷೆ, ಸಾಹಿತ್ಯದ ರೂಪುರೇಷೆಗಳನ್ನು ನಿರ್ಧರಿಸುವ ಶಕ್ತಿಯಾಗಿದೆಯೆ ಎಂಬುದನ್ನು ಅನುವಾದದ ಶೈಲಿ, ಬಳಕೆಯಾದ ಶಬ್ದಸಂಪತ್ತು, ಉತ್ಪಾದನೆಗೊಂಡ ಭಾಷಿಕ ಸಂರಚನೆಗಳನ್ನು ವಿಶ್ಲೇಷಿಸಿಕೊಳ್ಳುವ ಮೂಲಕ ನಿರ್ಣಯಿಸಿಕೊಳ್ಳುವುದು.

ಮೌಖಿಕವಾಗಿದ್ದ ತುಳುಭಾಷೆಯ ನಡೆಗಳು ಅನುವಾದ ಪ್ರಕ್ರಿಯೆಯಿಂದಾಗಿ ಗ್ರಂಥಸ್ಥದೆಡೆಗೆ ಚಲಿಸಿದ ಹೆಜ್ಜೆಗಳನ್ನು ದಾಖಲಿಸಬೇಕಾಗಿದೆ. ಈ ಶೋಧನೆ ಮತ್ತು ದಾಖಲೀಕರಣ ಈ ಅಧ್ಯಯನದ ಪ್ರಧಾನ ಉದ್ದೇಶವಾಗಿದೆ. ತುಳುಭಾಷೆ ಮತ್ತು ಸಾಹಿತ್ಯದ ಚರಿತ್ರೆ ಮತ್ತು ವರ್ತಮಾನಗಳು ಪರಸ್ಪರ ಅನುಸಂಧಾನಿಸಿಕೊಂಡ ಬಗೆಗಳನ್ನು ತುಳುವಿನ ಅನುವಾದ ಪ್ರಕ್ರಿಯೆಗಳ ಮೂಲಕ ಗುರುತಿಸುವುದೇ ಇಲ್ಲಿನ ಮುಖ್ಯ ಸಮಸ್ಯೀಕರಣವಾಗಿದೆ. ವಿಭಿನ್ನ ಭೌಗೋಳಿಕ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಭಾಷಿಕ ಆಯಾಮಗಳನ್ನು ಒಳಗೊಂಡಿರುವ ತುಳು ಅನುವಾದ ವಾಙ್ಮಯವನ್ನು ಅಧ್ಯಯನಕ್ಕೆ ಒಳಪಡಿಸುವ ಅಂತರ್‌ಶಿಸ್ತೀಯ ಅಧ್ಯಯನ ಇದಾಗಿದೆ.

ತುಳು ಕನ್ನಡದ ಆವರಣದಲ್ಲಿರುವ ಭಾಷೆ. ಶಿಕ್ಷಣ, ವ್ಯವಹಾರ, ಸಾಹಿತ್ಯ, ಆಡಳಿತ ಎಲ್ಲವೂ ಕನ್ನಡದ ಪ್ರಭಾವಲಯದಲ್ಲಿಯೇ ರೂಪುಗೊಂಡಿರುವಂತವುಗಳು. ತುಳು ಭಾಷೆಯಲ್ಲಿ ಸಾಹಿತ್ಯ ರಚನೆ ಮತ್ತು ತುಳು ಸಂಸ್ಕೃತಿಯ ಮರುನಿರೂಪಣೆಗೆ ಆಯ್ದುಗೊಂಡ ಭಾಷಾ ಮಾಧ್ಯಮ ಕನ್ನಡ. ತುಳು ಲಿಪಿಯಲ್ಲಿ ಬರೆದ ಕೃತಿಗಳನ್ನು ಹಾಗೂ ಕನ್ನಡ ಭಾಷೆಯಲ್ಲಿ ಬರೆದ ತುಳುಭಾಷೆಯನ್ನು ಓದುವವರು ಕನ್ನಡ ಬಲ್ಲ ತುಳುವರೇ ಆಗಿರುತ್ತಾರೆ. ಮೂಲದಲ್ಲಿ ಓದಲಾಗದವರಿಗೆ ಕೃತಿಗಳನ್ನು ಭಾಷಾಂತರ ಮಾಡಿ ಲಕ್ಷ್ಯಭಾಷೆಯಲ್ಲಿ ಪ್ರಕಟಿಸಲಾಗುತ್ತದೆ. ಆದರೆ ತುಳುಭಾಷೆಗೆ ಭಾಷಾಂತರಗೊಂಡ ಕೃತಿಗಳನ್ನು ಓದುವವರು ಕನ್ನಡ ಬಲ್ಲವರೇ ಆಗಿದ್ದಾರೆ. ಇಲ್ಲಿ ಭಾಷಾಂತರದ ಅಗತ್ಯ ಸಾಮಾನ್ಯ ಗ್ರಹಿಕೆಯನ್ನೇ ಬುಡ ಮೇಲಾಗಿಸಿ ಭಾಷಾಂತರ ಕೃತಿಗಳು ಮೂಲಭಾಷೆಯಲ್ಲಿಯೂ, ಲಕ್ಷ್ಯಭಾಷೆಯಲ್ಲಿಯೂ ಏಕಕಾಲಕ್ಕೆ ಓದಬಲ್ಲ ಓದುಗವರ್ಗವನ್ನು ಪಡೆಯುತ್ತದೆ. ತುಳುವಿನ ಭಾಷಾಂತರ ಪ್ರಕ್ರಿಯೆ ಈ ಹಿನ್ನೆಲೆಯಲ್ಲಿ ಭಾಷಾಂತರ ಅಧ್ಯಯನದಲ್ಲಿ ಹೊಸ ಅರಿವನ್ನು ನೀಡಬಲ್ಲದು.

ವ್ಯಾಪ್ತಿ ಮತ್ತು ಆಕರಗಳ ಸ್ವರೂಪ

ಇದು ತುಳು ಅನುವಾದ ವಾಙ್ಮಯಕ್ಕೆ ಸಂಬಂಧಪಟ್ಟ ಅಧ್ಯಯನವಾಗಿದೆ. ಜನಭಾಷೆಯಾಗಿ, ಮೌಖಿಕ ಸಾಹಿತ್ಯದ ಸಮೃದ್ಧತೆಯಿಂದ ಗುರುತಿಸಿಕೊಂಡ ತುಳುವಿನಲ್ಲಿ ರೂಪುಗೊಂಡ ಲಿಖಿತ ಅನುವಾದ ವಾಙ್ಮಯವನ್ನು ಅಧ್ಯಯನಕ್ಕೆ ಒಳಪಡಿಸುವ ಮೂಲಕ ತುಳುವಿನ ಗ್ರಂಥಸ್ಥ ಸಾಹಿತ್ಯದೆಡೆಗಿನ ಚಲನೆಯನ್ನು ಗುರುತಿಸುವ ಗುರಿ ಹೊಂದಲಾಗಿದೆ. ತುಳು ಭಾಷೆಯಿಂದ ಇತರ ಭಾಷೆಗಳಿಗೆ ಮತ್ತು ಇತರ ಭಾಷೆಗಳಿಂದ ತುಳುವಿಗೆ ನಡೆದ ಅನುವಾದಗಳನ್ನು ಪ್ರಮುಖವಾಗಿ ಪರಿಶೀಲನೆಗೆ ಒಳಪಡಿಸಲಾಗಿದೆ.

ಯಾವುದೇ ಭಾಷೆಯ ಸಾಹಿತ್ಯದ ಚಲನಶೀಲ ನಡೆಗಳು ಅನುವಾದ ಕೃತಿಗಳ ಮೂಲಕವೇ ಮುನ್ನಡೆಯುವುದು ಸಾಮಾನ್ಯ ವಿಚಾರ. ತುಳುವಿನಂತಹ ವಿಶಿಷ್ಟ, ವಿಶೇಷ ಪ್ರಾದೇಶಿಕ ವಲಯದ ಅನುವಾದ ಸಾಹಿತ್ಯದ ಚರಿತ್ರೆಯ ದಾಖಲಾತಿ ಅನುವಾದ ಶಿಸ್ತಿನ ಅಧ್ಯಯನದ ಹಿನ್ನೆಲೆಯಲ್ಲಿ ಪ್ರಮುಖವಾದ ತಾತ್ವಿಕತೆಗಳನ್ನು ನೀಡಬಹುದಾಗಿದೆ. ಈ ರೀತಿಯ ಅಧ್ಯಯನ ತುಳುವಿನಂತಹ ಬಹುಭಾಷಿಕ, ಬಹುಸಾಂಸ್ಕೃತಿಕ ಆವರಣದೊಳಗಿನ ಭಾಷಿಕ, ಸಾಂಸ್ಕೃತಿಕ ನಿರ್ವಚನಗಳನ್ನು ಶೋಧಿಸುತ್ತದೆ. ಭಾಷೆ, ಸಾಹಿತ್ಯಪಠ್ಯಗಳ ಆನ್ವಯಿಕತೆಯನ್ನು ಸಂಸ್ಕೃತಿಗೆ ಒಳಪಡಿಸುವುದರ ಮೂಲಕ ಏಕಕಾಲಕ್ಕೆ ಇದು ತುಳುನಾಡು–ನುಡಿಯ ಅನನ್ಯತೆಯನ್ನು ನಿರೂಪಿಸುವುದು ಮತ್ತು ಸಂಸ್ಕೃತಿ ಚಿಂತನೆಯ ಹೊಳಹುಗಳನ್ನು ಹುಡುಕುವುದು ಆಗಿರುತ್ತದೆ. ತುಳುಭಾಷೆಯ ಅನುವಾದ ಸಾಹಿತ್ಯದ ಜೊತೆಗೆ ಓದುಗರು, ನೋಡುಗರು ನಡೆಸಿದ ಅನುಸಂಧಾನವನ್ನು ಲಕ್ಷಿಸಿಕೊಳ್ಳಲಾಗಿದೆ.

ಚರಿತ್ರೆಯನ್ನು ಇತಿಹಾಸ ಎಂದು ಮಾತ್ರ ನೋಡದೆ ವರ್ತಮಾನದ ಗ್ರಹಿಕೆಗೆ ವಿಸ್ತರಣೆಯನ್ನು ನೀಡುವ ಆಯಾಮವೆಂದು ಆಕರಗಳನ್ನು ಪರಿಭಾವಿಸಿಕೊಳ್ಳಲಾಗಿದೆ. ತುಳುಭಾಷೆಯಲ್ಲಿನ ಅನುವಾದ ವಾಙ್ಮಯವನ್ನು ತುಳುನಾಡು – ನುಡಿಯ ಮೇಲೆ ಬೀರಿದ ಪ್ರಭಾವ, ಪ್ರೇರಣೆಗಳ ಹಿನ್ನೆಲೆಯಲ್ಲಿ ಉತ್ಪಾದನೆಗೊಂಡ ಪ್ರಾತಿನಿಧಿಕ ಪಠ್ಯಗಳನ್ನು ಆಯ್ಕೆ ಮಾಡಿಕೊಂಡು ಅಧ್ಯಯನಕ್ಕೆ ಒಳಪಡಿಸಲಾಗಿದೆ. ವಸಾಹತುಶಾಹಿ ಕಾಲಘಟ್ಟದಲ್ಲಿ ತುಳುನಾಡು ನುಡಿಗೆ ಸಂಬಂಧಪಟ್ಟಂತೆ ಮಿಶನರಿಗಳು ನಡೆಸಿದ ಕಾರ್ಯ ಚಟುವಟಿಕೆಗಳನ್ನು ಪರಿಶೀಲಿಸುವ ಮಿಶನರಿಗಳ ಅನುವಾದವನ್ನು ಪ್ರತ್ಯೇಕ ಅಧ್ಯಾಯದಲ್ಲಿ ಓದಿಗೆ ಒಳಪಡಿಸಲಾಗಿದೆ. ತುಳುನಾಡಿನ ಪ್ರಸಿದ್ಧ, ಜನಪ್ರಿಯ ರಂಗಮಾಧ್ಯಮ ಯಕ್ಷಗಾನ ಅನುವಾದ ಮೀಮಾಂಸೆಯ ಪ್ರಭಾವ, ಒತ್ತಾಸೆಗಳನ್ನು ತುಳುಭಾಷೆ ಮತ್ತು ಸಾಹಿತ್ಯದ ಚಲನೆಗಳನ್ನು ಗ್ರಹಿಸಿಕೊಳ್ಳುವ ದೃಷ್ಟಿಯಿಂದ ಪ್ರತ್ಯೇಕ ಅಧ್ಯಯನದಲ್ಲಿಚರ್ಚಿಸಲಾಗಿದೆ.

ತುಳುವಿನಲ್ಲಿ ಜನಪದ ಸಾಹಿತ್ಯ ಅತ್ಯಂತ ಶ್ರೀಮಂತಿಕೆಯನ್ನು, ಸಮೃದ್ಧಿಯನ್ನು ಹೊಂದಿರುವಂತಹುದು. ಪಾಡ್ದನ, ಗಾದೆ, ಒಗಟು, ಕಬಿತೆ, ದುಡಿಮೆಯ ಹಾಡುಗಳು, ತುಳು ಜನಪದ ಮಹಾಕಾವ್ಯ ಮೊದಲಾದ ಪ್ರಕಾರಗಳನ್ನು ತುಳು ಮೌಖಿಕಸಾಹಿತ್ಯ ಒಳಗೊಂಡಿದೆ. ತುಳುವಿನ ಈ ಮೌಖಿಕ ಸಾಹಿತ್ಯದ ಅನುವಾದ ತುಳುಭಾಷೆಯ ಗ್ರಂಥಸ್ಥ ನಡೆ ಮತ್ತು ಸಂಸ್ಕೃತಿಯ ರವಾನೆಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಬಹುಮುಖ್ಯ ಆಕರಗಳಾಗಿರುವುದರಿಂದ ಜಾನಪದ ಸಾಹಿತ್ಯದ

ಅನುವಾದಗಳನ್ನು ಪ್ರತ್ಯೇಕ ಅಧ್ಯಾಯವಾಗಿ ಗ್ರಹಿಸಿಕೊಳ್ಳಲಾಗಿದೆ. ೧೯೭೦ರಿಂದ ೨೦೨೦ರ ವರೆಗಿನ ಅವಧಿ ತುಳು ಪುನರುಜ್ಜೀವನದ ದೃಷ್ಟಿಯಿಂದ ಮಹತ್ವದ್ದು. ಈ ಕಾಲಘಟ್ಟದಲ್ಲಿ ಕನ್ನಡ ಮತ್ತು ಇತರ ಭಾಷೆಗಳಿಂದ ತುಳುವಿಗೆ ನಡೆದಿರುವ ಅನುವಾದಗಳನ್ನು "ಪುನರುಜ್ಜೀವನ: ಸಂವರ್ಧನೆಯ ನೆಲೆಗಳು" ಎಂಬ ಹಿನ್ನೆಲೆಯಲ್ಲಿ ನಿರೂಪಿಸಿಕೊಂಡು ಅಧ್ಯಯನ ನಡೆಸಲಾಗಿದೆ. ತುಳುವಿನಿಂದ ಕನ್ನಡ ಮತ್ತು ಇತರ ಭಾಷೆಗಳಿಗೆ ನಡೆದಿರುವ ಅನುವಾದ ಪ್ರಕ್ರಿಯೆಯನ್ನು "ತುಳು ಪುನರುಜ್ಜೀವನ: ವಿಸ್ತರಣೆಯ ನೆಲೆಗಳು" ಎಂದು ಪರಿಭಾವಿಸಿಕೊಂಡು ಪರಿಶೋಧಿಸಿಕೊಳ್ಳಲಾಗಿದೆ.

ತುಳುವಿನಿಂದ ಇತರ ಭಾಷೆಗಳಿಗೆ ನಡೆದಿರುವ ಅನುವಾದಗಳು ಮತ್ತು ಇತರ ಭಾಷೆಗಳಿಂದ ತುಳುವಿಗೆ ನಡೆದಿರುವ ಅನುವಾದಗಳು ಎಂಬ ಯೋಜಿತ ಪರಿಕಲ್ಪನೆಯಲ್ಲಿ ಕನ್ನಡದಿಂದ ತುಳುವಿಗೆ, ತುಳುವಿನಿಂದ ಕನ್ನಡಕ್ಕೆ ಮತ್ತು ತುಳುವಿನಿಂದ ಇಂಗ್ಲೀಷ್ ಭಾಷೆಗೆ ನಡೆದ ಆದಾನ–ಪ್ರದಾನವನ್ನು ಮುಖ್ಯ ಆಕರಗಳಾಗಿ ಪರಿಗಣಿಸಿಕೊಳ್ಳಲಾಗಿದೆ. ಬಂಗಾಳಿ, ಕೊಂಕಣಿ, ಮರಾಠಿ, ಕೊಡವ ಭಾಷೆಗಳು ಮತ್ತು ತುಳುವಿನ ನಡುವಿನ ಕೊಡುಕೊಳ್ಳುವಿಕೆಯನ್ನು ಈ ಭಾಷೆಗಳ ಅರಿವು ಇಲ್ಲವಾದ್ದರಿಂದ ಗುರುತಿಸಿಕೊಳ್ಳುವ ಪ್ರಯತ್ನವನ್ನಷ್ಟೇ ಮಾಡಲಾಗಿದೆ. ತುಳು ಅನುವಾದ ವ್ಯಾಪ್ತಿಯೊಳಗೆ ಬರುವ ಕೃತಿಗಳಲ್ಲಿ ಅವುಗಳ ಭಾಷಿಕ, ಸಾಂಸ್ಕೃತಿಕ ಪರಿಣಾಮವನ್ನು ಆಧರಿಸಿ ಪ್ರಾತಿನಿಧಿಕವೆಂದು ಗುರುತಿಸಿಕೊಂಡು ಅಧ್ಯಯನ ನಡೆಸಲಾಗಿದೆ. ತುಳುವಿನ ಉಪಲಬ್ಧ ಪ್ರಾಚೀನ ಕಾವ್ಯಗಳು ಅನುವಾದ ತಾತ್ವಿಕತೆ ಹಿನ್ನೆಲೆಯಲ್ಲಿ ಮರುಸೃಷ್ಟಿಯ ಭೂಮಿಕೆಯನ್ನು ನಿರ್ವಹಿಸುತ್ತದೆಯಾದರೂ, ಮೂಲ ಸಂಸ್ಕೃತ ಭಾಷೆಯ ಅರಿವಿನ ಕೊರತೆಯ ಕಾರಣದಿಂದ ಅವುಗಳ ಸಮಗ್ರ ಅಧ್ಯಯನ ನಡೆಸುವುದು ಇಲ್ಲಿ ಸಾಧ್ಯವಾಗಿಲ್ಲ.

ಆಧುನಿಕ ಸಾಹಿತ್ಯ ಪ್ರಕಾರಗಳಾದ ಕಾದಂಬರಿ, ಕವನ, ನಾಟಕ, ಸಣ್ಣಕತೆ, ಆತ್ಮಚರಿತ್ರೆ, ಆಧುನಿಕ ಕಾಲಘಟ್ಟದಲ್ಲಿ ರಚಿತವಾದ ಮಧ್ಯಕಾಲೀನ ಕನ್ನಡ ಕಾವ್ಯಗಳ ಅನುವಾದಗಳು ಈ ವಿಭಾಗದಲ್ಲಿ ಪ್ರಾತಿನಿಧಿಕ ಅಧ್ಯಯನಕ್ಕೆ ಒಳಪಡುತ್ತವೆ. ಈ ಎಲ್ಲಾ ಅಧ್ಯಯಗಳ ಓದಿಗೆ ವಿವಿಧ ಕಾಲಘಟ್ಟಗಳ ಚಾರಿತ್ರಿಕ, ಸಾಂಸ್ಕೃತಿಕ, ಸಾಮಾಜಿಕ, ರಾಜಕೀಯ ವ್ಯವಸ್ಥೆ, ಸ್ವರೂಪಗಳನ್ನು ಅರಿತುಕೊಳ್ಳಲು ದೊರೆಯುವ ಆಕರಗಳನ್ನು ಪರಿಶೀಲಿಸಲಾಗಿದೆ. ಒಟ್ಟು ಅಧ್ಯಯನಕ್ಕೆ ಪೂರಕವಾದ ಸಂಸ್ಕೃತಿ ಚಿಂತನೆಯ ಮತ್ತು ಭಾಷಾಂತರ ಅಧ್ಯಯನಕ್ಕೆ ಸಂಬಂಧಪಟ್ಟ ಬರಹಗಳನ್ನು ಪೂರಕ ಆಕರಗಳಾಗಿ ಅನುಲಕ್ಷಿಸಿಕೊಳ್ಳಲಾಗಿದೆ. ತುಳು ಅನುವಾದ ವಾಙ್ಮಯದ ಅನುಸಂಧಾನದ ತಥ್ಯಗಳನ್ನು ಗ್ರಹಿಸುವ ಈ ಅಧ್ಯಯನ ಸಮಾಜೋ–ಸಾಂಸ್ಕೃತಿಕ ಅಧ್ಯಯನದ ಪರಿಭಾಷೆಯನ್ನು ಪಡೆಯುತ್ತದೆ.

ವೈಧಾನಿಕತೆ

ಅನುವಾದ ಇಂದು ಒಂದು ಸಮರ್ಥ ಶಿಸ್ತಾಗಿ ರೂಪುಗೊಂಡಿದೆ. ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಚರಿತ್ರೆಗಳನ್ನು ಪುನರ್ ಪರಿಶೀಲಿಸುವ, ನಿರ್ವಚಿಸಬೇಕಾದ ಕಾಲದ ಬೇಡಿಕೆಗಳಿಗೆ ಭಾಷಾಂತರಗಳ ಅಧ್ಯಯನ ಸೂಕ್ತ ಸಾಧನವಾಗಿದೆ. ಭಾಷೆ ಮತ್ತು ಭಾಷಾಂತರಗಳ ಮೂಲಕ ಸಂಸ್ಕೃತಿ ಸಂರಚನೆಗೊಳ್ಳುತ್ತಾ

ಸಾಗುತ್ತದೆ. ಭಾಷಾಂತರ ಅಧ್ಯಯನಗಳ ಮೂಲಕ ಸಂಸ್ಕೃತಿಯ ಚಲನಶೀಲತೆಯನ್ನು, ಅಂತರ್–ಸಂಸ್ಕೃತಿಗಳ, ಭಾಷೆಗಳ ಸಂಪರ್ಕದ ರಾಜಕಾರಣವನ್ನು ಅಧ್ಯಯನ ಮಾಡಬಹುದಾಗಿದೆ. ಒಂದು ಭಾಷೆ ಮತ್ತು ಸಾಹಿತ್ಯ ಘಟಕದ ಬೆಳವಣಿಗೆಯ ಮೈಲುಗಲ್ಲುಗಳನ್ನು ಗುರುತಿಸುವುದಕ್ಕೆ ಭಾಷಾಂತರ ಅಧ್ಯಯನ ಸೂಕ್ತವಾಗಿದೆ.

"ತುಳು ಅನುವಾದ ವಾಙ್ಮಯ: ಸಾಂಸ್ಕೃತಿಕ ಅನುಸಂಧಾನದ ನೆಲೆಗಳು" ಎನ್ನುವ ಈ ಅಧ್ಯಯನದಲ್ಲಿ ಎರಡು ಅಧ್ಯಯನಗಳ ಸಮನ್ವಯತೆಯ ಚರ್ಚೆಗಳಿವೆ. ಒಂದು ತುಳುವಿನಿಂದ ಇತರ ಭಾಷೆಗಳಿಗೆ ಮತ್ತು ಇತರ ಭಾಷೆಗಳಿಂದ ತುಳುವಿಗೆ ಅನುವಾದಗೊಂಡು ನಿರ್ಮಾಣವಾದ ತುಳು ಅನುವಾದ ವಾಙ್ಮಯ. ಇನ್ನೊಂದು ಈ ಅನುವಾದಿತ ಪಠ್ಯಗಳು ಭಿನ್ನ ಭಾಷೆ, ಸಾಹಿತ್ಯ ಸಂಸ್ಕೃತಿಯೊಂದಿಗೆ ಅನುಸಂಧಾನ ಮಾಡಿಕೊಂಡ ನೆಲೆಗಳು. ಈ ಎರಡೂ ಪ್ರಕ್ರಿಯೆಗಳು ಒಂದನ್ನೊಂದು ಅನುವುಗೊಳಿಸುತ್ತಲೇ, ಸಿದ್ಧಗೊಳಿಸುತ್ತಲೇ ತುಳುಭಾಷೆಯ ಅಸ್ತಿತ್ವವನ್ನು, ಶಕ್ತಿಯನ್ನು ಗುರುತಿಸುತ್ತದೆಯೇ? ನಿರ್ವಹಣಾ ವ್ಯಾಪ್ತಿಯನ್ನು ವ್ಯವಸ್ಥೆಗೊಳಿಸುತ್ತದೆಯೇ? ಎಂಬ ಜಿಜ್ಞಾಸೆಯನ್ನು ಹುಟ್ಟಿಸುತ್ತದೆ. ಭಾಷೆಯ ಹೊರಗೆ ಮೂರ್ತರೂಪದಲ್ಲಿ ನಡೆಯುವ ಪ್ರಕ್ರಿಯೆಗಳು, ಭಾಷೆಯ ಒಳಗೆ ಅಮೂರ್ತ ರೂಪದಲ್ಲಿ ಅನುಸಂಧಾನವನ್ನು ಸಜ್ಜುಗೊಳಿಸಿರುವ ನಡೆಗಳನ್ನು ಚರ್ಚಿಸಲಾಗುವುದು.

ತುಳುವಿನಲ್ಲಿ ನಡೆದ ಅನುವಾದ ಪ್ರಕ್ರಿಯೆಗಳ ಮೂಲಕ ತುಳುನಾಡು ನುಡಿಯ ಸಂಕಥನವನ್ನು ಕಟ್ಟುವ ಪ್ರಯತ್ನ ಇದಾಗಿದೆ. ಒಂದು ನಿರ್ದಿಷ್ಟ ಕಾಲಘಟ್ಟದ ಅವಧಿಯಲ್ಲಿ ಅನುವಾದಗೊಂಡ ಕೃತಿಗಳನ್ನು ಮುಖ್ಯ ಆಕರಗಳನ್ನಾಗಿ ಬಳಸಿಕೊಂಡಿರುವುದರಿಂದ ಇದು ಆಕರಮುಖಿ ಸಂಶೋಧನೆಯಾಗಿದೆ. ಗ್ರಂಥಸ್ಥಗೊಂಡ ಮೌಖಿಕಸಾಹಿತ್ಯ ಮತ್ತು ಅನುವಾದಿತ ಸೃಜನಶೀಲ ಕೃತಿಗಳನ್ನು ಈ ವರ್ಗದಲ್ಲಿ ಸೇರಿಸಿಕೊಳ್ಳಲಾಗಿದೆ. ಅಧ್ಯಯನ ವ್ಯಾಪ್ತಿಯನ್ನು ನಿರ್ದಿಷ್ಟಗೊಳಿಸುವುದಕ್ಕೆ ಅನುಗುಣವಾಗಿ ಪ್ರಮುಖ ಕೃತಿಗಳನ್ನು ಪ್ರಧಾನ ಆಕರಗಳನ್ನಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಇತರ ಕೃತಿಗಳನ್ನು ಆನುಷಂಗಿಕ ಆಕರಗಳಾಗಿ ಬಳಸಿಕೊಳ್ಳಲಾಗಿದೆ. ತುಳುನಾಡು ನುಡಿಯ ಚರಿತ್ರೆ, ಸಂಸ್ಕೃತಿ ಚಿಂತನೆಯ ಬರಹಗಳು ಮತ್ತು ಭಾಷಾಂತರ ಅಧ್ಯಯನದ ಚಿಂತನೆಗಳನ್ನು ಪೂರಕ ಆಕರಗಳಾಗಿ ಇರಿಸಿಕೊಳ್ಳಲಾಗಿದೆ. ಈ ಅಧ್ಯಯನವು ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿ ಹೀಗೆ ತ್ರಿಕೋನ ಸಂಬಂಧಗಳ ಮೂಲಕ ಅಭಿವ್ಯಕ್ತವಾದ ಅನುಸಂಧಾನವನ್ನು ಗುರುತಿಸುವುದು. ಅಂತಿಮವಾಗಿ ಈ ಅಧ್ಯಯನವು ಅಂತರ್‌ಶಿಸ್ತೀಯ ಅಧ್ಯಯನವಾಗಿದೆ.

ಆಕರ ಮತ್ತು ಲಕ್ಷ್ಯಭಾಷೆಗಳ ಪದಸಂಪತ್ತು, ಶೈಲಿ, ಕಾವ್ಯಾತ್ಮಕತೆ, ಸಂಸ್ಕೃತಿ, ಸಾಂಸ್ಕೃತಿಕ ಆವರಣಗಳು ರವಾನೆಗೊಂಡ, ದುಡಿದಿರುವ ಬಗೆಗಳನ್ನು ವಿಶ್ಲೇಷಿಸುವುದು. ಆಕರ ಮತ್ತು ಲಕ್ಷ್ಯಭಾಷೆಯ ಪರಸ್ಪರ ಕೊಡುಕೊಳ್ಳುವಿಕೆಯ ವ್ಯಾಪ್ತಿಯನ್ನು ಪರಿಶೀಲಿಸುವುದು. ಲಕ್ಷ್ಯಭಾಷೆಯಲ್ಲಿ ಅನುವಾದಿತ ಕೃತಿಯ ಸ್ಥಾನಮಾನ, ಅದು ನಿರ್ವಹಿಸಿದ ಪಾತ್ರ ಇವುಗಳನ್ನು ಶೋಧಿಸುವುದು. ಆಕರ ಭಾಷೆಯ ಶಕ್ತಿ, ಸಾಮರ್ಥ್ಯ, ವಿಸ್ತಾರವನ್ನು ಗ್ರಹಿಸಿಕೊಳ್ಳುವುದು. ಚಾರಿತ್ರಿಕ ಒತ್ತಡಗಳು, ಅಗತ್ಯಗಳು, ಭಾಷೆ ಮತ್ತು ಸಾಹಿತ್ಯದ

ಬೆಳವಣಿಗೆಯಲ್ಲಿ ಮೂಡುವ ಪ್ರಕ್ರಿಯೆಗಳು, ಪಲ್ಲಟಗಳು ಮತ್ತು ಪ್ರಾದೇಶಿಕ ಸಂಸ್ಕೃತಿಯೊಂದರಲ್ಲಿ ಕಂಡುಬರುವ ಸಂಘರ್ಷ ಮತ್ತು ಎಚ್ಚರಗಳನ್ನು ವಿಶ್ಲೇಷಿಸಿಕೊಳ್ಳುವುದು ಇವುಗಳು ಅಧ್ಯಯನ ವೈಧಾನಿಕತೆಯ ಸ್ವರೂಪವಾಗಿದೆ.

ಪ್ರಧಾನವಾಗಿ ಅನುವಾದ ಸಿದ್ಧಾಂತಗಳನ್ನು ದೃಷ್ಟಿಯಲ್ಲಿರಿಸಿಕೊಂಡು ತುಳು ಅನುವಾದದಿಂದ ತುಳು ಭಾಷೆ ಮತ್ತು ಸಾಹಿತ್ಯದ ಮೇಲೆ ಉಂಟಾದ ಪರಿಣಾಮವನ್ನು ಗ್ರಹಿಸುವುದು ಮುಖ್ಯ ಗುರಿಯಾಗಿದೆ. ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಅನುವಾದ ಪ್ರಕ್ರಿಯೆಯ ಮೂಲಕ ನಡೆಯುವ ಕೊಡುಕೊಳ್ಳುವಿಕೆಯನ್ನು ವಿಶ್ಲೇಷಿಸುವುದು ಇಲ್ಲಿ ಮುಖ್ಯವಾಗಿದೆಯೇ ಹೊರತು ಅನುವಾದದ ಕೃತಿಗಳ ಮೌಲ್ಯಮಾಪನ ನಡೆಸುವುದಲ್ಲ. ತುಳುವಿನ ಚಲನಶೀಲತೆಗೆ ಅನುವಾದ ಪ್ರಕ್ರಿಯೆಗಳು ಪೂರಕವಾಗಿ ಒದಗಿ ಬಂದ ಬಗೆಯನ್ನು ಪರಿಶೀಲಿಸಲಾಗುವುದು. ತುಳುವಿನಲ್ಲಿ ನಡೆದ ಮಹತ್ವದ ಅನುವಾದಗಳನ್ನು ಲಕ್ಷಿಸಿ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಈ ಸಂಶೋಧನಾ ಅಧ್ಯಯನದಲ್ಲಿ ಅನುವಾದ ವಾಙ್ಮಯದ ಸಂಗ್ರಹಾತ್ಮಕ ಪರಿಭಾಷೆಯನ್ನು ಆನುಷಂಗಿಕವಾಗಿ ಮಾತ್ರ ಗಮನಿಸಲಾಗಿದೆ.

ಸಮೀಕ್ಷೆಯಿಂದ ಕಂಡುಕೊಂಡ ತಥ್ಯಗಳು

ಕರಾವಳಿ ಭೌಗೋಳಿಕ ಪ್ರದೇಶದಲ್ಲಿ ತುಳು ವ್ಯಾವಹಾರಿಕ ಭಾಷೆ. ಮೌಖಿಕವಾಗಿ ಸಮೃದ್ಧಿಯಾದ ಸಾಹಿತ್ಯವನ್ನು ಹೊಂದಿರುವ ಭಾಷೆ. ತುಳುವಿನಲ್ಲಿ ಅಕ್ಷರ ಸಾಹಿತ್ಯ ಒಂದು ಆಧುನಿಕ ವಿದ್ಯಮಾನ. ಈ ವಿದ್ಯಮಾನದ ಭಾಗವಾಗಿಯೇ ಅನುವಾದ ಕ್ರಿಯಾಚರಣೆ ನಡೆದಿದೆ. ಒಟ್ಟು ತುಳು ಸಾಹಿತ್ಯ ಪರಂಪರೆಯ ಭಾಗವಾಗಿಯೇ ಅನುವಾದಗಳನ್ನು ಗುರುತಿಸಲಾಗಿದೆ. ಕನ್ನಡ ಮತ್ತು ಇತರ ಭಾಷೆಗಳಿಂದ ತುಳುವಿಗೆ ನಡೆದ ಅನುವಾದಗಳು ತುಳು ಸಾಹಿತ್ಯದ ಬೆಳವಣಿಗೆಗೆ ಕಾರಣವಾಗಿದೆ. ತುಳುವಿನಿಂದ ಇತರ ಭಾಷೆಗಳಿಗೆ ನಡೆದ ಅನುವಾದಗಳಿಂದ ತುಳುವಿನ ಸಾಂಸ್ಕೃತಿಕ ಮಹತ್ವ ಮುನ್ನೆಲೆಗೆ ಬಂದಿದೆ.

ತುಳುವಿನಲ್ಲಿ ಸಮರ್ಥವಾಗಿ ಸೃಷ್ಟಿಯಾಗಿರುವ, ತುಳು ಸಾಹಿತ್ಯ ಪರಂಪರೆಯ ಬೆಳವಣಿಗೆಗೆ ಸಹಕಾರಿಯಾಗಿರುವ ಅನುವಾದ ಸಾಹಿತ್ಯದ ಕುರಿತು ಈವರೆಗೆ ಸ್ವತಂತ್ರ ಅಧ್ಯಯನ ನಡೆದಿಲ್ಲ. ತುಳುವಿನಿಂದ ಇತರ ಭಾಷೆಗಳಿಗೆ ಮತ್ತು ಬೇರೆ ಬೇರೆ ಭಾಷೆಗಳಿಂದ ತುಳುವಿಗೆ ನಡೆಸಿರುವ ಅನುವಾದ ಸಾಹಿತ್ಯವನ್ನು ಒಟ್ಟು ತುಳು ಅನುವಾದ ವಾಙ್ಮಯವೆಂದು ಪರಿಗಣಿಸಿ ಅಧ್ಯಯನ ನಡೆಸುವ ಮೂಲಕ ತುಳು ಸಾಹಿತ್ಯದ ಚರಿತ್ರೆಯನ್ನು ಅರ್ಥೈಸಿಕೊಳ್ಳಲು, ವಿಸ್ತರಿಸಿಕೊಳ್ಳಲು ಸಾಧ್ಯವಿದೆ. ತುಳು ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ನೆಲೆಗಳನ್ನು ಗುರುತಿಸಿಕೊಳ್ಳಲು ಅವಕಾಶಗಳಿವೆ.

೧ ಅನುವಾದ ಪರಿಕಲ್ಪನೆ, ತುಳು ಅನುವಾದ ವಿದ್ಯಮಾನ: ತಾತ್ವಿಕ ಪ್ರವೇಶ ಎಂಬ ಅಧ್ಯಾಯ ಸಂಪೂರ್ಣ ಸಂಶೋಧನಾ ಪ್ರಕ್ರಿಯೆಯ ತಾತ್ವಿಕ ತಳಹದಿಯಾಗಿದೆ. ಅಕ್ಷರ ಸಾಹಿತ್ಯದ ಕೊರತೆಗಳನ್ನು ತುಂಬುವುದಕ್ಕಾಗಿ ತುಳು ಭಾಷೆಯಲ್ಲಿ ನಡೆದ ಅನುವಾದವೆಂಬ ವಿದ್ಯಮಾನದ ಪ್ರೇರಣೆಗಳನ್ನು, ಒತ್ತಾಸೆಗಳನ್ನು ಇಲ್ಲಿ ಗುರುತಿಸಿಕೊಳ್ಳಲಾಗಿದೆ. ಇದಕ್ಕೆ ಪೂರಕವಾಗಿ ತುಳುನಾಡು-ನುಡಿ-ಸಂಸ್ಕೃತಿಯ

ಚಹರೆಗಳನ್ನು ವಿಶ್ಲೇಷಿಸಿಕೊಳ್ಳಲಾಗಿದೆ. ಅನುವಾದ ಪ್ರಕ್ರಿಯೆಯನ್ನು ಒಂದು ಸಂಕಥನವೆಂದು ನಿರೂಪಿಸಿಕೊಂಡು ಅನುವಾದದ ವ್ಯಾಪ್ತಿ, ನಿರ್ವಚನ ಮತ್ತು ತಾತ್ವಿಕತೆಗಳನ್ನು ಚರ್ಚಿಸಲಾಗಿದೆ.

ಪ್ರತಿಯೊಂದು ಸಮಾಜ ಸಂಸ್ಕೃತಿಯು ತನ್ನ ಜ್ಞಾನಶಾಖೆಗಳನ್ನು ನಿರೂಪಿಸುತ್ತಾ ಕಾಲದಿಂದ ಕಾಲಕ್ಕೆ ತನ್ನ ಪಥವನ್ನು ಬದಲಾಯಿಸುವ ತುಡಿತವನ್ನು ಮುಂದಿಡುತ್ತಾ ಸಾಗುತ್ತದೆ. ಈ ಬಗೆಯ ಜ್ಞಾನ ಶಾಖೆಗಳನ್ನು ಭಾಷೆ ಎಂಬ ಮಾಧ್ಯಮದ ಮೂಲಕ ಮುಂದಿಡಲಾಗುತ್ತದೆ. ಭಾಷೆಗೆ ಅಸ್ತಿತ್ವವೆನ್ನುವುದು ದಕ್ಕಬೇಕಾದರೆ ಭಾಷೆಯೊಂದು ಬಳಸಿಕೊಳ್ಳುವ ಆಕರ ಮತ್ತು ಪರಿಕರಗಳು ದೃಢವಾಗಿದ್ದು ಗ್ರಾಂಥಿಕ ಸ್ವರೂಪದ ಸಹಜ ಅಸ್ಮಿತೆಗಳನ್ನು ತನ್ನ ಜ್ಞಾನ ಶಾಖೆಯೊಳಗೆ ಅಡಕಗೊಳಿಸುತ್ತಾ ಸಾಗಬೇಕು. ಆಕರಗಳ ಸಮಷ್ಟಿಯ ಅಡಕವು, ಕಾಲ ಮತ್ತು ದೇಶವನ್ನು ಮೀರಿ ನಿಂತು ರೂಪಿಸಿದಾಗಲೇ ವಾಙ್ಮಯವೆಂಬ ಸಮಷ್ಟಿಯ ಜ್ಞಾನ ಮೀಮಾಂಸೆಯು ರೂಪುಗೊಳ್ಳುತ್ತದೆ. ಹಾಗೆ ರೂಪುಗೊಳ್ಳುವಾಗ ಅನೇಕಾಂತ ಪ್ರಕ್ರಿಯೆಗಳಿಗೆ ಒಳಗಾಗಬೇಕಾಗುತ್ತದೆ. ಭಾಷೆ ಭಾಷೆಗಳ ತರತಮಭಾವವನ್ನು ನೀಗಿಸುವ ವಿಶ್ವಪಥದ ಸಾಪೇಕ್ಷ ಚಲನೆಯ ಆಯ್ಕೆಯನ್ನು ಅನುವಾದ ಎಂಬ ಆಧುನಿಕ ಪರಿಭಾಷೆಯು ಮುಂದಿಡುತ್ತದೆ.

ಭಾಷಾಂತರ ಪ್ರಕ್ರಿಯೆಯಲ್ಲಿನ ಜ್ಞಾನದ ನಿರ್ಮಾಣ ಮತ್ತು ರವಾನೆ ರಾಜಕಾರಣ, ಸ್ಥಳೀಯತೆ ಮತ್ತು ಅನನ್ಯತೆಯನ್ನು ಕಾಯ್ದುಕೊಳ್ಳುವಿಕೆ, ಹೊಸ ಸೃಷ್ಟಿ ಮತ್ತು ಚಲನಶೀಲತೆ, ಆಧುನಿಕತೆ ಮತ್ತು ಪರಂಪರೆಯ ಸಮನ್ವಯತೆ, ಪ್ರಮಾಣಭಾಷೆಯ ನಿರ್ಮಾಣ, ಪರಂಪರೆಯ ಮರುಕಸಿ, ಅಧಿಕಾರದ ಸರಕು ಮತ್ತು ಪ್ರತಿನಿಧಿ, ಕೊರತೆ ನೀಗುವಿಕೆ, ಸ್ವೀಕಾರ ಭಾಷೆಯ ಔದಾರ್ಯತೆ, ಸಾಂಸ್ಕೃತಿಕ ವಿನಿಮಯತೆ, ಸಾಂಸ್ಕೃತಿಕ ಇಕ್ಕಟ್ಟು ಮತ್ತು ಬಿಕ್ಕಟ್ಟುಗಳನ್ನು ದಾಟುವ ಅನುವಾದಕರ ವೈಯಕ್ತಿಕ ಮತ್ತು ಸಮಕಾಲೀನ ಒತ್ತಡಗಳ ಫಲಶ್ರುತಿಯೆಂಬಂತೆ ವರ್ತಿಸುತ್ತ ಒಂದು ಸಂಕಥನವೆನ್ನಿಸಿಕೊಂಡಿದೆ.

ಅನುವಾದ ಸಂಕಥನವನ್ನು ಇಲ್ಲಿ ವಾದ ವಾಗ್ವಾದವಾಗಿಯೂ, ಚೈತನ್ಯಪೂರ್ಣವಾದ ಸಿದ್ಧಾಂತದ ವಿನಿಮಯವಾಗಿಯೂ, ಭಾಷೆಯ ಶಕ್ತಿಯುತವಾದ ಸಂವರ್ಧನೆಯ ಕಾರ್ಯರೂಪಿ ನಿಲುವು ಎಂಬ ಮೂರು ಅಂಶಗಳಲ್ಲಿ ಚರ್ಚಿಸಿಕೊಳ್ಳಲಾಗಿದೆ. ಪರಿಣಾಮಕಾರಿಯಾದ ಸಾಂಗತ್ಯವಲ್ಲದ ಸಾಂಗತ್ಯವನ್ನು ನಿರೂಪಿಸುವ ರೂಪಕವಾಗಿಯೂ ಅನುವಾದವನ್ನು ನೋಡಬಹುದು ಎಂಬುದನ್ನು ಕಂಡುಕೊಳ್ಳಲಾಗಿದೆ.

ತುಳುನಾಡು – ನುಡಿ – ಸಂಸ್ಕೃತಿ – ಸಾಹಿತ್ಯದ ಚಾರಿತ್ರಿಕತೆಯ ಹಿನ್ನೆಲೆಯಲ್ಲಿ ತೌಳವ ಅಸ್ತಿತ್ವವನ್ನು ನಿರ್ವಚಿಸಿಕೊಳ್ಳಲಾಗಿದೆ. ತುಳುನಾಡು – ಕನ್ನಡ ನುಡಿಯ ಚಾರಿತ್ರಿಕ ಬೆಳವಣಿಗೆಯಲ್ಲಿ ತುಳು ಪ್ರಬಲ ಜನಭಾಷೆಯಾಗಿ ಗುರುತಿಸಿಕೊಂಡಿರುವ ಆಯಾಮಗಳನ್ನು ವಿಶ್ಲೇಷಿಸಿಕೊಳ್ಳಲಾಗಿದೆ. ಅಕ್ಷರ ಸಾಹಿತ್ಯದ ಕೊರತೆಯ ನಡುವೆಯೂ ತುಳು ಮೌಖಿಕಸಾಹಿತ್ಯ ಪರಂಪರೆಯ ಸಮೃದ್ಧಿಯನ್ನು ಈ ಅಧ್ಯಾಯದಲ್ಲಿ ಗುರುತಿಸಿಕೊಳ್ಳಲಾಗಿದೆ.

ಬಹುಭಾಷಿಕ ಪರಿಸರದಲ್ಲಿ ಅನುವಾದ ಪ್ರಕ್ರಿಯೆ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಶಬ್ದಗಳನ್ನು ಜೋಡಿಸುವ ಕಾರ್ಯ ಮಾತ್ರ ಆಗಿ ಉಳಿದಿರುವುದಿಲ್ಲ. ಆ ಪರಿಸರದಲ್ಲಿನ ಸಾಂಸ್ಕೃತಿಕ, ರಾಜಕೀಯ ಅಥವಾ ಸಮಷ್ಠಿ ಜ್ಞಾನದ ಪ್ರತಿನಿಧಿಯಾಗಿಯೋ, ವಿವಿಧ ಅಸ್ಮಿತೆ, ಅನನ್ಯತೆಗಳ

ಉತ್ಪನ್ನವಾಗಿಯೋ, ಹಕ್ಕುಗಳ ಚಲಾವಣೆಯ ಅಹವಾಲಿನಲ್ಲಿಯೋ ಎಂಬ ನೆಲೆಗಳಲ್ಲಿ ಅನುವಾದಗಳೆಂಬ ಭಾಷಿಕ ರೂಪ ಜನ್ಮ ತಳೆಯುತ್ತದೆ. ತುಳು ಅನುವಾದ ವಾಙ್ಮಯ ನಿರ್ಮಾಣದ ಹಿಂದಿನ ಒತ್ತಾಸೆಗಳನ್ನು ಅಧ್ಯಯನದ ಸೌಕರ್ಯಕ್ಕಾಗಿ ವಸಾಹತುಪೂರ್ವ. ವಸಾಹತು ಕಾಲಘಟ್ಟ ಮತ್ತು ವಸಾಹತೋತ್ತರ ಕಾಲಘಟ್ಟಗಳಲ್ಲಿ ಗುರುತಿಸಿಕೊಳ್ಳಲಾಗಿದೆ.

ವಸಾಹತು ಎಷ್ಟರ ಮಟ್ಟಿಗೆ ಪ್ರಭುತ್ವವನ್ನು ಪ್ರತಿಪಾದಿಸಿ ತನ್ನ ಕಕ್ಷೆಯೊಳಗೆ ಎಲ್ಲವನ್ನೂ ಸ್ವಾಧೀನಪಡಿಸಿಕೊಳ್ಳುವ ಮುತುವರ್ಜಿಯನ್ನು ತೋರಿಸುತ್ತಿತ್ತೋ, ಅಷ್ಟರ ಮಟ್ಟಿಗೆ ತನ್ನ ಸಮಾಜ ಮತ್ತು ಸಂಸ್ಕೃತಿಯನ್ನು ಅಭಿವೃದ್ಧಿಯ ಅಥವಾ ಬದಲಾವಣೆಯ ದಾಕ್ಷಿಣ್ಯಕ್ಕೆ ಗುರಿಪಡಿಸುತ್ತದೆ. ಸಮಾಜ, ಸಂಸ್ಕೃತಿ ಮತ್ತು ಸಾಹಿತ್ಯದಲ್ಲಿ ಬದಲಾವಣೆಯನ್ನು ತರಲಾಗುವುದೆಂಬ ನಂಬಿಕೆಯನ್ನು ಸದಾ ಕಾಪಿಟ್ಟುಕೊಳ್ಳುತ್ತ, ಅದಕ್ಕಾಗಿ ಪೂರ್ವದವರು ಪಶ್ಚಿಮದವರನ್ನು ಅನುಸರಿಸುವಂತೆ ಮತ್ತು ಅವರ ಜ್ಞಾನಮಿಮಾಂಸೆಯನ್ನು ಒಪ್ಪಿಕೊಳ್ಳುವಂತೆ ಮಾಡುತ್ತದೆ. ಜೊತೆಯಲ್ಲಿಯೇ ವಸಾಹತು ನೆಲೆಗಳಲ್ಲಿ ಅಸ್ತಿತ್ವದ ಗುರುತುಗಳನ್ನು ಜಾಗೃತಗೊಳಿಸುತ್ತದೆ. ಈ ಕಾಲಘಟ್ಟದ ತುಳು ಅನುವಾದದ ಚಲನೆಗಳನ್ನು ಕ್ರೈಸ್ತ ಮತ ಪ್ರಚಾರ ಮತ್ತು ವಸಾಹತು ವಿಸ್ತರಣೆಯ ಒಂದು ರೂಪದಲ್ಲಿ ಮತ್ತು ತುಳು ಚಳುವಳಿಯ ಮಗದೊಂದು ಚಹರೆಯಲ್ಲಿಯೂ ಗುರುತಿಸಲಾಗಿದೆ.

ವಸಾಹತೋತ್ತರ ಕಾಲಘಟ್ಟದಜಾಗತೀಕರಣದ ಸಂದರ್ಭದಲ್ಲಿ ಪ್ರಾದೇಶಿಕ ಭಾಷೆಗಳು, ಜನಭಾಷೆಗಳು ಎದುರಿಸುತ್ತಿರುವ ಗುರುತಿನ ಬಿಕ್ಕಟ್ಟುಗಳ ನಡುವೆ ತುಳುವಿನಂತಹ ಜನಭಾಷೆ ತನ್ನ ಅನನ್ಯತೆಯನ್ನು ಸ್ಥಾಪಿಸಿಕೊಳ್ಳುವ, 'ಸ್ವ'ವನ್ನು ಗಟ್ಟಿಗೊಳಿಸಿಕೊಳ್ಳುವ ನಿಲುವುಗಳನ್ನು ಹೊಂದಿದೆ. ತುಳು ಭಾಷೆಗೆ ಕನ್ನಡದಿಂದ ಮುಕ್ತಗೊಳಿಸಿಕೊಂಡ ಅಸ್ತಿತ್ವ ಇಲ್ಲ ಎಂಬ ಭ್ರಮೆಯನ್ನು, ಈಗಾಗಲೇ ಸ್ಥಾಪಿಸಿರುವ ಭಾಷಾ ರಾಜಕಾರಣಗಳನ್ನು ಒಡೆಯುವ ಆಕಾಂಕ್ಷೆ ಈ ಕಾಲಘಟ್ಟದಲ್ಲಿ ಕಂಡುಬರುತ್ತದೆ. ಪ್ರಾದೇಶಿಕ ಭಾಷೆಗಳನ್ನು ನಿರಸನಗೊಳಿಸುವ, ಅಲ್ಲಿನ ಸಾಹಿತ್ಯ, ಸಂಸ್ಕೃತಿಯ ಅಸ್ತಿತ್ವ ಮತ್ತು ಅಸ್ಮಿತೆಯನ್ನು ಗಣನೆಗೆ ತೆಗೆದುಕೊಳ್ಳದ ಹುನ್ನಾರಗಳನ್ನು ಬುಡಮೇಲು ಮಾಡಬೇಕಾದರೆ ತುಳುವಿನಂತಹ ಭಾಷೆ ತನ್ನ ಸಾಹಿತ್ಯಿಕ ಚಹರೆಗಳನ್ನು ಹೆಚ್ಚು ಸ್ಪಷ್ಟಗೊಳಿಸಿಕೊಳ್ಳಬೇಕಾದ ಅನಿವಾರ್ಯತೆಗೆ ಪೂರಕವಾಗಿ ತುಳುವಿನಲ್ಲಿ ವಸಾಹತೋತ್ತರ ಕಾಲಘಟ್ಟದಲ್ಲಿ ಅನುವಾದಗಳು ಕಂಡುಬರುತ್ತವೆ.

೨ ಮಿಶನರಿ ಅನುವಾದಗಳು ಎಂಬ ಅಧ್ಯಾಯದಲ್ಲಿ ಆಧುನಿಕ ಪರಿಭಾಷೆಯ ಅನುವಾದ ಪರಿಕಲ್ಪನೆ ತುಳುವಿನಲ್ಲಿ ಆರಂಭವಾದುದು ಬಾಸೆಲ್ ಮಿಶನರಿಗಳಿಂದ ಎಂಬುದನ್ನು ಗುರುತಿಸಿಕೊಳ್ಳಲಾಗಿದೆ. ಈ ಅಧ್ಯಾಯದಲ್ಲಿ ವಸಾಹತುಶಾಹಿಯ ಸ್ಥಳೀಕರಣ, ಮಿಶನರಿಗಳ ಧಾರ್ಮಿಕ ನಿರ್ವಹಣೆಗಳು, ರಾಷ್ಟ್ರೀಯತೆಯ ಉಗಮ, ಪ್ರಾದೇಶಿಕ ಅಸ್ಮಿತೆಗಳ ನಿರ್ಮಿತಿ, ಆಧುನಿಕತೆಯ ಚಲನೆ ಇತ್ಯಾದಿಗಳ ಜೊತೆಯಲ್ಲಿ ಮಿಶನರಿಗಳ ತುಳು ಅನುವಾದ ಸಂಕಥನವನ್ನು ವಿಶ್ಲೇಷಿಸಿಕೊಳ್ಳಲಾಗಿದೆ. ಮಿಶನರಿಗಳಿಂದ ತುಳು ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಅಧ್ಯಯನದ ಹೊಸ ಅಧ್ಯಾಯವೇ ತುಳುವಿನಲ್ಲಿ ತೆರೆದುಕೊಳ್ಳುವುದಕ್ಕೆ ಸಾಧ್ಯವಾಗಿರುವುದನ್ನು ಇಲ್ಲಿ ಗುರುತಿಸಿಕೊಳ್ಳಲಾಗಿದೆ. ಮಿಶನರಿಗಳು ನಡೆಸಿದ

ಭಾಷಾಂತರಗಳು ಧಾರ್ಮಿಕ ಮತ್ತು ಸಂಸ್ಕೃತಿಗೆ ಸಂಬಂಧಿಸಿದವುಗಳಾಗಿವೆ. ಮಿಶನರಿಗಳ ತುಳು ಸಾಹಿತ್ಯಿಕ, ಸಾಂಸ್ಕೃತಿಕ ಕೆಲಸಗಳನ್ನು ಒಟ್ಟಾಗಿ ಮಿಶನರಿ ಅನುವಾದ ಮೀಮಾಂಸೆಯ ನೆಲೆಯಲ್ಲಿ ಪರಿಗಣಿಸಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಮಿಶನರಿಗಳ ಅನುವಾದ ಚಟುವಟಿಕೆಗಳಿಗೆ ಪೂರಕವಾಗಿ ನಿರ್ಮಿಸಿಕೊಂಡ ಪರಿಕರಗಳು ತುಳುವಿನಲ್ಲಿ ಭಾಷೆ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದವುಗಳಾಗಿವೆ. ಮಿಶನರಿಗಳ ಅನುವಾದ ತಾತ್ವಿಕತೆಯನ್ನು ಅರ್ಥೈಸಿಕೊಳ್ಳುವ ದೃಷ್ಟಿಯಿಂದ ಈ ಪೂರಕ ಸಾಮಾಗ್ರಿಗಳನ್ನು ಇಲ್ಲಿ ವಿಶ್ಲೇಷಿಸಿಕೊಳ್ಳಲಾಗಿದೆ. ಕ್ರೈಸ್ತ ಧಾರ್ಮಿಕ ಕೃತಿಗಳು ಪರಿಷ್ಕೃತ ಭಾಷಾಂತರಗಳಲ್ಲಿ ಬದಲಾವಣೆ ಹೊಂದಿದ ಸ್ವರೂಪವನ್ನು ಇಲ್ಲಿ ಗುರುತಿಸಿಕೊಳ್ಳಲಾಗಿದೆ.

ಅನುವಾದಿತ ಕೃತಿಯೊಂದು ಧಾರ್ಮಿಕ ಉದ್ದೇಶ ಮತ್ತು ಸಾಹಿತ್ಯಿಕ, ಸಾಂಸ್ಕೃತಿಕ ಉದ್ದೇಶಗಳ ಹಿನ್ನೆಲೆಯಲ್ಲಿ ಅನುವಾದಗೊಳ್ಳುವಾಗ ಹೊಂದುವ ವ್ಯತ್ಯಾಸ ಮತ್ತು ಪರಿಣಾಮಗಳನ್ನು ಉದಾಹರಣೆಗಳ ಮೂಲಕ ತೌಲನಿಕವಾಗಿ ವಿವೇಚಿಸಿಕೊಳ್ಳಲಾಗಿದೆ. ಮಿಶನರಿ ಅನುವಾದಗಳಲ್ಲಿ ತುಳು ಭಾಷೆ ಅಭಿವ್ಯಕ್ತಿಗೊಂಡ ಕ್ರಮಗಳನ್ನು ನಿರ್ವಚಿಸಿಕೊಳ್ಳಲಾಗಿದೆ.

ತನ್ನನ್ನು ತಾನು ಪುರೋಗಾಮಿಯೆಂದು ಗ್ರಹಿಸಿಕೊಳ್ಳುವ ಪಶ್ಚಿಮ, ಪೂರ್ವವನ್ನು ತಾವು ಆಳುವ ಹಕ್ಕು ಹೊಂದಿದೆಯೆಂದು ಮತ್ತು ಪೂರ್ವ ತನ್ನ ಅವೈಜ್ಞಾನಿಕತೆಯಿಂದ, ಅಜ್ಞಾನದಿಂದ ಹಿಂದುಳಿದಿದೆ, ಅನಾಗರಿಕವೆಂದು ಗ್ರಹಿಸುತ್ತದೆ. ತಮ್ಮ ಅಧಿಕಾರಶಾಹಿತ್ವವನ್ನು ಸಮರ್ಥಿಸಿಕೊಳ್ಳುವ ವಸಾಹತುಶಾಹಿತ್ವಕ್ಕೆ ಆಯಾ ವಸಾಹತು ದೇಶಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಮಿಶನರಿಗಳು ಸಮನ್ವಯ ಭಾವವನ್ನು ತಳೆದಿದ್ದರು. ಸಾಂಸ್ಕೃತಿಕ ಮತ್ತು ವೈಚಾರಿಕ ಯಾಜಮಾನ್ಯದ ಈ ಕೆಲಸಗಳನ್ನು ವಸಾಹತು ಮನೋಭಾವಕ್ಕೆ ಪೂರಕವಾಗಿ ಮಿಶನರಿಗಳು ವ್ಯವಸ್ಥಿತವಾಗಿ ನಡೆಸಿಕೊಂಡು ಬಂದಿರುವುದು ತುಳು ಭಾಷೆಯಲ್ಲಿ ನಡೆಸಿದ ಅನುವಾದ ಚಟುವಟಿಕೆಗಳಿಂದ ವ್ಯಕ್ತವಾಗುತ್ತದೆ. ಮಿಶನರಿಗಳ ತುಳು ಅನುವಾದ ಕಾರ್ಯಗಳಲ್ಲಿ ತುಳು ನಾಡಿನ ಬ್ರಾಹ್ಮಣರು ಸಹಾಯಕರಾಗಿ ಕೆಲಸ ಮಾಡಿರುವುದನ್ನು ಅನುವಾದಗಳ ಭಾಷಿಕ, ಸಾಂಸ್ಕೃತಿಕ ಚಹರೆಗಳಲ್ಲಿ ಕಂಡುಕೊಳ್ಳಲಾಗಿದೆ. ತುಲನಾತ್ಮಕವಾಗಿ ಗಮನಿಸಿಕೊಂಡಾಗ ಮಿಶನರಿಗಳು ಕನ್ನಡಕ್ಕೆ ತುಳುವಿನ ಭಾಷಿಕ ಚಟುವಟಿಕೆಗಳಿಗಿಂತ ಹೆಚ್ಚು ಪ್ರಾಶಸ್ತ್ಯ ಕೊಟ್ಟಿರುವುದಕ್ಕೆ ಕಾರಣಗಳನ್ನು ಗುರುತಿಸಿಕೊಳ್ಳಲಾಗಿದೆ.

ಭೂತಾರಾಧನೆಯ ಮೌಖಿಕ ನೆಲೆಗಳು ಪಠ್ಯವಾಗಿ ಘನೀಭವಿಸಿಕೊಳ್ಳುವುದು, ಇಂಗ್ಲೀಷ್ ಭಾಷೆಗೆ ಅನುವಾದಗೊಳ್ಳುವುದು ಮಿಶನರಿಗಳಿಗೆ ಮಾನವಶಾಸ್ತ್ರೀಯ ಪಠ್ಯವಾಗಿ ಮುಖ್ಯವಾಗುತ್ತದೆ. ಭೂತಾರಾಧನೆಯನ್ನು ತಾಂತ್ರಿಕವಾಗಿ, ಸಾಂಸ್ಕೃತಿಕವಾಗಿ, ಭಾಷಿಕವಾಗಿ, ಧಾರ್ಮಿಕವಾಗಿ ಒಳಗೊಳ್ಳುವ ವರ್ಗವನ್ನು ಅರ್ಥೈಸಿಕೊಳ್ಳುವುದಕ್ಕೆ, ಹಕ್ಕು ಚಲಾಯಿಸುವುದಕ್ಕೆ, ನಿಯಂತ್ರಿಸುವುದಕ್ಕೆ, ತಮ್ಮ ಮತಾಂತರದ ಧಾರ್ಮಿಕ ಉದ್ದೇಶವನ್ನು ಈಡೇರಿಸಿಕೊಳ್ಳುವುದಕ್ಕೆ ಪೂರಕವಾಗುತ್ತದೆ. ಭಾಷಾವಿಜ್ಞಾನ ಮತ್ತು ಸಂಸ್ಕೃತಿ ವಿಜ್ಞಾನಗಳನ್ನು ಬಳಸಿಕೊಂಡು ತುಳುವಿನಲ್ಲಿನ ಮೌಖಿಕ ಪರಂಪರೆಯನ್ನು ಪಠ್ಯೀಕೃತಗೊಳಿಸುವುದಕ್ಕೆ ಪ್ರಯತ್ನಿಸುತ್ತಾರೆ. ಸ್ಥಳೀಯ ಮೌಖಿಕ ಭಾಷೆ, ಸಂಸ್ಕೃತಿಗಳು ಲಿಖಿತಪಠ್ಯಸ್ವರೂಪದಲ್ಲಿ ವಸಾಹತುಶಾಹಿ ಐಡಿಯಾಲಜಿ ಮತ್ತು ಧಾರ್ಮಿಕ – ಸಾಂಸ್ಕೃತಿಕ ವಾಹಕಗಳಾಗಿ ದುಡಿಯುತ್ತವೆ. ಮಿಶನರಿಗಳ ಅನುವಾದ

ಕೇವಲ ತುಳು ಭಾಷೆ, ಸಂಸ್ಕೃತಿ, ಸಾಹಿತ್ಯದ ಅನುವಾದ ಮಾತ್ರವಾಗಿ ಉಳಿಯದೇ ತುಳು ಸಂಸ್ಕೃತಿಯ ಮೌಲ್ಯಮಾಪನವನ್ನು ನಿರ್ವಹಿಸುತ್ತದೆ. ಮಿಶನರಿಗಳ ಅನುವಾದ ಪ್ರಕ್ರಿಯೆ ಪಶ್ಚಿಮವನ್ನು ಪೂರ್ವಕ್ಕೆ ಅನುವಾದಿಸುವುದು ಮಾತ್ರವಲ್ಲ, ಪೂರ್ವವನ್ನು ಪೂರ್ವಕ್ಕೆ ಅನುವಾದಿಸುವುದು ಕೂಡ ಆಗಿದೆ ಎಂಬುದನ್ನು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

ವಸಾಹತುಶಾಹಿಯ ಹುನ್ನಾರ ಮತ್ತು ಮಿಶನರಿಗಳ ಮತೀಯ ಉದ್ದೇಶಗಳನ್ನು ಮೀರಿಯೂ ತುಳು ಭಾಷಾ ಅಭಿವೃದ್ಧಿಯಲ್ಲಿ ಕ್ರೈಸ್ತ ಮಿಶನರಿಗಳ ಕೊಡುಗೆ ಮಹತ್ವದ್ದು. ತುಳು ಗ್ರಂಥಸ್ಥ ಸಾಹಿತ್ಯದ ನಿರ್ಮಾಣಕ್ಕೆ, ತುಳು ಚಳುವಳಿಯ ಸ್ವರೂಪವೊಂದು ಪ್ರಾರಂಭಗೊಳ್ಳುವುದಕ್ಕೆ ಮಿಶನರಿಗಳ ಅನುವಾದ ಚಟುವಟಿಕೆಗಳು ಪ್ರೇರಕ ಶಕ್ತಿಯಾಗಿವೆ. ಆಡುಭಾಷೆಯಾಗಿದ್ದ ತುಳು ಮಿಶನರಿ ಕಾಲದಲ್ಲಿ ಗ್ರಾಂಥಿಕ ಭಾಷೆಯ ರೂಪ ಪಡೆಯಿತು.ಶೈಕ್ಷಣಿಕ ಭಾಷೆಯಾಗಿ ಕನ್ನಡ ಬಳಕೆಯಲ್ಲಿರುವಾಗ ಲಿಪಿಯ ಬಗ್ಗೆ ತಲೆಕೆಡಿಸಿಕೊಳ್ಳದೇ ಕನ್ನಡ ಲಿಪಿಯಲ್ಲಿ ತುಳುವಿನಲ್ಲಿ ಭಾಷಾಂತರ ಕಾರ್ಯಗಳನ್ನು ಕೈಕೊಂಡದ್ದು ತುಳು ಭಾಷೆಯ ಅಭಿವೃದ್ಧಿಯ ದೃಷ್ಟಿಯಿಂದ ಮಹತ್ವದ್ದಾಗಿದೆ. ಭಾಷೆ ಸಾಹಿತ್ಯ, ಸಂಸ್ಕೃತಿಯ ಕೆಲಸಗಳೂ ನಡೆಯಿತು. ತುಳುವನ್ನು ಶೈಕ್ಷಣಿಕ ಭಾಷೆಯಾಗಿ ನೋಡುವ ಪ್ರಯತ್ನ ನಡೆಯಿತು. ಅದಕ್ಕಾಗಿ ಪಠ್ಯ ಪುಸ್ತಕಗಳ ರಚನೆಯಾಯಿತು. ಒಂದು ಭಾಷೆಗೆ ಯಾವುದೇ ಲಿಪಿ ಬಳಸಬಹುದು ಎಂಬ ಆಧುನಿಕ ಮನೋಭಾವ ಮಿಶನರಿಗಳಿಂದ ದೊರೆಯಿತು. ಬೈಬಲ್ ಅನುವಾದದಿಂದ ತುಳುವಿನಲ್ಲಿ ಗದ್ಯದ ವಿಕಾಸ ನಡೆಯಿತು.

ಮಿಶನರಿಗಳು ತುಳುಭಾಷೆಗೆ ಗ್ರಾಂಥಿಕ ಸ್ವರೂಪ ನೀಡಿದ ಫಲವಾಗಿ ಮೌಖಿಕ ಕಥಾನಕಗಳು ಅಕ್ಷರಿಕ ಪಠ್ಯದ ರೂಪು ಪಡೆದು ತುಳುಚರಿತ್ರೆಯನ್ನು ನಿರ್ಮಿತಿ ಮಾಡುವ ಪ್ರಯತ್ನಗಳಾಗಿವೆ. ಇದರಿಂದ ತುಳುನಾಡು–ನುಡಿ ತಮ್ಮ ಅನನ್ಯತೆಯನ್ನು ಹುಡುಕಿಕೊಳ್ಳುವುದಕ್ಕೆ, ಕಟ್ಟಿಕೊಳ್ಳುವುದಕ್ಕೆ ಸಾಧ್ಯವಾಯಿತು. ಸಾಂಸ್ಕೃತಿಕ ತುಳುನಾಡೊಂದರ ಪರಿಕಲ್ಪನೆಯನ್ನು ತುಳುವರಲ್ಲಿ ಮೂಡಿಸಿ ತಮ್ಮ ಸಂಸ್ಕೃತಿ ಮತ್ತು ಭಾಷೆಯ ಜೊತೆಗೆ ಅನುಸಂಧಾನ ನಡೆಸುವ ಮನಸ್ಥಿತಿಯೊಂದನ್ನು ಬೆಳೆಸಿ, ಕನ್ನಡನಾಡಿನ ಒಳಗಿನ ತುಳುವರಿಗೆ ಒಂದು ಪ್ರತ್ಯೇಕ ಜನಾಂಗೀಯ, ಭಾಷಿಕ ಐಡೆಂಟಿಟಿಯನ್ನು ಮಿಶನರಿ ಅನುವಾದಗಳು ಒದಗಿಸುತ್ತವೆ ಎಂಬುದನ್ನು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

೩. **ಯಕ್ಷಗಾನ ಅನುವಾದಗಳು** ಎಂಬ ಅಧ್ಯಾಯ ತುಳುನಾಡಿನ ವೈಶಿಷ್ಟ್ಯಪೂರ್ಣವಾದ ರಂಗಪ್ರಭೇದಗಳಲ್ಲಿ ಪ್ರಮುಖವಾದ ಯಕ್ಷಗಾನದಲ್ಲಿ ನಡೆದ ಅನುವಾದ ಪ್ರಕ್ರಿಯೆಯ ಅಧ್ಯಯನಕ್ಕೆ ಮೀಸಲಾಗಿದೆ. ತುಳುನಾಡಿನ ಅತ್ಯಂತ ಜನಪ್ರಿಯ ಕಲೆಯಾಗಿ, ಶತಮಾನಗಳಿಂದ ಜನಪ್ರಿಯವಾಗಿದ್ದರೂ ತುಳು ಯಕ್ಷಗಾನ ರೂಪುಗೊಂಡದ್ದು ೨೦ನೇ ಶತಮಾನದ ಕೊನೆಯ ದಶಕಗಳಲ್ಲಿ. 'ತುಳುತಿಟ್ಟು' ಎಂದೇ ಗುರುತಿಸಿಕೊಳ್ಳುವಂತೆ ನಿರ್ಮಾಣ ಹೊಂದಿದ ತುಳು ಯಕ್ಷಗಾನದ ಆರಂಭ ಅನುವಾದ ಕೃತಿಯಿಂದಲೇ ಎಂಬುದನ್ನು ಗಮನಿಸಿಕೊಳ್ಳಬೇಕು. ಯಕ್ಷಗಾನದಂತಹ ಜನಪ್ರಿಯ ಮಾಧ್ಯಮದಲ್ಲಿ ತುಳುವಿನ ಮೊದಲ ಅನುವಾದ ಕೃತಿ ಕಾಣಿಸಿಕೊಳ್ಳುವುದು ಮತ್ತು ಕೃತಿ ರಚನೆಯ ಹಲವು ದಶಕಗಳ ನಂತರ ಆ ಕೃತಿ

ಪ್ರದರ್ಶನಸ್ವರೂಪಿ ನಡೆಯಾಗಿ ಜೀವಂತಗೊಳ್ಳುವುದು ತುಳುವಿನ ಭಾಷಿಕ, ಸಾಂಸ್ಕೃತಿಕ ಚಲನೆಯ ಆಯಾಮಗಳನ್ನು ಅಧ್ಯಯನ ಮಾಡುವುದಕ್ಕೆ ಅವಕಾಶಗಳನ್ನು ನೀಡುತ್ತದೆ.

ಬಾಯಾರು ಪೆರುವಾಡಿ ಸಂಕಯ್ಯ ಭಾಗವತರ 'ಪಂಚವಟಿ ರಾಮಾಯಣ : ವಾಲಿ ಸುಗ್ರೀವೆರೆ ಕಾಳಗೊ' (೧೮೮೭) ದಿಂದ ಆರಂಭವಾಗಿ, ೧೯೩೦ರ ದಶಕಗಳಲ್ಲಿನ ತುಳು ಚಳುವಳಿಯ ಕಾಲಘಟ್ಟದಲ್ಲಿನ ನಾಡು–ನುಡಿಯ ಅಸ್ಮಿತೆಯ ಹುಡುಕಾಟದ ಉತ್ತರಗಳಾಗಿ ಹುಟ್ಟಿದ ಪ್ರಜ್ಞಾಪೂರ್ವಕ ಅನುವಾದ ಸಂಹಿತೆಗಳಿಂದ ಮುಂದುವರಿದು, ೧೯೭೦ರ ನಂತರದಲ್ಲಿ ತುಳುವಿನ ಸ್ಥಳೀಯ ಕಥಾನಕಗಳು ಅಳವಡಿಕೆ ಮತ್ತು ರೂಪಾಂತರಗಳನ್ನು ಹೊಂದುವ ಮೂಲಕ ತುಳು ಯಕ್ಷಗಾನ ಅನುವಾದ ಮೀಮಾಂಸೆ ರೂಪುಗೊಂಡಿದೆ.

ತುಳು ಯಕ್ಷಗಾನದ ಅನುವಾದ ಪಠ್ಯಗಳನ್ನು ಅನುವಾದದ ಸಂದರ್ಭ, ಸ್ವರೂಪ, ಶೈಲಿ, ಪ್ರಭಾವ, ಪ್ರೇರಣೆ ಮತ್ತು ಪರಿಣಾಮಗಳ ದೃಷ್ಟಿಯಿಂದ ಸಾಹಿತ್ಯಿಕಪಠ್ಯ ಮತ್ತು ರಂಗಪಠ್ಯವಾಗಿ ಗ್ರಹಿಸಲು ಅವಕಾಶಗಳಿವೆ. ಈ ಎರಡೂ ರೂಪಗಳು ನಿರ್ವಹಿಸಿದ ಬಾಧ್ಯತೆ ಒಂದೇ ಆದರೂ ಅನುವಾದದ ತಾತ್ವಿಕತೆ ಭಿನ್ನವಾಗಿದೆ ಎಂದು ಗುರುತಿಸಿಕೊಳ್ಳಲಾಗಿದೆ.

ತುಳು ಯಕ್ಷಗಾನ ಅನುವಾದಗಳು ಸ್ಥಿರೀಕರಣಕ್ಕಿಂತಲೂ ಸಂದರ್ಭಕ್ಕೆ ತಕ್ಕಂತೆ ಪರಿಷ್ಕರಣ ಮತ್ತು ವಿಸ್ತರೀಕರಣದಲ್ಲಿ ಸೃಜನಶೀಲವಾಗಿವೆ. ಕನ್ನಡ ಯಕ್ಷಗಾನಗಳು ಮುಖ್ಯವಾಗಿ ಪುರಾಣ ಕೇಂದ್ರಿತವಾದವುಗಳು. ತುಳು ಪ್ರಸಂಗಗಳು ಜಾನಪದ, ಇತಿಹಾಸ, ಸಾಮಾಜಿಕ, ಕಾಲ್ಪನಿಕ ಆಧಾರವಾದುದು. ಪೌರಾಣಿಕ ತಳಹದಿಯಲ್ಲಿ ಅನುವಾದಗೊಂಡ ತುಳು ಪ್ರಸಂಗಗಳಲ್ಲಿ ಮೂಲ ನಿಷ್ಠೆಗಿಂತಲೂ ಸೃಜನಶೀಲ ಅನುವಾದ ಮೀಮಾಂಸೆಯನ್ನು ಗುರುತಿಸಲಾಗಿದೆ.

ಕನ್ನಡ ಪರಂಪರೆಯ ಪೌರಾಣಿಕ ಪ್ರಸಂಗಗಳು ಯಕ್ಷಗಾನವನ್ನು ಸಮಗ್ರ ಧಾರ್ಮಿಕ, ಸಾಂಪ್ರದಾಯಿಕ ರಂಗಕೃತಿಯೆಂಬ ಮನೋಧರ್ಮವನ್ನು ಹೊಂದಿದ್ದರೆ, ಆಧುನಿಕ ತುಳು ಯಕ್ಷಗಾನ ಅನುವಾದಗಳು ರಂಗಪ್ರದರ್ಶನ ಮತ್ತು ನಿಶ್ಚಿತವಾದ ವಾಣಿಜ್ಯ ಉದ್ದೇಶ ಸಾಧನೆಯ ಆಯಾಮಗಳನ್ನು ಹೊಂದಿವೆ. ರಂಗಪಠ್ಯವೊಂದು ಸೃಜನಶೀಲ ಪಠ್ಯವಾಗಿ ರೂಪಾಂತರಗೊಳ್ಳುತ್ತ ಸಾಗುವಾಗ ಅದು ನಿಧಾನಕ್ಕೆ ಲಿಖಿತ ಸಾಹಿತ್ಯದ ಇಚ್ಛೆಯನ್ನು ಮೂಡಿಸುತ್ತಾ ಸಾಗುತ್ತದೆ ಎಂಬುದನ್ನು ಇಲ್ಲಿಯ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

೪ ಜಾನಪದ ಅನುವಾದಗಳು ಎಂಬ ಅಧ್ಯಾಯದಲ್ಲಿ ತುಳುವಿನ ಮೌಖಿಕ ಕಥಾನಕಗಳ ಅನುವಾದ ಪ್ರಕ್ರಿಯೆಯನ್ನು ಚರ್ಚಿಸಿಕೊಳ್ಳಲಾಗಿದೆ. ಆಧುನಿಕತೆ ಜನಪದ ಉತ್ಪನ್ನಗಳನ್ನು ಪಠ್ಯಗಳನ್ನಾಗಿಸಿದೆ. ಸಾಂದರ್ಭಿಕ ಅಗತ್ಯಗಳಿಗೆ, ವೈಚಾರಿಕ ಪ್ರಜ್ಞೆಗೆ ಅನುಗುಣವಾಗಿ ಸಂಕಥನವಾಗಿ ಜಾನಪದ ರೂಪುಗೊಳ್ಳುತ್ತಿದೆ. ತಾತ್ವಿಕತೆಗಳನ್ನು ರವಾನಿಸುತ್ತಿದೆ. ಜಾನಪದ ಇಂದು ಪರಂಪರಾಗತವಾದ ಜ್ಞಾನವಾಗಿ ಮಾತ್ರ ಉಳಿಯದೇ ಆಧುನಿಕ ವಿವಿಧ ಅರ್ಥವಿನ್ಯಾಸಗಳೊಂದಿಗೆ ಪುನರ್‌ನಿರ್ಮಿತವಾಗುತ್ತಿದೆ. ತುಳು ಪಾರಂಪಾರಿಕ ಸಮಾಜ ಉತ್ಪಾದಿಸಿದ ಪಾಡ್ದನಗಳು ಕಥಾನಕಗಳಾಗಿ ವಿಭಿನ್ನ ಸನ್ನಿವೇಶಗಳಲ್ಲಿ, ವಿಭಿನ್ನ

ಮಾದರಿಗಳಲ್ಲಿ, ಮಾಧ್ಯಮಗಳಲ್ಲಿ ಪುನಾರಚನೆಗೊಳ್ಳುತ್ತಿವೆ. ನಾಟಕ, ಯಕ್ಷಗಾನ, ಸಿನಿಮಾಗಳಂತಹ ರಂಗ ಮಾಧ್ಯಮ ಅಲ್ಲದೆಯೇ, ಕತೆ, ಕಾದಂಬರಿ, ಕವಿತೆಗಳಂತಹ ಸಾಹಿತ್ಯಿಕ ಮಾಧ್ಯಮಗಳಲ್ಲಿ ಮರುರೂಪುಗೊಳ್ಳುತ್ತ ಸಾಗುತ್ತಿದೆ.

ಮೌಖಿಕಸಾಹಿತ್ಯ ಲಿಪೀಕರಣ ಮತ್ತು ಪಠ್ಯೀಕರಣದಿಂದ ಆರಂಭಗೊಂಡು ಲಿಖಿತ ಭಾಷೆಗೆ ರೂಪಾಂತರ, ಸಂಗ್ರಹಾನುವಾದ, ಭಾವಾನುವಾದ, ಸಂಕ್ಷೇಪಿಕರಣ, ಸಾರಾಂಶೀಕರಣ, ಅಳವಡಿಕೆ ಹೀಗೆ ವರ್ಗಾವಣೆಗೊಳ್ಳುತ್ತ ತುಳು ಜಾನಪದ ಅನುವಾದ ಸಂಕಥನವೊಂದು ನಿರ್ಮಾಣವಾಗಿದೆ. ತುಳು ಜಾನಪದ ಪಠ್ಯಗಳ ಮೂಲಕ, ಮೌಖಿಕ ಕಥಾನಕಗಳ ಮೂಲಕ ಸ್ಥಳೀಯ ಜ್ಞಾನಪರ್ವಗಳನ್ನು ಜಗತ್ತಿನ ಜ್ಞಾನದೊಂದಿಗೆ ಇರಿಸಿಕೊಂಡು ಸಂಕಥನಗಳನ್ನು, ವಾಗ್ವಾದಗಳನ್ನು ನಿರ್ವಚಿಸಿಕೊಳ್ಳಲಾಗಿದೆ.

ತುಳುವಿನ ಜಾನಪದ ಸಾಹಿತ್ಯದ ಸಂರಚನೆಗಳು ವಿವಿಧ ಅಧ್ಯಯನ ಶಿಸ್ತುಗಳಿಗೆ ಅನುಗುಣವಾಗಿ ವ್ಯಾಪಕವಾಗಿ ಅಧ್ಯಯನಕ್ಕೆ ಒಳಗಾಗಿದೆ. ತಳ ಸಮುದಾಯಗಳ ಅಧ್ಯಯನ, ಪ್ರತಿ ಸಂಸ್ಕೃತಿ, ಉಪಸಂಸ್ಕೃತಿ, ಪರ್ಯಾಯ ಸಂಸ್ಕೃತಿ ಅನ್ನುವ ಅಧ್ಯಯನಗಳಿಗೆ ತುಳು ಜಾನಪದ ಪರಂಪರೆ ಒದಗಿ ಬಂದಿದೆ. ತುಳು ಪಾಡ್ದನಗಳನ್ನು ಬೇರೆ ಬೇರೆ ಕಾಲಘಟ್ಟಗಳಲ್ಲಿ ವಿವಿಧ ಜಾನಪದ ಸಿದ್ಧಾಂತ, ವ್ಯಾಖ್ಯೆಗಳಡಿಯಲ್ಲಿ ಅಧ್ಯಯನ ನಡೆಸಲಾಗಿದೆ. ಈ ಅಧ್ಯಯನಗಳ ವಿಶ್ಲೇಷಣೆಯ ಸಂದರ್ಭದಲ್ಲಿ ಬೇರೆ ಬೇರೆ ಭಾಷೆಗಳಿಗೆ ಅನುವಾದಿಸಿಕೊಳ್ಳಲಾಗಿದೆ. ತುಳುನಾಡಿನಲ್ಲಿ ಬಹಳ ಮುಖ್ಯವಾಗಿ ಅಧ್ಯಯನಕ್ಕೆ ಒಳಗೊಂಡ ಪಾಡ್ದನಗಳು 'ಸಿರಿ' ಮತ್ತು 'ಕೋಟಿಚೆನ್ನಯ್ಯ'. 'ಸಿರಿ' ಸಂಧಿಯ ಭಾಷಾಂತರವನ್ನು ಪ್ರಾತಿನಿಧಿಕವಾಗಿ ಇರಿಸಿಕೊಂಡು ತುಳು ಜಾನಪದದ ಬಹುಶಿಸ್ತೀಯ ತಾತ್ವಿಕ ಭಿತ್ತಿಗಳನ್ನು ಇಲ್ಲಿ ವಿಶ್ಲೇಷಿಸಿಕೊಳ್ಳಲಾಗಿದೆ.

'ಸಿರಿ' ಜನಪದ ಮಹಾಕಾವ್ಯದ ಅಧ್ಯಯನಕ್ಕೆ ಹಲವು ಆಯಾಮಗಳು ಒದಗಿಬಂದಿವೆ. ಸ್ತ್ರೀವಾದಿ ಅಧ್ಯಯನ, ಸಂಸ್ಕೃತಿ ಅಧ್ಯಯನ, ಮಾನವಶಾಸ್ತ್ರ, ಭಾಷಾವಿಜ್ಞಾನ, ಮನಶಾಸ್ತ್ರ, ಸಮಾಜಶಾಸ್ತ್ರ,ಜಾನಪದ ಸಿದ್ಧಾಂತ ಹೀಗೆ ಬಹುಮುಖಿ ನೆಲೆಯ ಅಧ್ಯಯನದ ಸಂದರ್ಭಗಳಲ್ಲಿ ಈ ಕಾವ್ಯ ಸಂಪೂರ್ಣವಾಗಿ ಮತ್ತು ಆಂಶಿಕವಾಗಿ ಕನ್ನಡ, ಇಂಗ್ಲೀಷ್ ಮತ್ತು ಜರ್ಮನ್ ಭಾಷೆಗೆ ಅನುವಾದಗೊಂಡಿದೆ. ಇದು ಪದಶಃ ಅನುವಾದ, ಭಾವಾನುವಾದ, ಸಂಗ್ರಹಾನುವಾದ, ಆಂಶಿಕ ಅನುವಾದಗಳ ಸ್ವರೂಪಗಳಲ್ಲಿ ನಡೆದಿದೆ. 'ಸಿರಿ' ಪಠ್ಯ ಬಹುಪಠ್ಯಗಳು, ಮಾನಸಿಕ ಪಠ್ಯ, ಸೃಜನಶೀಲ ಪಠ್ಯಗಳ ಹಿನ್ನೆಲೆಯಲ್ಲಿ ಮೌಖಿಕ ಸೂತ್ರಾತ್ಮಕ ಸಿದ್ಧಾಂತಗಳ ಪರಿಶೀಲನೆಗೆ ಒದಗಿಬಂದಿರುವುದನ್ನು ಗುರುತಿಸಿಕೊಳ್ಳಲಾಗಿದೆ. ಪಠ್ಯಗಳನ್ನು ಸೃಷ್ಟಿಸಿಕೊಂಡ ಸಂದರ್ಭ ಮತ್ತು ಆರಾಧನೆಯ ಪ್ರದರ್ಶನಗಳಲ್ಲಿ ಮರುಸೃಷ್ಟಿಗೊಂಡ ಭಿನ್ನಭಿನ್ನ ಪಠ್ಯಗಳನ್ನು ಸ್ವತಂತ್ರ ಮತ್ತು ಅನನ್ಯ ಪಠ್ಯಗಳೆಂಬಂತೆ ಪರಿಗಣಿಸಬೇಕೆಂಬ ನಿಲುವು ಈ ಅಧ್ಯಯನಗಳಿಂದ ವ್ಯಕ್ತವಾಗಿರುವುದನ್ನು ಕಂಡುಕೊಳ್ಳಲಾಗಿದೆ.

ಪ್ರಭುತ್ವದ ಬೆಂಬಲವಿಲ್ಲದ ತುಳುವಿನಂತಹ ಜನಭಾಷೆ ತನ್ನ ಅಸ್ತಿತ್ವವನ್ನು ತನ್ನ ಜಾನಪದೀಯ ನೆಲೆಗಳಲ್ಲಿನ ಸಾಂಸ್ಕೃತಿಕ ಅನನ್ಯತೆಯ ಮೂಲಕ ಕಂಡುಕೊಳ್ಳಲಾರಂಭಿಸಿತು. ತುಳು ಪಾಡ್ದನ, ಗಾದೆ, ಜನಪದ ಕತೆ, ಕಬಿತೆಗಳನ್ನು ಶೋಧಿಸಿಕೊಳ್ಳುತ್ತಾ ಅವುಗಳನ್ನು ಇತರ ಭಾಷೆಗಳಿಗೆ ಅನುವಾದಿಸಿಕೊಳ್ಳುತ್ತ

ಚಲನಶೀಲವಾಗುವ ಪ್ರಯತ್ನವನ್ನು ಮಾಡಲಾರಂಭಿಸಿತು. ಈ ಪ್ರಕ್ರಿಯೆ ತುಳುವಿನಿಂದ ಕನ್ನಡ ಭಾಷೆಗೆ, ತುಳುವಿನಿಂದ ಇಂಗ್ಲೀಷ್‌ಗೆ ನಡೆದಿದೆ. ಈ ವಿಭಾಗದಲ್ಲಿ ಮಲೆಯಾಳಂನಿಂದ ತುಳುವಿಗೆ ಮತ್ತು ಫಿನ್ನಿಶ್ ಭಾಷೆಯಿಂದ ತುಳುವಿಗೆ ಅನುವಾದಗೊಂಡ ಕೃತಿಗಳನ್ನು ಪರಿಶೀಲಿಸಿಕೊಳ್ಳಲಾಗಿದೆ. ತುಳುವಿನಂತಹ ಅಪಾರ ಮೌಖಿಕ ಸಂಪತ್ತುಳ್ಳ, ಆದರೆ ಚರಿತ್ರೆಯಲ್ಲಿ ದಾಖಲಾಗದ ಭಾಷೆಗೆ ಸ್ಥಾನಮಾನವನ್ನು ಒದಗಿಸಿಕೊಡುವ ಪ್ರಯತ್ನ 'ಕಲೇವಾಲ'ದಂತಹ ಕಾವ್ಯದ ತುಳು ಭಾಷಾಂತರದಲ್ಲಿ ಕಾಣುತ್ತದೆ ಎಂಬುದನ್ನು ಇಲ್ಲಿ ಚರ್ಚಿಸಿಕೊಳ್ಳಲಾಗಿದೆ.

ಬಹುರೂಪಿ ಜಾನಪದ ಪ್ರಕ್ರಿಯೆ ಸಾಹಿತ್ಯಿಕ, ವೈಚಾರಿಕ, ಸಾಮಾಜಿಕ ಮಗ್ಗುಲುಗಳಲ್ಲಿ ಅಧ್ಯಯನಕ್ಕೆ ಒದಗಿ ಬರುತ್ತ ವಿವಿಧ ಸಮುದಾಯಗಳ ಒಳಗೆ ಮತ್ತು ಸಮುದಾಯಗಳ ಹೊರಗೆ ಸಂಬಂಧಗಳನ್ನು ರೂಪಿಸುವ ಸಾಂಸ್ಕೃತಿಕ ಶಕ್ತಿಯಾಗಿದೆ. ವರ್ತಮಾನದಲ್ಲಿ ಜಾನಪದ ವಿವಿಧ ಆವರಣಗಳಲ್ಲಿನ ತನ್ನ ಅನನ್ಯತೆಗಳನ್ನು ಸಂವಾದ ಮತ್ತು ಸಂವಹನಗಳಿಗೆ ತೆರೆದುಕೊಳ್ಳುತ್ತ ಸಂಬಂಧಗಳನ್ನು ನಿರ್ಮಿಸಿಕೊಳ್ಳುತ್ತಿವೆ. ತುಳು ಜಾನಪದದ ವಿವಿಧ ಪ್ರಕಾರಗಳು ಮತ್ತು ಇತರ ಭಾಷೆಯ ಜಾನಪದ ಕೃತಿಗಳು ಪರಸ್ಪರ ಅನುವಾದಗೊಳ್ಳುತ್ತ, ಅಧ್ಯಯನ ಪರಿಕರವಾಗುತ್ತ ಜಾಗತಿಕವಾಗಿ ವಿಸ್ತಾರಗೊಳ್ಳುತ್ತಿದೆ. ಈ ಅನುವಾದಗಳ ಬಹುರೂಪಿ ಆಯಾಮಗಳು ಸಾಂಸ್ಕೃತಿಕ ಸಂಕಥನವೊಂದನ್ನು ಜಾಗತಿಕ ನೆಲೆಯಲ್ಲಿ ನಿರ್ಮಿಸುತ್ತಿದೆ. ಇಲ್ಲಿ ತುಳುವಿನಿಂದ ಇಂಗ್ಲೀಷಿಗೆ ನಡೆದ ತುಳು ಜನಪದ ಮಹಾಕಾವ್ಯ, ಜನಪದ ಗೀತೆಗಳು, ಜನಪದ ಕತೆಗಳ ಅನುವಾದಗಳನ್ನು ಪರಿಶೀಲಿಸಿಕೊಳ್ಳಲಾಗಿದೆ. ಮಲೆಯಾಳಂನಿಂದ ತುಳುವಿಗೆ ಅನುವಾದಗೊಂಡಿರುವ ಪಾಡ್ದನವೊಂದನ್ನು ವಿವೇಚಿಸಿಕೊಳ್ಳಲಾಗಿದೆ. ಈ ಅನುವಾದ ಕೃತಿಗಳ ತಾತ್ವಿಕತೆಯನ್ನು ವಿಶ್ಲೇಷಿಸಿಕೊಳ್ಳಲಾಗಿದೆ.

ಜಾನಪದವು ಸಮುದಾಯಗಳ ಒಳಗೆ ಮತ್ತು ಹೊರಗೆ ಜಾಗತಿಕವಾಗಿ ಸಂಬಂಧಗಳನ್ನು ನಿರ್ಮಿಸುವ, ಬೆಸೆಯುವ ಜ್ಞಾನಶಿಸ್ತುಗಳು ಎಂಬ ಅರಿವು ಈ ಅನುವಾದಗಳನ್ನು ಪ್ರಭಾವಿಸಿರುದನ್ನು ಕಂಡುಕೊಳ್ಳಲಾಗಿದೆ. ಜಾನಪದ ಅನುವಾದ ಪ್ರಕ್ರಿಯೆ ಮೊದಲ ಹಂತದಲ್ಲಿ ತುಳುವಿನಿಂದ ಕನ್ನಡ ಮತ್ತು ಇಂಗ್ಲೀಷ್‌ಗೆ ಸಂಗ್ರಹದ ಮಾದರಿಯಲ್ಲಿ, ನಂತರ ತುಳು ಅನನ್ಯತೆಯ ನೆಲೆಗಳನ್ನು ಶೋಧಿಸುವ ಮಾದರಿಯಲ್ಲಿ ನಡೆದಿದೆ. ತುಳು ಜಾನಪದವನ್ನು ದೇಸಿ ಮತ್ತು ತುಳು ಚರಿತ್ರೆಯ ಅಧ್ಯಯನದ ಹಿನ್ನೆಲೆಯಲ್ಲಿ, ವಿಶ್ಲೇಷಣಾತ್ಮಕ ಮಾದರಿಯಲ್ಲಿ ಪಾಶ್ಚಾತ್ಯ ಜಾನಪದ ಅಧ್ಯಯನದ ಮಾದರಿಯಲ್ಲಿ, ಸಂಶೋಧನಾತ್ಮಕ ವಿಧಿಗಳ ಮಾದರಿಯಲ್ಲಿ, ನಡೆಸಲಾಗಿದೆ. ಈ ಅನುವಾದಗಳು ಸ್ಥಳೀಯತೆಯನ್ನು, ಪ್ರಾದೇಶಿಕತೆಯನ್ನು ಪರಿಧಿಯಿಂದ ಕೇಂದ್ರಕ್ಕೆ ತರುವ ಆಶಯವುಳ್ಳದ್ದು. ಬಹುರೂಪಿ ಜಾನಪದ ಪ್ರಕ್ರಿಯೆಗಳಲ್ಲಿ ತನ್ನ ಸಾಂಸ್ಕೃತಿಕ ಅನನ್ಯತೆಯನ್ನು ಶೋಧಿಸಿಕೊಂಡ ತುಳು, ಕನ್ನಡ ಭಾಷೆಗೆ ಅನುವಾದದ ಮೂಲಕ ವಿನಿಮಯಗೊಳ್ಳುವುದರಿಂದ ಕನ್ನಡದ ಆವರಣದೊಳಗಿನ ತುಳು ಮುಂಚಲನೆಗೊಳ್ಳಬೇಕು ಎಂಬ ನಿಲುವು ಈ ಅನುವಾದಗಳ ಹಿಂದಿನ ತಾತ್ವಿಕತೆಯಾಗಿದೆ ಎಂಬುದನ್ನು ಕಂಡುಕೊಳ್ಳಲಾಗಿದೆ.

ತುಳು ಮೌಖಿಕ ಪರಂಪರೆಯ ಒಟ್ಟು ಅನುವಾದ ಪ್ರಕ್ರಿಯೆಯನ್ನು ಹೀಗೆ ಗ್ರಹಿಸಿಕೊಳ್ಳಬಹುದಾಗಿದೆ – ವಸಾಹತು ಕಾಲಘಟ್ಟದಲ್ಲಿ ತಮ್ಮ ಸಾಮ್ರಾಜ್ಯಶಾಹಿತ್ವವನ್ನು ಸ್ಥಾಪಿಸುವ ಹುನ್ನಾರದಿಂದಾಗಿ ತುಳು ಸಂಸ್ಕೃತಿಯನ್ನು ಸಂಗ್ರಹಿಸಿ, ಶೋಧಿಸಿ, ಅನುವಾದಿಸಿ ಮಿಶನರಿಗಳು ಭೂತರಾಧನೆಯನ್ನು 'ಡೆವಿಲ್ ವರ್‌ಶಿಪ್' ಎಂದು ಅನುವಾದಿಸುವ ಮೂಲಕ ಪೂರ್ವವನ್ನು ಪಶ್ಚಿಮದ ವೈಚಾರಿಕತೆ ಮತ್ತು ವೈಜ್ಞಾನಿಕತೆಯ ಎದುರು ಹೀನಾಯಿಸಿ ನೋಡಿದರು.

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿನ ರಾಷ್ಟ್ರೀಯತೆಯ ಹೋರಾಟ ಮತ್ತು ಪ್ರಾದೇಶಿಕ ಭಾಷೆ, ಸಂಸ್ಕೃತಿಗಳ ಅನನ್ಯತೆಯನ್ನು ಶೋಧಿಸುವ ಸಂದರ್ಭದಲ್ಲಿ ತುಳು ರಾಷ್ಟ್ರೀಯತೆಯ ಸ್ಫೂರ್ತಿಯಾಗಿ, ಅನನ್ಯತೆಯ ಸಂಕೇತವಾಗಿ ಜಾನಪದವನ್ನು ಅನುವಾದಿಸಿಕೊಳ್ಳಲಾಯಿತು.

ಕನ್ನಡ ಭಾಷೆಯೊಳಗೆ ತುಳುವಿನ ಸಾಮರ್ಥ್ಯವನ್ನು, ತುಳು ಜಗತ್ತನ್ನು ಪ್ರವೇಶ ಮಾಡಿಸಿ ತುಳುವಿನ ಸಾಮರ್ಥ್ಯವನ್ನು ಗುರುತಿಸುವ ಮತ್ತು ಕನ್ನಡ ಜಗತ್ತನ್ನು ವಿಸ್ತಾರಗೊಳಿಸುವ ನಿಟ್ಟಿನಲ್ಲಿ ತುಳುವಿನಿಂದ ಕನ್ನಡಕ್ಕೆ ಜಾನಪದದ ಅನುವಾದಗಳು ನಡೆದಿವೆ.

ತುಳುವಿನಿಂದ ಇಂಗ್ಲೀಷ್‌ಗೆ ನಡೆದ ಅನುವಾದಗಳು ತುಳುವಿಗೆ ಜಾಗತಿಕ ಮನ್ನಣೆಯನ್ನು ಒದಗಿಸುವ, ತುಳುವನ್ನು ಶೈಕ್ಷಣಿಕ ಅಧ್ಯಯನದ ಪಠ್ಯವಾಗಿ ಬಳಸುವ ಉದ್ದೇಶವುಳ್ಳದ್ದು. ತುಳುವಿನಂತಹ ಜನಭಾಷೆಯಲ್ಲಿನ ಅರಿವಿನ ವಿಸ್ತಾರವನ್ನು, ಜ್ಞಾನದ ಮರುಮಂಡಣೆಯ ಆಶಯವನ್ನು ಹೊಂದಿರುವಂತಹುದು ಆಗಿದೆ.

೫ ಪುನರುಜ್ಜೀವನ: ಸಂವರ್ಧನೆಯ ನೆಲೆಗಳು ಎಂಬ ಅಧ್ಯಾಯದಲ್ಲಿ ತುಳು ಪುನರುಜ್ಜೀವನದ ಆಶಯಕ್ಕೆ ತಕ್ಕಂತೆ ನಡೆದ ಅನುವಾದ ಪ್ರಕ್ರಿಯೆಯಲ್ಲಿ ಕನ್ನಡ ಮತ್ತು ಇತರ ಭಾಷೆಗಳಿಂದ ತುಳುವಿಗೆ ನಡೆದ ಅನುವಾದಗಳನ್ನು ವಿಶ್ಲೇಷಿಸಿಕೊಳ್ಳಲಾಗಿದೆ. ಈ ಅನುವಾದ ಚಟುವಟಿಕೆಗಳಿಂದ ತುಳು ಭಾಷೆ, ಸಾಹಿತ್ಯ ಸಂವರ್ಧನೆಯಾದುದನ್ನು ಗುರುತಿಸಿಕೊಳ್ಳಲಾಗಿದೆ. ವಸಾಹತು ಕಾಲಘಟ್ಟದಲ್ಲಿ ಹುಟ್ಟಿಕೊಂಡ ಅಸ್ಮಿತೆಯ ಪ್ರಜ್ಞೆ ವಸಾಹತೋತ್ತರ ಕಾಲಘಟ್ಟದಲ್ಲಿ ಗಟ್ಟಿಯಾಗಿ ಪ್ರಾದೇಶಿಕ ಸಾಹಿತ್ಯ ರಾಷ್ಟ್ರಸಾಹಿತ್ಯವಾಗಿ, ವಿಶ್ವಸಾಹಿತ್ಯವಾಗಿ ಹರಡಬೇಕೆಂಬುದು ಪ್ರತಿಯೊಂದು ಭಾಷಿಕ ಸಮುದಾಯದೊಳಗೆ ಹುಟ್ಟಿಕೊಂಡ ಆಶಯವಾಗಿದೆ. ತುಳು ಕೂಡ ಇದಕ್ಕೆ ಹೊರತಾಗಿಲ್ಲ. ಹತ್ತೊಂಬತ್ತನೆಯ ಶತಮಾನದ ಕೊನೆಯ ದಶಕಗಳಲ್ಲಿ ಆರಂಭಗೊಂಡು ಇಪ್ಪತ್ತನೇಯ ಶತಮಾನದ ಈ ಕಾಲಘಟ್ಟ ತುಳು ಭಾಷೆ, ಸಾಹಿತ್ಯದ ಸಮೃದ್ಧತೆಯ ದೃಷ್ಟಿಯಿಂದ ಪುನರುಜ್ಜೀವನ ಕಾಲಘಟ್ಟ. ತುಳು ಜಾನಪದ ಸಂಶೋಧನೆ ಮತ್ತು ಅಧ್ಯಯನ ಇದಕ್ಕೆ ಪೂರಕವಾಗಿ ಬಂದು ತುಳು ಸಾಹಿತ್ಯದ ಅರುಣೋದಯವಾಗಿದೆ. ಸಂಸ್ಕೃತಿಯ ಬೇರುಗಳ ಹುಡುಕಾಟ ಮತ್ತು ಸಾಹಿತ್ಯವನ್ನು ಜನಮಾನಸಕ್ಕೆ ಮುಟ್ಟಿಸುವ ಸಾಂಸ್ಕೃತಿಕ ನಿಲುವು ಇದಕ್ಕೆ ಜೊತೆಯಾಗಿವೆ. ವಸಾಹತು ಕಾಲಘಟ್ಟದಲ್ಲಿ ಸಾಂಸ್ಕೃತಿಕ ಒತ್ತಡದ ಕಾರಣದಿಂದ ನಡೆದ ಪುನರುಜ್ಜೀವನದ ಚಟುವಟಿಕೆಗಳು ವಸಾಹತೋತ್ತರ ಕಾಲಘಟ್ಟದಲ್ಲಿ ಸಾಂಸ್ಕೃತಿಕ ಅಪೇಕ್ಷೆಯ ರೂಪ ತಳೆದಿದೆ.

ತುಳುಪ್ರಜ್ಞೆಯ ಉದ್ದೀಪನ ಮತ್ತು ತುಳುತನವೆಂಬ ಅನನ್ಯತೆಯ ಭಾವ ತುಳುವರನ್ನು ಸಾಂಸ್ಕೃತಿಕವಾಗಿ ಒಂದುಗೂಡಿಸಿ ಸಾಹಿತ್ಯಿಕ ಗುರುತುಗಳನ್ನು ಸೃಷ್ಟಿಸಿಕೊಳ್ಳುವಂತೆ ಮಾಡಿದೆ. ಮೌಖಿಕ ರೂಪದಲ್ಲಿದ್ದ ಪಾಡ್ದನ, ಗಾದೆ, ಎದುರು ಕತೆ, ಸಂಧಿ ಇತ್ಯಾದಿಗಳನ್ನು ಜಾನಪದ ಸಾಹಿತ್ಯವಾಗಿ ಗುರುತಿಸುವುದು, ತುಳುವಿನ ಪ್ರಾಚೀನ ಕಾವ್ಯಗಳನ್ನು ಹುಡುಕುವುದು, ತುಳುವಿಗೊಂದು ಲಿಪಿ ಇತ್ತೆಂದು ಸಾಧಿಸುವುದು ಹಾಗೂ ಈ ಪ್ರಕ್ರಿಯೆಗಳ ಮೂಲಕ ತುಳುವಿಗೊಂದು ಸಾಹಿತ್ಯ ಪರಂಪರೆಯನ್ನು ಕಟ್ಟುವುದು ಮುಂತಾದ ಕ್ರಿಯೆಗಳು ವಸಹಾತುಶಾಹಿ ನಂತರದಲ್ಲಿ ತುಳುವಿನಲ್ಲಿ ನಡೆಯುತ್ತದೆ. ತುಳು ಭಾಷೆಯಲ್ಲಿನ ಅಕ್ಷರಸಾಹಿತ್ಯದ ಕೊರತೆಗಳನ್ನು ತುಂಬುವುದಕ್ಕಾಗಿಯೇ ೧೯೭೦ರ ಕಾಲಘಟ್ಟದ ನಂತರ ಅನುವಾದ ಚಟುವಟಿಕೆಗಳು ಕ್ರಿಯಾಶೀಲವಾಗಿ ನಡೆದವು.

ವಸಾಹತು ಕಾಲಘಟ್ಟದಲ್ಲಿ ದೇಶದ ಸ್ವಾತಂತ್ರ್ಯದ ವಿಷಯ ಮಾತ್ರವಲ್ಲ ತುಳುವಿನ ಆಂತರಿಕ ಬದುಕಿನ ಸ್ವಾತಂತ್ರ್ಯದ ವಿಚಾರ ಮುನ್ನೆಲೆಗೆ ಬಂದು ತುಳು ಭಾಷೆಯ ಕುರಿತಾದ ಸಂಕುಚಿತ ದೃಷ್ಟಿ ನಾಶವಾಗಿ ಪುನರುಜ್ಜೀವನದ ಭಾವನಾತ್ಮಕ ಮನೋಭಾವ ಬೆಳೆಯಿತು. ಈ ಮನೋಭಾವವೇ ತುಳು ಸಾಹಿತ್ಯ ಮತ್ತು ಸಾಹಿತ್ಯೇತರ ಕೃತಿಗಳ ರಚನೆಗೆ ಮುಖ್ಯ ಶಕ್ತಿ ಮತ್ತು ಆಧಾರ. ೨೦ನೇ ಶತಮಾನದ ಕೊನೆಯ ದಶಕಗಳಲ್ಲಿ ಕಾಣಿಸಿಕೊಂಡ ತುಳು ಭಾಷಿಕ – ಸಾಹಿತ್ಯಿಕ ಅಧ್ಯಯನ, ತುಳು ಜಾನಪದದ ಶೈಕ್ಷಣಿಕ ದಾಖಲೀಕರಣ ಮತ್ತು ಅಧ್ಯಯನ, ಮಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದಲ್ಲಿ ತುಳು ಅಧ್ಯಯನದ ಅವಕಾಶ, ಆಕಾಶವಾಣಿಯಲ್ಲಿ ತುಳು ಕಾರ್ಯಕ್ರಮ ಪ್ರಸಾರ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರದ ಆರಂಭ, ತುಳು ನಿಘಂಟು ಯೋಜನೆ, ತುಳು ಸಾಹಿತ್ಯ ಅಕಾಡೆಮಿಯ ಸ್ಥಾಪನೆ, ಕನ್ನಡ ವಿಶ್ವವಿದ್ಯಾಲಯ ಹಂಪಿ ಮತ್ತು ಮದ್ರಾಸ್ ವಿಶ್ವವಿದ್ಯಾಲಯಗಳಲ್ಲಿ ತುಳು ಭಾಷೆಯ ಕುರಿತು ಸಂಶೋಧನೆಗೆ ಅವಕಾಶ, ತುಳು ಪ್ರಾಚೀನ ಕಾವ್ಯಗಳ ಉಪಲಬ್ಧತೆ ಮತ್ತು ಪ್ರಕಟಣೆ ಹಾಗೂ ತುಳು ಸಮ್ಮೇಳನ, ಉತ್ಸವ, ಸಂಮಾನ, ತುಳು ದಿನಾಚರಣೆ, ಕಮ್ಮಟ, ವಿಚಾರಗೋಷ್ಠಿ ಇತ್ಯಾದಿಗಳು ತುಳುವಿಗೆ ಪ್ರೇರಣಾತ್ಮಕವಾಗಿ ಒದಗಿ ಬಂದವು. ಜಾಗತಿಕವಾಗಿ ನಡೆಯುತ್ತಿರುವ ಭಾಷಿಕ ಎಚ್ಚರ ಮತ್ತು ರಾಜಕಾರಣದ ಆಯಾಮಗಳು ತುಳುವಿಗೂ ದೊರಕಿದ್ದರಿಂದ ತುಳು ಕೂಡ ಶಾಸ್ತ್ರೀಯ ಸ್ಥಾನಮಾನದ ಸಂವಿಧಾನಾತ್ಮಕ ಮಾನ್ಯತೆಯ ನಿರೀಕ್ಷೆಯನ್ನು ಮುಂದಿಟ್ಟಿತ್ತು. ಈ ನಿರೀಕ್ಷೆಗಳಿಗೆ ಅಗತ್ಯ ಮಾಪನವಾಗಿ ಸಾಹಿತ್ಯಿಕ ರುಜುವಾತುಗಳು ಅಗತ್ಯವೆಂಬುದು ಖಚಿತರೂಪ ಪಡೆಯಿತು. ಆಕ್ಷರಿಕ ಸಾಹಿತ್ಯದ ಮಾದರಿಗಳನ್ನು ಕನ್ನಡ ಮತ್ತು ಇತರ ಭಾಷೆಗಳಿಂದ ಅನುವಾದ ರೂಪದಲ್ಲಿ ಪಡೆಯಲಾಯಿತು.

ತುಳುವಿಗೆ ಕನ್ನಡ ಮತ್ತು ಇತರ ಭಾಷೆಗಳಿಂದ ಅನುವಾದಗೊಂಡ ಕೃತಿಗಳನ್ನು ಪದ್ಯ ಮತ್ತು ಗದ್ಯ ವಿಭಾಗಗಳಲ್ಲಿ ಪರಿಶೀಲಿಸಿಕೊಳ್ಳಲಾಗಿದೆ. ತುಳುವನ್ನು ಸಾಹಿತ್ಯಿಕ ಮತ್ತು ಶೈಕ್ಷಣಿಕ ಭಾಷೆಯನ್ನಾಗಿ ರೂಪಿಸಲು ಯತ್ನಿಸಿದ ನಿಲುವುಗಳನ್ನು ಈ ಅಧ್ಯಯನದಲ್ಲಿ ವಿಶ್ಲೇಷಿಸಿಕೊಳ್ಳಲಾಗಿದೆ. ನಾಟಕ ಅನುವಾದಗಳು ಓದುವ ಪಠ್ಯಕ್ಕಿಂತಲೂ, ರಂಗಕೃತಿಯಾಗಿ ಅಭಿವ್ಯಕ್ತಿಸಿಕೊಳ್ಳುವುದಕ್ಕೆ ಅನುವಾಗುವಂತೆ ನಡೆದಿರುವುದನ್ನು ನಿರ್ವಚಿಸಿಕೊಳ್ಳಲಾಗಿದೆ.

ಪುನರುಜ್ಜೀವನ ಕಾಲಘಟ್ಟದಲ್ಲಿ ತುಳುವಿಗೆ ಮಹತ್ವದ ಅನುವಾದಗಳನ್ನು ನಡೆಸಿದವರು ಕೆದಂಬಾಡಿ ಜತ್ತಪ್ಪ ರೈಯವರು. ಕವಿತೆ, ಕಾದಂಬರಿ, ನಾಟಕ, ಸುಭಾಷಿತ, ತಾತ್ವಿಕ ರಚನೆಗಳು, ಖಂಡ ಕಾವ್ಯ, ದಾಸರ ಪದಗಳು, ನೀತಿ ಕಾವ್ಯ, ಗದ್ಯ, ಕಾವ್ಯ ಹೀಗೆ ನಾನಾ ಪ್ರಕಾರದ ಸಾಹಿತ್ಯ ರೂಪಗಳನ್ನು ತುಳುವಿಗೆ ಅನುವಾದಿಸಿದ್ದಾರೆ. ಕೆದಂಬಾಡಿಯವರಿಗೆ ತುಳುವಿನಲ್ಲಿ ಆಧುನಿಕ ಕಾದಂಬರಿ ಪ್ರಕಾರವನ್ನು ರೂಪಿಸುವುದು ಮತ್ತು ತುಳುವನ್ನು ಓದುಗ ಭಾಷೆಯನ್ನಾಗಿ ನಿರೂಪಿಸುವುದು ಮುಖ್ಯ ಉದ್ದೇಶ. ಮೂಲತಃ ಕೇಳುಗ, ನೋಡುಗ ಸ್ವಭಾವದ ತುಳುವರನ್ನು ಓದುಗ ಸ್ವಭಾವದ ತುಳುವರನ್ನಾಗಿ ರೂಪಿಸುವುದು ಮುಖ್ಯವಾಗುತ್ತದೆ. ತುಳುವಿನಲ್ಲಿ ಪ್ರಚಲಿತವಿಲ್ಲದ ಸಾಹಿತ್ಯಿಕ ಶೈಲಿ, ಪ್ರಕಾರ, ಮೌಲ್ಯ, ತಾತ್ವಿಕತೆಗಳನ್ನು ಈಗಾಗಲೇ ಕನ್ನಡ ಸಾಹಿತ್ಯವನ್ನು ಉನ್ನತವಾಗಿ ರೂಪೀಕರಿಸಿದ ನವೋದಯ ಸಾಹಿತ್ಯದ ಅಂಶಗಳಿಂದ ಇವರು ಆಯ್ದುಕೊಳ್ಳುತ್ತಾರೆ.

ಕನ್ನಡದಿಂದ ತುಳುವಿಗೆ ಕೃತಿಗಳನ್ನು ಅನುವಾದಿಸಿಕೊಳ್ಳುವ ಅನುವಾದಕರಿಗೆ ಸ್ಪಷ್ಟವಾಗಿ ಎರಡು ಉದ್ದೇಶಗಳಿವೆ. ಒಂದು – ತುಳು ಸಾಹಿತ್ಯದ ಚರಿತ್ರೆಯನ್ನು ಹಿಗ್ಗಿಸುವುದು. ಇನ್ನೊಂದು – ತುಳು ಜನಪದ ಸಂಸ್ಕೃತಿ ಮತ್ತು ಭಾಷೆಯನ್ನು ಬರಹದ ಸ್ವರೂಪದಲ್ಲಿ ನಿರೂಪಿಸುವುದು. ಮಧ್ಯಕಾಲೀನ ಕನ್ನಡ ಕಾವ್ಯಗಳ ಅನುವಾದಗಳು, ಕೆದಂಬಾಡಿಯವರ ಅನುವಾದಗಳಲ್ಲಿ ತುಳು ಸಂಸ್ಕೃತಿಯ ಭೌಗೋಳಿಕತೆಯ ನಡುವೆ ಕತೆಯನ್ನು ನಿರೂಪಿಸುವುದು ಮತ್ತು ತುಳುನಾಡಿನ ಸಮಗ್ರ ಸಂಸ್ಕೃತಿ ದಾಖಲಾತಿಯೇ ಪ್ರಧಾನ ಮತ್ತು ಪ್ರಜ್ಞಾಪೂರ್ವಕ ನಿಲುವಾಗಿದೆ. ಆಧುನಿಕ ತುಳು ಸಾಹಿತ್ಯ ಸೃಷ್ಟಿಯಾಗುವ ಸಂದರ್ಭದಲ್ಲಿ ಕನ್ನಡಕ್ಕಿದ್ದಂತೆ ತುಳುವಿಗೆ ಪ್ರಾಚೀನ ಸಾಹಿತ್ಯ ಚರಿತ್ರೆ ಎಂಬುದರ ಅರಿವಿರಲಿಲ್ಲ. ಆದ್ದರಿಂದ ಆಧುನಿಕ ತುಳು ಸಾಹಿತ್ಯಕ್ಕೆ ಪ್ರಾಚೀನ ತುಳು ಸಾಹಿತ್ಯದ ಪರಂಪರೆಯ ಜೊತೆ ಸಂಬಂಧವಿಲ್ಲ. ತನ್ನ ಮುಂದಿದ್ದ ಕನ್ನಡ ನವೋದಯ ಸಾಹಿತ್ಯದೊಡನೆ ಅನುಸಂಧಾನ ನಡೆಸುತ್ತಾ ಆಧುನಿಕ ತುಳು ಸಾಹಿತ್ಯ ರೂಪುಗೊಳ್ಳತೊಡಗಿದೆ.

ಕನ್ನಡ ಸಾಹಿತ್ಯದ ಪರಿಚಯ ಪಡೆದುಕೊಂಡ ತುಳು ಬರಹಗಾರರು ಕನ್ನಡಕ್ಕೆ ಪರ್ಯಾಯವಾಗಿ ತುಳು ಸಾಹಿತ್ಯವನ್ನು ಸೃಷ್ಟಿಸುವ ಮುತುವರ್ಜಿಯನ್ನು ತೋರಿದರು. ಕನ್ನಡದ ಈ ಬರಹಗಾರರು ತುಳು ಸಾಹಿತ್ಯ ಸೃಷ್ಟಿಗೆ ಮಾದರಿಯಾಗಿ ಕನ್ನಡ ಸಾಹಿತ್ಯ ಪರಂಪರೆಯನ್ನು ಬಳಸಿಕೊಂಡಿದ್ದಾರೆ. ಕನ್ನಡದ ಮಧ್ಯಕಾಲೀನ ಕಾವ್ಯಗಳು, ಯಕ್ಷಗಾನ ಪ್ರಸಂಗಗಳು, ಕಾದಂಬರಿಗಳು, ನಾಟಕಗಳು, ಕತೆಗಳು, ಕವನಗಳು ಹೀಗೆ ವಿವಿಧ ಪ್ರಕಾರದ ಸಾಹಿತ್ಯ ಕೃತಿಗಳನ್ನು ತುಳುವಿಗೆ ಭಾಷಾಂತರಿಸಿದರು. ಕನ್ನಡದ 'ಆಕರ'ವನ್ನು ಇರಿಸಿಕೊಂಡು ತುಳುವಿನ 'ಆಕಾರ'ವನ್ನು ನಿರ್ಮಿಸುವುದು ನಡೆದಿದೆ.

೬ ಪುನರುಜ್ಜೀವನ : ವಿಸ್ತರಣೆಯ ನೆಲೆಗಳು ಎಂಬ ಅಧ್ಯಾಯದಲ್ಲಿ ತುಳುವಿನ ಕೃತಿಗಳು ಕನ್ನಡ, ಇಂಗ್ಲೀಷ್ ಮತ್ತು ಇತರ ಭಾಷೆಗಳಿಗೆ ಅನುವಾದಗೊಳ್ಳುವ ಮೂಲಕ ತುಳುವಿನ ಸಾಹಿತ್ಯ, ಸಂಸ್ಕೃತಿ ವಿಸ್ತರಣೆಯಾದುದನ್ನು ಗುರುತಿಸಿಕೊಳ್ಳಲಾಗಿದೆ. ಯಾವುದೇ ಕೃತಿ ಸೃಷ್ಟಿಯಾಗುವುದಕ್ಕೆ ಮತ್ತು ಭಾಷಾಂತರವಾಗುವುದಕ್ಕೆ ಲಕ್ಷ್ಯಭಾಷೆಯ ಸಮಕಾಲೀನ ಬೇಡಿಕೆ ಕಾರಣವಾಗಿರುತ್ತದೆ. ಈ ಬೇಡಿಕೆ ಎಂಬುವುದು ಭಾಷಾಂತರಕಾರರು, ಓದುಗರು, ಸಾಂದರ್ಭಿಕ ಸಮಾಜ ಇತ್ಯಾದಿ. ತುಳುವಿನಲ್ಲಿ ಈ ಬೇಡಿಕೆ

ತುಳು ಭಾಷಿಕ ಎಚ್ಚರವೆಂಬ ಅರಿವಿನ ಬಿಂಬದಲ್ಲಿ ತುಳು ತನ್ನ ಪ್ರತಿಬಿಂಬವನ್ನು ಕಾಣಬಯಸಿದ್ದರಿಂದ ನಡೆಯಿತು. ವಸಾಹತೋತ್ತರ ಕಾಲಘಟ್ಟದಲ್ಲಿ ಭಾಷಾ ಸಮುದಾಯಗಳ ಒಡಲಿನಲ್ಲಿ ಅರಳುತ್ತಿರುವ ಈ ಅಸ್ತಿತ್ವದ, ಪ್ರಗತಿಯ ಆಕಾಂಕ್ಷೆಗಳು ಸಾಹಿತ್ಯ ಅಭಿವ್ಯಕ್ತಿಗಳ ರೂಪದಲ್ಲಿ ಸೃಷ್ಟಿಶೀಲವಾಗಿವೆ. ಮಿಶನರಿಗಳು ಆಗಮಿಸುವುದಕ್ಕಿಂತ ಮೊದಲು ತುಳುನಾಡನ್ನು ಕನ್ನಡ ಪ್ರೇರಿತ ಅರಸರು ಆಳುತ್ತಿದ್ದರು. ಅಲ್ಲಲ್ಲಿ ಇದ್ದ ತುಂಡರಸರಿಗೆ ತುಳುಭಾಷೆಯನ್ನು ಪೋಷಿಸುವ ಸಾಮರ್ಥ್ಯ ಇರಲಿಲ್ಲ. ಮಿಶನರಿಗಳ ಕಾಲದಲ್ಲೂ ತುಳುವಿಗೆ ಪಕ್ವವಾದ ಆಶ್ರಯದಾತರು ದೊರಕಲಿಲ್ಲ. ಪ್ರಜ್ಞಾಪೂರ್ವಕವಾದ ಸಾಹಿತ್ಯ, ಶಿಕ್ಷಣದ ವ್ಯವಸ್ಥೆ ಇರಲಿಲ್ಲ. ಅಕ್ಷರಕ್ರಾಂತಿಗೆ ವೇದಿಕೆ ಸಿದ್ಧವಾಗಿದ್ದು ವಸಾಹತೋತ್ತರ ಕಾಲಘಟ್ಟದಲ್ಲಿ. ಬರಹಗಾರರ ಬಾಹುಳ್ಯ, ಸಾಹಿತ್ಯಕ್ಕೆ ಪ್ರಸರಣ ಕಾಲ ಪಕ್ವವಾಗಿದ್ದು, ಭಾಷೆ, ಸಾಹಿತ್ಯದ ಕುರಿತಾದ ಪುನರುಜ್ಜೀವನ ಹಂಬಲ ಇವೆಲ್ಲ ಆಧುನಿಕ ಕಾಲಘಟ್ಟದ ವಿದ್ಯಮಾನವಾಗಿದೆ. ತುಳು ಭಾಷಿಕ ಕುಲದ ಪ್ರತಿನಿಧಿಯಾಗಬೇಕು ಎಂಬ ಸಮಕಾಲೀನ ಸಾಹಿತ್ಯ ಸಂದರ್ಭದಲ್ಲಿನ ಇಚ್ಛೆಯ ಇತಿಮಿತಿಗಳನ್ನು ತುಂಬುವುದಕ್ಕಾಗಿ ಅನುವಾದಗಳು ನಡೆದಿವೆ.

ಯಾವುದೇ ಭಾಷೆಗೂ ಭಾಷಾ ಚರಿತ್ರೆಯನ್ನು ದಾಖಲಿಸುವಾಗ ಅದರ ಸಾಹಿತ್ಯಿಕ ಕೃತಿಗಳನ್ನು, ದಾಖಲೆಯ ಶಾಸನಗಳನ್ನು ಉಲ್ಲೇಖಿಸುತ್ತಾರೆ. ಅಂತಹ ಸಾಧ್ಯತೆಗಳು ತುಳು ಭಾಷೆಯಲ್ಲಿ ಮಿತಿಯಲ್ಲಿದ್ದವು. ಈ ಹುಡುಕಾಟ, ಅನ್ವೇಷಣೆ, ಸಂಶೋಧನೆಗಳು ಹುಟ್ಟಿಕೊಂಡದ್ದೇ ಇಪ್ಪತ್ತನೇ ಶತಮಾನದ ಉತ್ತರಾರ್ಧದಲ್ಲಿ. ಅದಕ್ಕೆ ಕಾರಣವಾದುದು ಸಾಮಾಜಿಕ, ಶೈಕ್ಷಣಿಕ ಒತ್ತಾಸೆಗಳು. ತುಳುವಿನಿಂದ ಇತರ ಭಾಷೆಗಳಿಗೆ ನಡೆದ ಅನುವಾದ ಪ್ರಕ್ರಿಯೆಯನ್ನು ವಿಶ್ಲೇಷಿಸುವುದಕ್ಕೆ ಆಧುನಿಕ ತುಳು ಸ್ವತಂತ್ರ ಸಾಹಿತ್ಯ ಸಂರಚನೆಯ ಹಿಂದಿನ ಚಾರಿತ್ರಿಕತೆಯನ್ನು ಗ್ರಹಿಸಿಕೊಳ್ಳಬೇಕಾದುದು ಪ್ರಾಮುಖ್ಯತೆಯನ್ನು ಪಡೆಯುತ್ತದೆ. ತುಳುವಿನಲ್ಲಿ ಸ್ವತಂತ್ರ ಬರವಣಿಗೆ ಕ್ರಿಯಾಚರಣೆ ಅನ್ನುವುದು ಆಧುನಿಕ ವಿದ್ಯಮಾನ. ತುಳು ಪುನರುಜ್ಜೀವನ ಮತ್ತು ತುಳು ಸಂಸ್ಕೃತಿಯ ಅನನ್ಯತೆಯ ಕುರಿತಾದ ಅಭಿಯಾನಗಳು ತುಳು ಸ್ವತಂತ್ರ ಸಾಹಿತ್ಯ ರೂಪೀಕರಣ ಪ್ರಕ್ರಿಯೆಗೆ ಪ್ರಚೋದನೆಯಾಗಿ ರೂಪುಗೊಂಡಿತು.

ತುಳು ಪುನರುಜ್ಜೀವನ ಕಾಲಘಟ್ಟದಲ್ಲಿ ತುಳುವಿನಲ್ಲಿ ರೂಪಿತವಾದ ಸ್ವತಂತ್ರ ಸಾಹಿತ್ಯ ಮತ್ತು ಅದರ ಸ್ವರೂಪಗಳನ್ನು ಪರಿಶೀಲಿಸಿಕೊಳ್ಳಲಾಗಿದೆ. ಸ್ವತಂತ್ರ ಸಾಹಿತ್ಯ ರಚಿಸಿದ ಮತ್ತು ಅನುವಾದಗಳನ್ನು ನಡೆಸಿದ ತುಳು ಬರಹಗಾರರು ಆಧುನಿಕ ಕನ್ನಡ ಸಾಹಿತ್ಯದ ಒಳಹೊರಗನ್ನು ಓದಿದವರು. ತಿಳಿದವರು. ತುಳು ಮಾತೃಭಾಷೆಯವರು ಮತ್ತು ತುಳು ಮಾತೃಭಾಷೆ ಅಲ್ಲದ, ಅದರೆ ತುಳುನಾಡಿನೊಳಗೆ ನೆಲೆಸಿರುವ ಸಂವೇದನಶೀಲ ಮನಸ್ಸುಗಳು ತುಳುಸಾಹಿತ್ಯ ರಚನೆ ಮತ್ತು ಅನುವಾದಗಳಲ್ಲಿ ತೊಡಗಿಸಿಕೊಂಡವರು. ಸಾಂಸ್ಕೃತಿಕವಾಗಿ ಎಚ್ಚೆತ್ತ ಕನ್ನಡ–ಇಂಗ್ಲೀಷ್ ವಿದ್ಯಾವಂತ ತುಳುವರ್ಗ ತನ್ನನ್ನು ತಾನು ಕಂಡುಕೊಳ್ಳುವ, ತನಗೊಂದು ಸಾಂಸ್ಕೃತಿಕ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ನಡೆಸುವ ಪ್ರಯತ್ನಗಳನ್ನು ಸೃಜನಶೀಲ ರಚನೆ ಮತ್ತು ಅನುವಾದ ಪ್ರಕ್ರಿಯೆಯಲ್ಲಿ ಕಾಣಬಹುದು.

ತುಳುವಿನಿಂದ ಇತರ ಭಾಷೆಗಳಿಗೆ ನಡೆದ ಅನುವಾದಗಳಲ್ಲಿ ಸಾಹಿತ್ಯಿಕ ಮತ್ತು ಶೈಕ್ಷಣಿಕ ಮಿಮಾಂಸೆಯ ಎರಡೂ ನೆಲೆಗಳಿವೆ. ತುಳುವಿನ ಸಾಹಿತ್ಯಿಕ ನೆಲೆಗಳನ್ನು ವಿಸ್ತರಿಸುವುದರ ಜೊತೆಗೆ ತುಳುವನ್ನು ಒಂದು ಶೈಕ್ಷಣಿಕ ಪರಿಭಾಷೆಯಾಗಿ ರೂಪಿಸುವುದಕ್ಕೆ ಪ್ರಯತ್ನಿಸಲಾಗಿದೆ. ತುಳು ಜಾನಪದ ಪಠ್ಯಗಳ ಅನುವಾದಗಳಲ್ಲಿ ಇದು ಸ್ಪಷ್ಟವಾಗಿದೆ. ತುಳುವಿನಿಂದ ಕನ್ನಡಕ್ಕೆ ನಡೆಸಿದ ಅನುವಾದಗಳು ತುಳು ತನ್ನ ಅಸ್ತಿತ್ವವನ್ನು ಸಾಬೀತುಪಡಿಸುವ ನೆಲೆಯದ್ದು. ಕನ್ನಡ ಮತ್ತು ಇತರ ಭಾಷೆಗಳಿಂದ ತುಳುವಿಗೆ ನಡೆದ ಅನುವಾದಗಳು ತುಳುವಿಗೆ ಸಾಹಿತ್ಯ ಭಾಷೆಯೊಂದರ ಮಾದರಿಯನ್ನು ನೀಡುವಂತಹುದು.

ಸಾಮಾನ್ಯವಾಗಿ ಅನುವಾದಗಳಿಗೆ ಒಂದಕ್ಕಿಂತ ಹೆಚ್ಚಿನ ಭಾಷೆ ಬೇಕು. ಅನುವಾದದ ಎರಡು ಭಾಷೆಗಳು ಅಪರಿಚಿತವಾಗಿರುತ್ತವೆ. ಆದರೆ ತುಳು-ಕನ್ನಡ ಭಾಷೆಗಳು ಪರಸ್ಪರ ಅಪರಿಚಿತವಲ್ಲ. ಹೊರಗಿನ ಭಾಷೆಯೂ ಅಲ್ಲ. ಆಕರ, ಲಕ್ಷ್ಯ ಭಾಷೆಗಳೆರಡೂ ಈ ನೆಲದ ಭಾಷೆಗಳೇ ಆಗಿವೆ. ಈ ತುಳು-ಕನ್ನಡದ ಅನುವಾದ ಕಾರ್ಯವನ್ನು ಸಾಮಾನ್ಯ ಅನುವಾದ ಮೀಮಾಂಸೆಗಿಂತ ಭಿನ್ನವಾದ ಆಯಾಮಗಳಲ್ಲಿ ಗ್ರಹಿಸಿ ವಿಶ್ಲೇಷಿಸಿಕೊಳ್ಳಬೇಕಾಗುತ್ತದೆ. ಕನ್ನಡದ ಆವರಣದೊಳಗಿನ ತುಳು ಭಾಷೆಯ ಸಾಹಿತ್ಯ ಕೃತಿಗಳು ಎಂಬ ಕನ್ನಡಿಗರ ಹಗುರ ಧೋರಣೆಯನ್ನು ಅಲ್ಲಗಳೆಯುವುದು ಮತ್ತು ತುಳುವನ್ನು ಕನ್ನಡಕ್ಕೆ ಸರಿಸಮಾನವಾಗಿ ನೋಡುವ ಪ್ರಜ್ಞೆಯೊಂದನ್ನು ಕನ್ನಡಿಗರಲ್ಲಿ ಬೆಳೆಸುವುದು, ತುಳು ಭಾಷೆ - ಸಾಹಿತ್ಯದ ಬಗ್ಗೆ ಅಭಿಮಾನವಿದ್ದರೂ, ಕನ್ನಡಕ್ಕಿರುವ ವಿಶಾಲ ಓದುಗರ ವರ್ಗವನ್ನು ತಮ್ಮ ಬರಹಗಳ ಮೂಲಕ ತಲುಪಿ ಕನ್ನಡ ಸಾಹಿತ್ಯದ ನಡುವೆ ಗುರುತಿಸಿಕೊಳ್ಳುವುದು, ಕನ್ನಡ ಲಿಪಿಯಲ್ಲಿರುವ ತುಳು ಬರವಣಿಗೆಯನ್ನು ಓದುವ ಗೋಜಿಗೆ ಹೋಗದ ತುಳುವರನ್ನು ತಲುಪುವುದು, ತುಳುವಿನ ಕೃತಿಗಳನ್ನು ಕನ್ನಡದ ಪಠ್ಯಗಳಾಗಿ ಸ್ಥಾಪಿಸಿಕೊಳ್ಳುವ ಮೂಲಕ ತುಳುವಿಗೆ ಶೈಕ್ಷಣಿಕ ಸ್ಥಾನಮಾನವನ್ನು ಒದಗಿಸುವುದು - ಹೀಗೆ ತುಳುವಿನಿಂದ ಕನ್ನಡಕ್ಕೆ ನಡೆದ ಅನುವಾದಗಳು ಭಾಷೆ-ಪ್ರಜ್ಞೆ-ಯೋಚನೆ-ಓದುಗರ ವರ್ಗವನ್ನು ವಿಸ್ತರಿಸುವ ಆಶಯಗಳನ್ನು ಹೊಂದಿದೆ.

ತುಳುವಿನಿಂದ ಇಂಗ್ಲೀಷ್‌ಗೆ ನಡೆದ ಅನುವಾದಗಳನ್ನು ಗಮನಿಸಿದಾಗ ಮಿಶನರಿ ಅನುವಾದಗಳ ಹಿಂದೆ ಧಾರ್ಮಿಕ ಉದ್ದೇಶವಿದ್ದರೆ, ಉಳಿದ ಅನುವಾದಗಳಲ್ಲಿ ಲೌಖಿಕ ಉದ್ದೇಶಗಳಿವೆ. ತುಳುವಿನಿಂದ ಇಂಗ್ಲೀಷ್‌ಗೆ ದಾಟಿರುವ ಕೃತಿಗಳಿಗೆ ಭಾಷೆಗೆ ಸಂಬಂಧಿಸಿದಂತಹ ರಾಜಕೀಯ ಉದ್ದೇಶವಿದೆ. ಸಂವಹನ ಸಾಮರ್ಥ್ಯ ಹೊಂದಿರುವ ತುಳುವಿಗೆ ಶಾಸ್ತ್ರೀಯ ಸ್ಥಾನಮಾನದ ಗೌರವವನ್ನು ಒದಗಿಸುವುದಕ್ಕಾಗಿ ಈ ಅನುವಾದಗಳು ದುಡಿಯುತ್ತಿವೆ.

ಕರಾವಳಿಯ ಪ್ರಾದೇಶಿಕ ಗಡಿಯನ್ನು ದಾಟಿ ಜಾಗತಿಕ ಭಾಷೆಯೆನ್ನಿಸಿಕೊಂಡಿರುವ ಇಂಗ್ಲೀಷ್‌ಗೆ ಪ್ರಾದೇಶಿಕ ವಿಚಾರಗಳು, ಸಾಂಸ್ಕೃತಿಕ ಅನನ್ಯತೆಗಳು, ಸಂವೇದನೆಗಳು ಅನುವಾದಗಳ ಮೂಲಕ ಪರಿಚಿತವಾಗುತ್ತವೆ. ಸ್ಥಳೀಯತೆಯ ಮೂಲಕವೇ ರಾಷ್ಟ್ರೀಯವೂ, ಅಂತಾರಾಷ್ಟ್ರೀಯವೂ ಆಗುವ ಪ್ರಕ್ರಿಯೆಗೆ ಅನುವಾದಗಳು ಚಲನೆಯನ್ನು ಒದಗಿಸುತ್ತವೆ ಮತ್ತು ತುಳು ಇಂಗ್ಲೀಷ್‌ಗೆ ಸರಿದೂಗಬಹುದು ಎಂಬ ನಂಬಿಕೆಯನ್ನು ಮುಂಚೂಣಿಯಲ್ಲಿರಿಸಿಕೊಂಡ ನಿಲುವುಗಳಿಂದ ತುಳುವಿನಿಂದ ಇಂಗ್ಲೀಷ್‌ಗೆ ಅನುವಾದದ

ಅನುಸಂಧಾನಗಳು ನಡೆದಿವೆ. ತುಳುವಿನಿಂದ ಇಂಗ್ಲೀಷ್‌ಗೆ ಕವಿತೆಗಳು, ಕಾದಂಬರಿಗಳು, ಸಣ್ಣಕತೆಗಳು, ನೀಳ್ಗತೆ, ನಾಟಕ ಅನುವಾದಗೊಂಡಿವೆ.

ತುಳುವಿನ ಪಠ್ಯಗಳ ಅನುವಾದದ ಜೊತೆಯಲ್ಲಿಯೇ ನೀಡುವ ಪಠ್ಯೇತರ ಅಂಶಗಳ ವಿವರಗಳು ತುಳುವೇತರ ಓದುಗರಿಗೆ ಮುಖ್ಯವಾದುದು. ಅನುವಾದಗಳ ಜೊತೆಯಲ್ಲಿ ನೀಡಿರುವ ವಿವರಣಾತ್ಮಕ ಪ್ರಸ್ತಾವನೆಗಳಲ್ಲಿ ತುಳು ಭಾಷೆ ಮತ್ತು ಸಾಹಿತ್ಯದ ಚರಿತ್ರೆ, ನಿರ್ದಿಷ್ಟ ಸಾಹಿತ್ಯ ಪ್ರಕಾರದ ಉಗಮ ಮತ್ತು ಇತಿಹಾಸ, ತುಳು ಸಾಹಿತ್ಯದ ಸಾಂಸ್ಕೃತಿಕ ಸಂದರ್ಭ, ಶೈಕ್ಷಣಿಕ ಮತ್ತು ರಾಜಕೀಯ ಹಿನ್ನೆಲೆ, ಆಯ್ಕೆಯ ಆಕರಗಳು ಮತ್ತು ವ್ಯಾಖ್ಯಾನ, ಕೃತಿಯ ವೈಚಾರಿಕ ಆಕೃತಿ, ಅನುವಾದದ ಉದ್ದೇಶ ಮತ್ತು ವಿಧಾನ ಮೊದಲಾದ ಸಂಗತಿಗಳನ್ನು ವಿವರಿಸಲಾಗಿದೆ. ಈ ವಿವರಣಾತ್ಮಕ ಪ್ರಸ್ತಾವನೆಯೇ ಈ ಅನುವಾದ ಪ್ರಕ್ರಿಯೆಯ ಉದ್ದೇಶಗಳನ್ನು ನಿರೂಪಿಸುವುದನ್ನು ಪರಿಶೀಲಿಸಿಕೊಳ್ಳಲಾಗಿದೆ. ತುಳು ಮತ್ತು ಇಂಗ್ಲೀಷ್ ಪಠ್ಯಗಳನ್ನು ತೌಲನಿಕ ಅಧ್ಯಯನ ಮಾಡುವ ಮೂಲಕ ಅನುವಾದದ ಉದ್ದೇಶ, ಅನುವಾದ ತಾತ್ವಿಕತೆಯನ್ನು ಗುರುತಿಸಿಕೊಳ್ಳಲಾಗಿದೆ.

ತುಳುವಿನಿಂದ ಇತರ ಭಾಷೆಗಳಿಗೆ ನಡೆದಿರುವ ಅನುವಾದಗಳು ಸಂಖ್ಯೆಯಲ್ಲಿ ಕಡಿಮೆಯಾದರೂ ಪ್ರಯೋಗಶೀಲತೆಯಲ್ಲಿ ಕಡಿಮೆ ಅಲ್ಲ. ತುಳುವಿನಿಂದ ಮಲೆಯಾಳಂ ಭಾಷೆಗೆ ಅನುವಾದಗೊಂಡ ಕಾದಂಬರಿ, ಕವನಗಳನ್ನು ಗುರುತಿಸಿಕೊಳ್ಳಲಾಗಿದೆ. ತುಳುವಿನಿಂದ ತೆಲುಗಿಗೆ ಬಿಡಿ ಕವನ, ಕತೆಗಳು ಅನುವಾದವಾಗಿವೆ. ಬೆಂಗಾಲಿ ಭಾಷೆಗೂ ಕೂಡ ಅನುವಾದಗಳು ನಡೆದಿವೆ. ಫ್ರೆಂಚ್ ಭಾಷೆಗೆ ತುಳುವಿನಿಂದ ಅನುವಾದ ನಡೆದಿದೆ. ತುಳುವಿನಿಂದ ಇತರ ಭಾಷೆಗಳಿಗೆ ನಡೆದ ಅನುವಾದಗಳು ಬಿಡಿಬಿಡಿಯಾದರೂ ತುಳುವಿನ ಭಾಷಿಕ, ಸಾಹಿತ್ಯಿಕ ಚಹರೆಗಳು ಅನ್ಯ ಭಾಷೆಗಳೊಂದಿಗೆ ಅನುಸಂಧಾನಕ್ಕೆ ಒಳಗಾಗಿರುವುದು ತುಳುವಿನ ಬೆಳವಣಿಗೆಯ ದೃಷ್ಟಿಯಿಂದ ಮಹತ್ವವಾದುದು ಎಂದು ಕಂಡುಕೊಳ್ಳಲಾಗಿದೆ.

ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಭಾಷಾಂತರಗೊಳ್ಳುವ ಯಾವುದೇ ಸಾಹಿತ್ಯಕೃತಿ ಒಂದು ಸಾಂಸ್ಕೃತಿಕ ಯಾಜಮಾನಿಕೆಗಾಗಿ ಸ್ಪಂದಿಸುವ ಕ್ರಿಯೆಯಾಗಬಹುದು. ಭಾಷೆಗಳ ನಡುವಿನ ಅಸಮಾನ, ಶ್ರೇಣೀಕೃತ ಸಂಬಂಧ, ಶ್ರೇಣೀಕರಣದ ಪ್ರತಿಫಲನ–ಪರಿಣಾಮಗಳು, ಒಂದು ಸಾಮಾಜಿಕ ಸಂದರ್ಭದಲ್ಲಿ ಭಾಷಿಕ ಸಮುದಾಯದ ಅರಿವಿನ ಸೂಚಕಗಳಾಗಿಯೂ, ತನ್ನ ಸಮಾಜದಲ್ಲಿನ ಸಾಹಿತ್ಯದ ತಾತ್ವಿಕತೆಯ ಕುರಿತಾಗಿ ಸ್ವಂತಿಕೆಯನ್ನು ಉದ್ದೀಪಿಸುವ ಸಾಂಸ್ಕೃತಿಕ ಪರಿಕರವಾಗಿಯೂ ಇರುತ್ತವೆ. ಈ ಪ್ರಕ್ರಿಯೆ ಇತರ ಭಾಷಿಕ ಸಮುದಾಯದೊಳಗೆ ಸಾಂಸ್ಕೃತಿಕ ಯಾಜಮಾನಿಕೆಯೊಂದನ್ನು ಸಾಧಿಸುವ ಮತ್ತು ಶ್ರೇಣೀಕರಣ ವ್ಯವಸ್ಥೆಯಲ್ಲಿ ಸಮಾನತೆಯನ್ನು ಗಳಿಸುವ ಕ್ರಿಯೆಯಾಗಿರುತ್ತದೆ. ಸಾಂಸ್ಕೃತಿಕ ಪ್ರತಿನಿಧೀಕರಣದ ರಾಜಕಾರಣದಲ್ಲಿ ಬೇರೆ ಬೇರೆ ಯಾಜಮಾನ್ಯಗಳನ್ನು ಅನಾವರಣಗೊಳಿಸುವ, ಪ್ರತಿರೋಧಿಸುವ ನಿಲುವುಗಳು ತುಳು ಅನುವಾದ ಚಟುವಟಿಕೆಯಲ್ಲಿರುವುದನ್ನು ಕಾಣಬಹುದು.

ಎರಡು ಭಾಷೆಗಳ ನಡುವಿನ ಪರಸ್ಪರ ಅನುವಾದದಿಂದ ಭಾಷೆಗಳ ನಡುವಿನ ನಂಟು ಅಧೀನ ಮತ್ತು ಪ್ರಭುತ್ವ ಎಂಬ ಗ್ರಹಿಕೆಗಳಿಗೆ ಸೀಮಿತವಾಗಿರದೇ ಪ್ರತಿಯೊಂದು ಭಾಷೆಯೂ ಸೃಜನಶೀಲ

ಅಭಿವ್ಯಕ್ತಿಗಳ ವ್ಯವಸ್ಥೆ ಎಂಬ ಅರಿವು ಮುನ್ನೆಲೆಗೆ ಬರುವುದಕ್ಕೆ ಸಾಧ್ಯವಿದೆ. ತುಳು ಸಾಹಿತ್ಯಕೃತಿಗಳ ಕನ್ನಡ ಅನುವಾದದಿಂದ ಕರ್ನಾಟಕದ ಆವರಣದೊಳಗಿನ ಜನಭಾಷೆ ತುಳುವಿನ ಜೀವಂತಿಕೆಯ ಪ್ರತಿನಿಧೀಕರಣವೆಂದೋ, ತುಳುವಿನ ಸಾಹಿತ್ಯ ಕೃತಿಗಳನ್ನು ಕರ್ನಾಟಕದ ಒಟ್ಟು ಸಾಂಸ್ಕೃತಿಕ ಉತ್ಪನ್ನಗಳೆಂಬ ತಿಳುವಳಿಕೆ ಮೂಡಿಸುವುದು ಸಾಧ್ಯವಾದರೆ ಅದು ಕನ್ನಡ ಸಾಹಿತ್ಯದ ಪ್ರಜಾಪ್ರಭುತ್ವೀಕರಣವಾಗುತ್ತದೆ. ಕನ್ನಡ ಭಾಷೆ ವಿಶ್ವಾತ್ಮಕ ಅನುಸಂಧಾನಕ್ಕೆ ಒದಗಿಬರುತ್ತದೆ. ಕನ್ನಡ ಮತ್ತು ತುಳುವಿನ ನಡುವಿನ ಸಂಬಂಧಗಳ ಚಹರೆಗಳ ಪುನರ್ ನವೀಕರಣಕ್ಕೆ ಕಾರಣವಾಗುತ್ತದೆ. ಆಕರ ಭಾಷೆ ಮತ್ತು ಲಕ್ಷ್ಯ ಭಾಷೆಗಳೆರಡೂ ಚೈತನ್ಯದಾಯಕ ಪರಿಭಾಷೆಗಳನ್ನು ವಿನಿಮಯ ಪಡಿಸಿಕೊಳ್ಳಲು ಸಾಧ್ಯವಾಗುತ್ತದೆ. ಕನ್ನಡ ಮತ್ತು ಸಂಸ್ಕೃತ, ಕನ್ನಡ ಮತ್ತು ಇಂಗ್ಲೀಷ್ ಸಂಬಂಧಗಳ ಕುರಿತಾಗಿ ಮಾತನಾಡುವ, ವಿಶ್ಲೇಷಿಸುವ ಚರ್ಯೆಗಳು ತುಳು ಮತ್ತು ಕನ್ನಡ ಹಾಗೂ ತುಳು ಮತ್ತು ಇಂಗ್ಲೀಷ್ ಕುರಿತಾಗಿ ಮಾತನಾಡುವಂತಾಗುತ್ತದೆ.

೭ ಅನುಸಂಧಾನದ ಆಯಾಮಗಳು ಎಂಬ ಅಧ್ಯಾಯವನ್ನು ಒಟ್ಟು ತುಳು ಅನುವಾದ ವಾಙ್ಮಯ ಭಾಷಿಕವಾಗಿ, ಸಾಂಸ್ಕೃತಿಕವಾಗಿ ಅನುಸಂಧಾನಿಸಿಕೊಂಡು ಬೆಳೆದ ಬಗೆ, ಓದುಗರ–ಅನುವಾದಕರ ಸಂವಹನ, ತುಳು ಅನುವಾದ ಪ್ರಕ್ರಿಯೆಯಲ್ಲಿನ ಮಹಿಳಾ ಪ್ರತಿನಿಧೀಕರಣದ ಚಹರೆಗಳು ಮತ್ತು ಅನುವಾದದ ಸವಾಲುಗಳನ್ನು ಗುರುತಿಸಿಕೊಳ್ಳಲು ಬಳಸಿಕೊಳ್ಳಲಾಗಿದೆ. ವಿಭಿನ್ನ ವಿಚಾರಧಾರೆಗಳು, ಕವಲುಗಳು ಮೈತ್ರಿಯೊಂದನ್ನು ಸಾಧಿಸಿ ಸಂದರ್ಭಾನುಸಾರ ನಿರ್ಣಯಗಳನ್ನು, ಸ್ವರೂಪಗಳನ್ನು ಪಡೆಯುವ ಪ್ರಕ್ರಿಯೆ ಅನುಸಂಧಾನ. ಎರಡು ಭಾಷೆಗಳ ಸಾಹಿತ್ಯ ಪರಿಭಾಷೆಗಳ ನಡುವೆ ನಡೆಯುವ ಅನುವಾದ ಪ್ರಕ್ರಿಯೆಯಲ್ಲಿ ಎರಡೂ ಭಾಷೆ ಮತ್ತು ಸಂಸ್ಕೃತಿಯ ಕೂಡುಬಿಂದುಗಳನ್ನು ನಿರ್ವಚಿಸಿಕೊಳ್ಳುವ ಪ್ರಮೇಯ ಅನುಸಂಧಾನ. ಇದರಿಂದ ಭಾಷಿಕ ಮತ್ತು ಸಾಂಸ್ಕೃತಿಕ ಮುಖಾಮುಖಿ ಅನುವಾದ ಚಟುವಟಿಕೆಗಳನ್ನು ನಿಯಂತ್ರಿಸಿದ ಮತ್ತು ಮುಕ್ತಗೊಳಿಸಿದ ಬಗೆಗಳನ್ನು ಹುಡುಕಿಕೊಳ್ಳಬಹುದು. ಸಮಕಾಲೀನತೆಯನ್ನು, ಸ್ಥಳೀಯತೆಯನ್ನು ಅರ್ಥೈಸಿಕೊಳ್ಳುವ ಭಾಷಿಕ ಜನಸಮುದಾಯ ತನ್ನ ಅಸ್ಮಿತೆಗಾಗಿ ಹಂಬಲಿಸುತ್ತಿರುತ್ತದೆ. ಈ ಹಂಬಲಿಕೆಯ ಭಾವ ಪ್ರತ್ಯೇಕತೆಯ ಸ್ವರೂಪದಲ್ಲೋ, ಹೋರಾಟದ ರೂಪದಲ್ಲೋ ಇರಬೇಕಾಗಿಲ್ಲ. ಅನುಸಂಧಾನದ ನೆಲೆಯಲ್ಲಿ ಬಹುತ್ವದ ಚಹರೆಗಳನ್ನು ನಿರ್ಮಿಸುವುದರಲ್ಲಿರಬಹುದು. ಸೀಮಿತ ಅವಕಾಶದಲ್ಲಿಯೇ ತನ್ನ ಅನನ್ಯತೆಯನ್ನು ಹುಡುಕಿ ಮರುಕಟ್ಟಿಕೊಳ್ಳುವಲ್ಲಿ ಇರಬಹುದು. ಸ್ವೀಕರಣೆ ಮತ್ತು ಅನುಸರಣೆಯ ಸ್ವರೂಪದಲ್ಲಿರಬಹುದು.

ಭಾಷಾಂತರ ಅಧ್ಯಯನಗಳು ಕೇವಲ ಭಾಷಿಕ ಅಧ್ಯಯನಗಳಾಗಿ ಉಳಿಯದೇ, ಸಂಸ್ಕೃತಿ ಅಧ್ಯಯನಗಳ ಭಾಗವೂ ಆಗಿದೆ. ಅನುವಾದ ಪ್ರಕ್ರಿಯೆಯ ಸಾಂಸ್ಕೃತಿಕ ಸಂದರ್ಭವೂ ಅನೇಕ ಬಗೆಯ ಒತ್ತಡಗಳಿಂದ ರೂಪುಗೊಂಡಿರುತ್ತದೆ. ಭಾಷಿಕ, ಸಾಂಸ್ಕೃತಿಕ, ಶೈಕ್ಷಣಿಕ, ಆಡಳಿತಾತ್ಮಕ, ರಾಜಕೀಯಾತ್ಮಕ, ವೈಯಕ್ತಿಕ, ಸಾಮಾಜಿಕ ಹೀಗೆ ಸಮಗ್ರವಾಗಿ ಇಲ್ಲವೇ ಬಿಡಿಬಿಡಿಯಾಗಿ ಈ ಅನುಸಂಧಾನಗಳು ನಡೆಯುತ್ತವೆ. ಅಂತಿಮವಾಗಿ ಅನುವಾದ ಅನ್ನುವುದು ಒಂದು ಸಾಂಸ್ಕೃತಿಕ ಚಟುವಟಿಕೆಯೇ ಆಗಿರುವುದರಿಂದ ಸ್ವಾಭಾವಿಕವಾಗಿ ಎಲ್ಲಾ ವಿದ್ಯಮಾನಗಳು ಸಾಂಸ್ಕೃತಿಕ ಅನುಸಂಧಾನವೇ ಆಗಿಬಿಡುತ್ತದೆ.

ತುಳು ಅನುವಾದಗಳಲ್ಲಿ ಆಕರ ಮತ್ತು ಅನುವಾದಿತ ಕೃತಿಗಳ ಭಾಷಿಕ ಸಂರಚನೆಯ ಕೂಡುಬಿಂದುಗಳು ವೈವಿಧ್ಯಮಯವಾಗಿದೆ. ತುಳು ಭಾಷೆಯ ಅಸ್ತಿತ್ವವನ್ನು ಗುರುತಿಸುತ್ತಲೇ ನಿರ್ವಹಣಾ ವ್ಯಾಪ್ತಿಯನ್ನು ಅನುಸಂಧಾನಿಸುತ್ತದೆ. ಪಠ್ಯ-ಪಠ್ಯಗಳ ನಡುವೆ, ಭಾಷೆ ಮತ್ತು ಪಠ್ಯ, ಭಾಷೆ ಮತ್ತು ಸಂಸ್ಕೃತಿ, ಅನುವಾದಕರು ಮತ್ತು ಓದುಗರು ಇವುಗಳ ನಡುವಿನ ಹೊಂದಾಣಿಕೆ ಮತ್ತು ಭೇದವನ್ನು ಗುರುತಿಸಿಕೊಂಡು ಸಮನ್ವಯತೆಯನ್ನು ಸಾಧಿಸಿಕೊಂಡ ಬಗೆಯನ್ನು ಶೋಧಿಸಿಕೊಳ್ಳಬೇಕಾಗುತ್ತದೆ. ಈ ಒಡಂಬಡಿಕೆ ತುಳು ಅನುವಾದಗಳನ್ನು ಪ್ರೇರೇಪಿಸಿದ ಆಯಾಮಗಳನ್ನು ಹೊಂದಿಕೊಂಡಿದೆ. ತುಳುವಿನ ಅಸ್ಮಿತೆ ಮತ್ತು ವಿಶ್ವಾತ್ಮಕತೆಗಳ ಅನುಸಂಧಾನದಲ್ಲಿ ತುಳು ಅನುವಾದ ವಾಙ್ಮಯ ನಿರ್ಮಾಣವಾಗಿದೆ.

ತುಳು ಮನಸ್ಸುಗಳು ತನ್ನನ್ನು ತಾನು ಕಂಡುಕೊಂಡು, ತುಳು ಭಾಷೆ, ಸಾಹಿತ್ಯಕ್ಕೊಂದು ಸಾಂಸ್ಕೃತಿಕ ಆಯಾಮವನ್ನು ರೂಪಿಸಿಕೊಳ್ಳಲು ನಡೆಸಿದ ಮಹತ್ವದ ಪ್ರಯತ್ನಗಳು ಅನುವಾದ ಪ್ರಕ್ರಿಯೆಯ ಹಿನ್ನೆಲೆಯಾಗಿದೆ. ಓದು-ಬರಹದ ಭಾಷೆ ಅಲ್ಲದ ತುಳುವಿನಲ್ಲಿ ನಡೆಯುತ್ತಿರುವ ಈ ಅನುವಾದವೆಂಬ ಬರಹದ ಕ್ರಿಯಾಚರಣೆ ಸಾಂಸ್ಕೃತಿಕ ತುಳುನಾಡೊಂದನ್ನು ಕಟ್ಟುವ ಪ್ರಕ್ರಿಯೆಯಾಗಿದೆ. ಅನುವಾದಕರು ಅನುವಾದ ಸಿದ್ಧಾಂತಗಳ ಎಡೆಗೆ ಲಕ್ಷ್ಯ ವಹಿಸದೇ ಪ್ರಾಯೋಗಿಕ ಅನುವಾದ ಕೆಲಸಗಳಿಗೆ ಗಮನಕೊಟ್ಟಿದ್ದಾರೆ. ಆಕರಪಠ್ಯದ ಲಯ, ಭಾವಗಳಿಗೆ ಹೆಚ್ಚು ಗಮನಕೊಟ್ಟು ತುಳುವಿನ ಜಾಯಮಾನಕ್ಕೆ ತಕ್ಕಂತೆ ಆಸ್ವಾದಿಸುವುದು ಮತ್ತು ಅನುವಾದಿಸುವುದು ನಡೆದಿದೆ.

ತುಳುವಿನ ಅನುವಾದಗಳಲ್ಲಿ ಭಾಷೆಯಷ್ಟೇ ಬೆಸುಗೆಯ ಅಂಶವಾಗಿರದೇ ತುಳುವಿನ ಸಾಂಸ್ಕೃತಿಕ ಅನನ್ಯತೆ ಅನುವಾದ ಪ್ರಕ್ರಿಯೆಯಲ್ಲಿ ಪ್ರಧಾನ ಪಾತ್ರ ವಹಿಸಿರುವುದನ್ನು ಕಂಡುಕೊಳ್ಳಲಾಗಿದೆ. ತುಳು ಅನುವಾದವನ್ನು ಸಾಂಸ್ಕೃತಿಕ ಪುನಶ್ಚೇತನದ ಕೆಲಸ ಎಂದೇ ಪರಿಗಣಿಸಿ, ಪುನಶ್ಚೇತನಕ್ಕೆ ತುಳು ಸಂಸ್ಕೃತಿಯ ನಿರೂಪಣೆಯೇ ಮುಖ್ಯ ದಾರಿಯೆಂದು ನಂಬಿ, ತಮ್ಮ ಕೃತಿಗಳಲ್ಲಿ ಅದನ್ನು ಶೋಧಿಸಿ ಪುನರ್ ಸ್ಥಾಪಿಸಿಕೊಳ್ಳಲಾಗಿದೆ. ತುಳುವಿನ ಅಸ್ಮಿತೆ, ಸಾಮರ್ಥ್ಯದ ನೆಲೆಗಳನ್ನು ತುಳು ಭಾಷಿಕ ಮತ್ತು ಸಾಂಸ್ಕೃತಿಕ ಪರಿಪ್ರೇಕ್ಷ್ಯದಲ್ಲಿ ನಿಲ್ಲಿಸಿ ಅನುಸಂಧಾನಿಸಲಾಗಿದೆ.

ಅನುವಾದ ಅನ್ನುವುದು ಒಂದು ರಚನೆಯ ಕ್ರಮ ಮಾತ್ರ ಅಲ್ಲ. ಅದೊಂದು ಗ್ರಹಿಕೆಯ ಕ್ರಮ. ಒಂದು ವಿಶಿಷ್ಟ ರಾಜಕೀಯ-ಸಾಂಸ್ಕೃತಿಕ-ಸಾಮಾಜಿಕ ವ್ಯವಸ್ಥೆಯೊಳಗೆ ರೂಪುಗೊಂಡ ಸಾಹಿತ್ಯ ಕೃತಿಯನ್ನು ಇನ್ನಾವುದೋ ವಿಶಿಷ್ಟ ವ್ಯವಸ್ಥೆಯೊಳಗಿನ ಅನುವಾದಕರು ಮತ್ತು ಓದುಗರು ಪೂರ್ಣವಾಗಿ ಗ್ರಹಿಸಲಾರರು. ಈ ಗ್ರಹಿಕೆಯ ಕೊರತೆಗೆ ಇನ್ನೊಂದು ಪ್ರಮುಖವಾದ ರಾಜಕಾರಣದ ಆಯಾಮ ಇದೆ. ಅನುವಾದಕರು ಮತ್ತು ಓದುಗರು ಏನನ್ನೂ ಗ್ರಹಿಸಬಯಸುತ್ತಾರೆ? ಮತ್ತು ಎಷ್ಟನ್ನು ಗ್ರಹಿಸಬಲ್ಲರು ಎಂಬುದು ಹಲವು ಬಗೆಯ ಪ್ರಜ್ಞಾಪೂರ್ವಕ, ಅಪ್ರಜ್ಞಾಪೂರ್ವಕ ಒತ್ತಡಗಳಿಂದ ರೂಪಿತವಾಗಿರುತ್ತದೆ. ಈ ಒತ್ತಡಗಳನ್ನು ಅನುವಾದದ ಓದುಗರು ಯಾರು? ಮತ್ತು ಅನುವಾದದ ಉದ್ದೇಶವೇನು? ಎಂಬ ಪ್ರಶ್ನೆಗಳಿಗೆ ಉತ್ತರಿಸಿಕೊಳ್ಳುವ ಮೂಲಕ ಅನುವಾದಕರು ನಿಭಾಯಿಸಿಕೊಳ್ಳಬೇಕಾಗುತ್ತದೆ. ಈ ಪ್ರಶ್ನೆಗಳಿಗೆ

ಕಂಡುಕೊಂಡ ಉತ್ತರದಲ್ಲಿ, ಅನುವಾದಕರು – ಓದುಗರ ಅನುಸಂಧಾನದಲ್ಲಿ ತುಳು ಅನುವಾದ ವಾಙ್ಮಯದ ನಿರ್ಮಾಣವಿದೆ.

ಸೃಜನಶೀಲ ಲೇಖಕರಂತೆ ಅನುವಾದಕರು ಅನುವಾದ ಪ್ರಕ್ರಿಯೆಯಲ್ಲಿ ಸೃಜನಶೀಲ ವರ್ತನೆಯನ್ನು ತೋರಬೇಕಾಗುತ್ತದೆ. ಅನುವಾದ ಪ್ರಕ್ರಿಯೆ, ಸೃಜನಶೀಲ–ಸೃಜನೇತರ ಎಂದಾಗಿ ಉಳಿದಿಲ್ಲ. ಒಂದು ಪಠ್ಯದ ಆಕೃತಿಯಲ್ಲಿಯೂ ಉಳಿದಿಲ್ಲ. ಅನುವಾದದ ವಿದ್ಯಮಾನ ಒಂದು ಸಂಕಥನದ ಮಾದರಿಯಲ್ಲಿ ಸಾಗುತ್ತದೆ. ಅನುವಾದ ಒಂದು ಸೃಜನಶೀಲ ಹೆಚ್ಚುಗಾರಿಕೆಯಲ್ಲ. ಅದೊಂದು ಹೊಣೆಗಾರಿಕೆ. ಭಾಷೆಗೆ ಇರುವ ರಾಜಕೀಯ ಅಧಿಕಾರ, ವಾಣಿಜ್ಯದ ಬೆಂಬಲ ಇವು ಭಾಷೆಯೊಂದರ ಸಾಹಿತ್ಯ ಶ್ರೀಮಂತಿಕೆಯನ್ನು, ಆ ಭಾಷೆಯನ್ನು ಕುರಿತ ಆಸಕ್ತಿಯನ್ನು ನಿಯಂತ್ರಿಸುತ್ತದೆ. ಓದುಗರ ವಲಯದ ಆಸಕ್ತಿ, ಅನುವಾದಕರಿಗೆ ಇರುವ ರಾಜಕೀಯ–ಸಾಮಾಜಿಕ ದೃಷ್ಟಿಕೋನ ಇವು ಅನುವಾದ ಪ್ರಕ್ರಿಯೆಯಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ. ಅನುವಾದದ ಕಾರ್ಯೋದ್ದೇಶ, ಪರಿಣಾಮ ಮುಖ್ಯವೇ ಹೊರತು ಅದರ ಒಳ್ಳೆಯತನ ಅಲ್ಲ. ಅನುವಾದ ವೈವಿಧ್ಯಮಯ ಮತ್ತು ವ್ಯಕ್ತಿನಿಷ್ಠ ಎಂಬುದನ್ನು ಕಂಡುಕೊಳ್ಳಲಾಗಿದೆ.

ಸಂಸ್ಕೃತಿಯ ಪ್ರತಿನಿಧಿಯಾಗಿರುವುದು ಭಾಷೆ. ಸಾಹಿತ್ಯ ಭಾಷೆಯ ಸಹಾಯದಿಂದ ಸಂಸ್ಕೃತಿಯನ್ನು ನಿರ್ವಹಿಸುತ್ತದೆ. ಭಾಷೆ, ಸಾಹಿತ್ಯ, ಸಂಸ್ಕೃತಿ ಒಂದನ್ನೊಂದು ಹೊಂದಿಕೊಂಡು ಮುನ್ನಡೆಯುತ್ತದೆ. ಭಿನ್ನತೆ ಮತ್ತು ಅನನ್ಯತೆ ಹೊಂದಿರುವ ಸಾಹಿತ್ಯಕೃತಿಗಳನ್ನು ಬೇರೊಂದು ಭಿನ್ನ ಭಾಷೆಗೆ ಅನುವಾದಿಸುವಾಗ ಸವಾಲುಗಳು ಕಾಡುತ್ತವೆ. ಒಂದು ಪ್ರಾದೇಶಿಕ ಕೃತಿಯಲ್ಲಿನ ವಿಶೇಷತೆ, ವರ್ತಮಾನದ ಪರಿವರ್ತನೆಗಳು, ಪರಿಣಾಮ–ಪ್ರಕ್ರಿಯೆಗಳು, ಸಾಂಸ್ಕೃತಿಕ ಚಹರೆಗಳನ್ನು ಜಾಗತಿಕ ಮಟ್ಟಕ್ಕೆ ದಾಟಿಸುವಾಗ ತಲೆದೋರುವ ಸಮಸ್ಯೆಗಳನ್ನು ಅಧ್ಯಯನದ ಸೌಕರ್ಯಕ್ಕಾಗಿ ಭೌಗೋಳಿಕ, ವ್ಯಾಕರಣಾತ್ಮಕ, ಭಾಷಿಕ, ಸಾಂಸ್ಕೃತಿಕ ಸವಾಲುಗಳುಎಂದು ಇಲ್ಲಿ ವಿಶ್ಲೇಷಿಸಿಕೊಳ್ಳಲಾಗಿದೆ. ಮೌಖಿಕ ಪರಂಪರೆಯಲ್ಲಿ ಹೆಚ್ಚು ಚಲನಶೀಲವಾಗಿರುವ ಸಾಂಸ್ಕೃತಿಕ ಸಮೃದ್ಧಿಯ ತುಳುಭಾಷೆಯನ್ನು ಬರಹ ಅಂತರ್ಗತಗೊಳಿಸಿಕೊಂಡ ಕೃತಿಗಳನ್ನು ಅನುವಾದಿಸುವುದು ಸುಲಭವಲ್ಲವಾದರೂ, ಅನುವಾದಕರು ಲಕ್ಷ್ಯ ಓದುಗರ ಅಗತ್ಯ ಮತ್ತು ಮೂಲಸತ್ವವನ್ನು ಉಳಿಸಿಕೊಳ್ಳುವ ಸ್ವತಂತ್ರ ನಿಲುವಿನ ಹೊಂದಾಣಿಕೆಯನ್ನು ತಮ್ಮದಾಗಿಸಿಕೊಂಡಿರುವುದನ್ನು ಅಧ್ಯಯನದಲ್ಲಿ ಗುರುತಿಸಿಕೊಳ್ಳಲಾಗಿದೆ.

ಸಮಾರೋಪ

ಅನುವಾದ ಒಂದು ಗ್ರಹಿಕೆಯ ಕ್ರಮ. ಭಾಷೆ ಮತ್ತು ಸಾಹಿತ್ಯದ ಚಲನಶೀಲತೆಗೆ ಪೂರಕವಾಗಿ ನಡೆಯುವ ಅನುವಾದ ಚಟುವಟಿಕೆಗಳು ವಿವಿಧ ಸಾಂಸ್ಕೃತಿಕ ಮತ್ತು ರಾಜಕೀಯ ಕಾರ್ಯಸೂಚಿಗಳಾಗಿ ಅನುಗುಣವಾಗಿ ಒಂದು ಸಂಕಥನವೆನ್ನಿಸಿಕೊಂಡಿದೆ.

ಅನುವಾದ ಪ್ರಕ್ರಿಯೆ ಎರಡು ಅಪರಿಚಿತ ಭಾಷೆ ಮತ್ತು ಪರಿಸರಗಳ ನಡುವೆ ನಡೆಯುವುದು ಸಾಮಾನ್ಯ. ಆದರೆ ತುಳುವಿನ ಸಂದರ್ಭದಲ್ಲಿನ ಅನುವಾದ ಪ್ರಕ್ರಿಯೆಯು ಭಿನ್ನ ಸ್ವರೂಪದ್ದಾಗಿದೆ. ಯಾವುದೇ ಭಾಷೆ ತನಗೆ ಅಪರಿಚಿತವಾದ ಭಾಷೆಯಿಂದ ವಿವಿಧ ಜ್ಞಾನಶಿಸ್ತುಗಳನ್ನು ಭಾಷಾಂತರ ಮೂಲಕ ಪಡೆದುಕೊಳ್ಳುತ್ತದೆ. ಆಕರ ಭಾಷೆ ಮತ್ತು ಲಕ್ಷ್ಯ ಭಾಷೆಯ ಕೃತಿ ಮತ್ತು ಕೃತಿಯ ಪರಿಸರ ಅಪರಿಚಿತವಾಗಿರುವುದು ಸಾಮಾನ್ಯ. ಆದರೆ ತುಳುವಿನ ಭಾಷೆ, ಸಾಂಸ್ಕೃತಿಕ ಪರಿಸರ ಭಾಷಾಂತರವನ್ನು ವಿಭಿನ್ನ ಪರಿಭಾಷೆಯಲ್ಲಿ ನಿರ್ಮಿಸಿಕೊಂಡಿದೆ.

ಕರ್ನಾಟಕ ರಾಜ್ಯದ ಆಡಳಿತ ಭಾಷೆ ಕನ್ನಡ. ಕರ್ನಾಟಕದಲ್ಲಿರುವ ತುಳುವರಿಗೆ ಆಡಳಿತ ಭಾಷೆ ಕನ್ನಡ. ತುಳುವರು ಕನ್ನಡದಲ್ಲಿ ಶಿಕ್ಷಣವನ್ನು ಪಡೆಯುತ್ತಿರುವವರು. ಕರ್ನಾಟಕದ ಒಳಗಿರುವ ಮತ್ತು ಕರ್ನಾಟಕದ ಹೊರಗಿರುವ ತುಳುವರ ಮನೆಮಾತು ತುಳು. ತುಳುವರು ಕನ್ನಡದ ಭಾಗವಾಗಿಯೇ ಇರುವವರು. ತುಳು ಸಾಹಿತ್ಯ, ಸಂಸ್ಕೃತಿಗಳ ಪ್ರಚಾರ, ಪ್ರಸಾರಕ್ಕೆ ಆಯ್ದುಕೊಂಡ ಭಾಷಾ ಮಾಧ್ಯಮ ಕನ್ನಡ. ಕನ್ನಡ ಲಿಪಿಯಲ್ಲಿ ಬರೆದ ತುಳು ಭಾಷೆಯ ಕೃತಿಗಳನ್ನು ಓದುವವರು, ಕಲಿಯುವವರು, ಬರೆಯುವವರು ಕನ್ನಡಿಗರೇ ಆಗಿದ್ದಾರೆ. ತುಳುವಿನ ಅನುವಾದ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡವರು ಕೂಡ ಕನ್ನಡವನ್ನು ಶೈಕ್ಷಣಿಕ ಭಾಷೆಯನ್ನಾಗಿ ಓದಿಕೊಂಡವರು. ಕನ್ನಡ ಸಾಹಿತ್ಯ ಕೃತಿಗಳನ್ನು ತಮ್ಮ ಸಾಹಿತ್ಯಿಕ ಓದಿನ ಭಾಗವಾಗಿಸಿಕೊಂಡವರು. ಸಾಮಾನ್ಯವಾಗಿ ಸಾಹಿತ್ಯ ಕೃತಿಗಳನ್ನು ಮೂಲದಲ್ಲಿ ಓದಲಾಗದವರಿಗಾಗಿ ಲಕ್ಷ್ಯ ಭಾಷೆಗೆ ಭಾಷಾಂತರಿಸಲಾಗುತ್ತದೆ. ಆದರೆ ತುಳುವಿನಲ್ಲಿ ಭಾಷಾಂತರದ ಈ ಸಹಜ, ಮೂಲ ಉದ್ದೇಶಕ್ಕಿಂತ ಭಿನ್ನವಾಗಿ ತುಳುವಿನಿಂದ ಕನ್ನಡಕ್ಕೆ, ಕನ್ನಡದಿಂದ ತುಳುವಿಗೆ ನಡೆದ ಭಾಷಾಂತರ ಕೃತಿಗಳು ಏಕಕಾಲಕ್ಕೆ ಆಕರ ಭಾಷೆಯಲ್ಲಿಯೂ, ಲಕ್ಷ್ಯ ಭಾಷೆಯಲ್ಲಿಯೂ ಓದಿಗೆ ದಕ್ಕುತ್ತದೆ. ತುಳುವಿನಲ್ಲಿನ ಈ ಅನುವಾದ ಪ್ರಕ್ರಿಯೆ ಅನುಸಂಧಾನದ ವಿಭಿನ್ನ ನೆಲೆಗಳನ್ನು ಕಟ್ಟಿಕೊಡುತ್ತದೆ.

ಕನ್ನಡ ನೆಲದೊಳಗಿನ ಭಾಗವಾಗಿ, ತುಳುನಾಡು ಎಂಬ ಭಾಷಾ ಸಮುದಾಯವೂ ಜಗತ್ತಿಗೆ ತನ್ನನ್ನು ವಿಸ್ತರಿಸಿಕೊಳ್ಳುವ ಮತ್ತು ಜಗತ್ತನ್ನು ತನ್ನಲ್ಲಿ ಒಳಗೊಳ್ಳುವ ಪ್ರಕ್ರಿಯೆಗೆ ಅನುವುಮಾಡಿಕೊಂಡದ್ದು ಆಧುನಿಕ ಕಾಲಘಟ್ಟದಲ್ಲಿ. ಈ ಆಧುನಿಕತೆಯು ತುಳುನಾಡು ಮತ್ತು ನುಡಿ ತನ್ನ ಅಸ್ತಿತ್ವವನ್ನು

ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಪ್ರಕಟಗೊಳಿಸುತ್ತಾ ಅಧಿಕೃತಗೊಳ್ಳಲು ಅವಕಾಶ ನೀಡಿತು. ಅದರ ಪೂರಕ ಬೆಳವಣಿಗೆಯಾಗಿಯೇ ತುಳು ಭಾಷೆಯಲ್ಲಿ ವಾಙ್ಮಯ ನಿರ್ಮಾಣವಾಯಿತು. ಈ ತುಳು ವಾಙ್ಮಯದ ನಿರ್ಮಾಣಕ್ಕೆ ಮಾದರಿಗಳಾಗಿ ದೊರೆತದ್ದು ಕನ್ನಡದ ವಾಙ್ಮಯ. ತನ್ನನ್ನು ತಾನು ವಿಸ್ತರಿಸಿಕೊಳ್ಳಲು ತುಳುವಿಗೆ ಒದಗಿ ಬಂದದ್ದು ಮೌಖಿಕ ಪರಂಪರೆ. ತುಳುವಿನ ಜನಪದ ಪರಂಪರೆಯ ಅನುವಾದಗಳು ಜಾನಪದ ಸಿದ್ಧಾಂತಗಳ ಕುರಿತು ಜಾಗತಿಕವಾಗಿ ವ್ಯಾಪಕವಾದ ತಿಳಿವನ್ನು ಕೊಡುತ್ತದೆ. ಕರಾವಳಿಯ ತುಳು ಮೌಖಿಕ ಸಾಹಿತ್ಯದ ಲಿಪೀಕರಣ, ಪಠ್ಯೀಕರಣ ಮತ್ತು ಅನುವಾದ ಜಾನಪದ ಸಿದ್ಧಾಂತಗಳನ್ನು ಪುನರ್‌ವಿಮರ್ಶಿಸುವುದಕ್ಕೆ ಅವಕಾಶ ನೀಡಿದೆ. ತುಳು ಜಾನಪದವು ಮೌಖಿಕ ಸಾಹಿತ್ಯವನ್ನು ಸಂಚಲನಗೊಳಿಸುತ್ತಾ ಈ ಮಾಹಿತಿಶರೀರಗಳನ್ನು ಸಂಕಲಿಸಿಕೊಂಡಿತ್ತು. ಸಾರ್ವತ್ರಿಕವೂ, ವಿಶ್ವಾತ್ಮಕವೂ ಆದ ಜಾನಪದದಿಂದ ಭಾಷೆಯಿಂದ ಭಾಷೆಗೆ, ದೇಶದಿಂದ ದೇಶಕ್ಕೆ ಪರಿವರ್ತನೆಯ ಪ್ರತಿಕ್ರಿಯಾತ್ಮಕ ಸ್ವರೂಪದ ವಿದ್ಯಮಾನದ ಅನುಸಂಧಾನವನ್ನು ನಡೆಸಲಾಗಿದೆ.

ಅಧ್ಯಯನದ ತಾತ್ವಿಕತೆ

"ತುಳು ಅನುವಾದ ವಾಙ್ಮಯ : ಸಾಂಸ್ಕೃತಿಕ ಅನುಸಂಧಾನದ ನೆಲೆಗಳು" ಎಂಬ ಈ ಅಧ್ಯಯನ ನಾಲ್ಕು ಒಳವ್ಯವಸ್ಥೆಗಳನ್ನು ಹೊಂದಿರುವ ಅಧ್ಯಯನ. ಒಂದು – ತುಳುವಿನಿಂದ ಇತರ ಭಾಷೆಗಳಿಗೆ ಮತ್ತು ಇತರ ಭಾಷೆಗಳಿಂದ ತುಳುವಿಗೆ ನಡೆದಿರುವ ಅನುವಾದಗಳು. ಜಾನಪದ ಮತ್ತು ಸೃಜನಶೀಲ ಎಂಬ ಎರಡೂ ಅಭಿವ್ಯಕ್ತಿಗಳು ಇಲ್ಲಿ ಸೇರಿವೆ. ಎರಡು – ಅನುವಾದ ಪ್ರಕ್ರಿಯೆಯಲ್ಲಿ ಒಳಗೊಂಡ ಕೃತಿಗಳ ಆಯ್ಕೆಯ ಕಾರಣ ಮತ್ತು ಉದ್ದೇಶ. ಮೂರು–ನಿರೂಪಣೆಯಾದ ಅನುವಾದದ ವಿನ್ಯಾಸ ಮತ್ತು ವಿಧಾನ. ನಾಲ್ಕು – ಈ ಮೇಲಿನ ಮೂರು ವಿಷಯಗಳಿಗೆ ಸಂಬಂಧಿಸಿದಂತೆ ಭಾಷೆ, ಸಂಸ್ಕೃತಿ ಮತ್ತು ಭಾಷಾಂತರ ಚಿಂತನೆಯ ಸೈದ್ಧಾಂತಿಕ ವಿವೇಚನೆಗಳ ಅನ್ವಯಿಸುವಿಕೆ. ತುಳು ಅನುವಾದ ವಾಙ್ಮಯಕ್ಕೆ ಸಂಬಂಧಿಸಿದಂತೆ ಇದು ಮೊದಲ ಅಧ್ಯಯನವಾದುದರಿಂದ ಮತ್ತು ವಿಷಯದ ತಾತ್ವಿಕತೆಗೆ ತಕ್ಕಂತೆ ಈ ಅಧ್ಯಯನ ವ್ಯಾಪಕ ಆವರಣವನ್ನು ಅನಿವಾರ್ಯವಾಗಿ ಪಡೆದುಕೊಂಡಿದೆ.

ಭಾಷೆಯ ಕುರಿತಾದ ಮಡಿವಂತಿಕೆಯ ಯೋಚನೆಗಳು ವಸಾಹತೋತ್ತರ ಕಾಲಘಟ್ಟದಲ್ಲಿ ಬದಲಾಗಿದೆ. ಜಾಗತಿಕ ಭಾಷೆಯಾಗಿ ಇಂಗ್ಲೀಷ್ ಮುನ್ನೆಲೆಗೆ ಬಂದಿದ್ದರೆ, ತುಳುವಿನಂತಹ ಜನಭಾಷೆಗಳು ತಾವು ಅಪರಿಪೂರ್ಣ ಎಂಬ ನಿಲುವುಗಳಿಂದ ಹೊರ ಬರುತ್ತಿವೆ. ಭಾಷಾಂತರ ಅಧ್ಯಯನದ ಹಿನ್ನೆಲೆಯಲ್ಲಿ ಗಮನಿಸಿದರೆ ಕನ್ನಡದ ಹತ್ತನೇ ಶತಮಾನದ ಪ್ರಾಚೀನ ಕಾವ್ಯಗಳಲ್ಲಿನ ಮರುಸೃಷ್ಟಿಯ ಚಿಂತನೆಗಳು ವಸಾಹತೋತ್ತರ ಕಾಲಘಟ್ಟದಲ್ಲಿ ಮತ್ತೆ ಮುನ್ನೆಲೆಗೆ ಬಂದಿವೆ. ಅನುವಾದಗಳ ಮೂಲಕ ಮೂಲ ಮತ್ತು ಅನುವಾದಿತ ಕೃತಿಗಳ ಭಾಷೆಯ ಶಕ್ತಿ ಮತ್ತು ಮಿತಿಗಳು ಅರಿವಿಗೆ ಬರುತ್ತವೆ. ಅನುವಾದದಿಂದ ಮೂಲ ಕೃತಿಗೆ ವಿಸ್ತಾರವಾದ ಚೌಕಟ್ಟು ಒದಗುತ್ತದೆ. ಅನುವಾದವೆಂದರೆ ಭಿನ್ನತೆಗಳನ್ನು ಗುರುತಿಸುವ ಮತ್ತು ಗೌರವಿಸುವ ಕೆಲಸ. ತೌಲನಿಕ ಸಾಹಿತ್ಯ ಅಧ್ಯಯನ ಮತ್ತು ಅರ್ಥಮೀಮಾಂಸೆ ಇವುಗಳ ಅಧ್ಯಯನದ

ಭಾಗವಾಗಿ ಅನುವಾದದ ಚರ್ಚೆ ಹೊಸ ಸ್ವರೂಪ ಪಡೆದುಕೊಂಡಿದೆ ಎನ್ನುವುದು ತುಳು ಅನುವಾದ ಪ್ರಕ್ರಿಯೆಗಳ ಅಧ್ಯಯನದಿಂದ ತಿಳಿಯುತ್ತದೆ.

ಫಲಿತಗಳು

ತುಳುವಿನ ಅನುವಾದ ವಾಙ್ಮಯವನ್ನು ಸಾಹಿತ್ಯ ಕೃತಿಯೊಂದರ ಸೃಷ್ಟಿಯ ಹಿಂದಿನ ಸಾಂಸ್ಕೃತಿಕ, ಸಾಮಾಜಿಕ ಮತ್ತು ರಾಜಕೀಯ ಆಯಾಮಗಳ ಜೊತೆಗೆ ಚರ್ಚಿಸಿ, ತುಳು ಅನುವಾದ ಪ್ರಕ್ರಿಯೆಯು ತನ್ನ ಪರಿಸರದೊಂದಿಗೆ ಅನುಸಂಧಾನ ಮಾಡಿಕೊಂಡ ಬಗೆಯನ್ನು ಗುರುತಿಸುವುದು ಈ ಅಧ್ಯಯನದ ಉದ್ದೇಶ.

ತುಳು ಸಾಹಿತ್ಯ ಚರಿತ್ರೆಯ ನಿರ್ಮಿತಿಯಲ್ಲಿ ಅನುವಾದ ಅತ್ಯಂತ ಮಹತ್ವದ ಕಾರ್ಯ ನಿರ್ವಹಿಸಿದೆ. ತುಳು ಅನುವಾದ ಸಾಹಿತ್ಯದ ಹಿಂದೆ ತುಳು ಭಾಷೆ–ಸಾಹಿತ್ಯ–ಸಂಸ್ಕೃತಿಗೆ ಘನತೆ, ಗೌರವ ತಂದು ಕೊಡುವ ಪ್ರಯತ್ನ ಕಾಣುತ್ತದೆ. ಈ ಅನುವಾದಗಳು ತುಳುವಿನಲ್ಲಿ ಸೃಜನಶೀಲ ಕೃತಿಗಳ ಉಗಮಕ್ಕೆ ಕಾರಣವಾಗಿವೆ. ಮಾತ್ರವಲ್ಲ ತುಳು ಭಾಷೆ–ಸಾಹಿತ್ಯ ಬೆಳವಣಿಗೆಯ ಈ ಘಟ್ಟಗಳ ಅಧ್ಯಯನ ತುಳುನಾಡಿನ ಚಾರಿತ್ರಿಕ, ಸಾಂಸ್ಕೃತಿಕ, ಸಾಮಾಜಿಕ, ರಾಜಕೀಯ ಸ್ವರೂಪಗಳ ಅಧ್ಯಯನವೂ ಆಗಿದೆ.

ತುಳುನಾಡು–ನುಡಿ, ಸಾಹಿತ್ಯ, ಸಂಸ್ಕೃತಿಯ ಚಾರಿತ್ರಿಕತೆಯನ್ನು ಗಮನಿಸಿದಾಗ ತುಳು ಭಾಷೆ ಮೌಖಿಕವಾಗಿ ಅತ್ಯಂತ ಗಟ್ಟಿಯಾದ ಜನಭಾಷೆಯಾಗಿದೆ. ಸುಮಾರು ಎರಡು ಸಾವಿರ ವರ್ಷಗಳಿಗಿಂತಲೂ ಪ್ರಾಚೀನವಾಗಿರುವ ತುಳು ಭಾಷೆಯು ತುಳುನಾಡಿನ ಭೌಗೋಳಿಕತೆ, ಅಧಿಕಾರ ವಿಹೀನತೆ, ಪ್ರಭುತ್ವದ ಆಶ್ರಯ ಇಲ್ಲದಿರುವಿಕೆ, ಶೈಕ್ಷಣಿಕ ಸ್ಥಾನಮಾನದ ಕೊರತೆಗಳ ಕಾರಣದಿಂದ ಗ್ರಂಥಸ್ಥ ಸಾಹಿತ್ಯದ ನೆಲೆಯಲ್ಲಿ ಹಿಂದುಳಿಯುವಂತಾಯಿತು. ತುಳು ಗ್ರಂಥಸ್ಥ ಸಾಹಿತ್ಯದ ಚರಿತ್ರೆಯ ನಿರ್ಮಾಣಕ್ಕೆ ಉಪಲಬ್ಧ ಪ್ರಾಚೀನ ತುಳು ಕಾವ್ಯಗಳು ಸಹಕಾರಿಯಾಗಿವೆಯಾದರೂ ಅವುಗಳು ಕಾವ್ಯಧರ್ಮ ಮತ್ತು ಜೀವನಧರ್ಮ ಇವೆರೆಡರಲ್ಲಿಯೂ ತುಳುತನದಿಂದ ಹೊರಗುಳಿದುದರಿಂದ ತುಳು ಸಾಹಿತ್ಯಕ್ಕೆ ಒಂದು ಪರಂಪರೆಯನ್ನು ನಿರ್ಮಿಸುವುದಕ್ಕೆ ಸಾಧ್ಯವಾಗಲಿಲ್ಲ.

ತುಳು ಅನುವಾದ ಪ್ರಕ್ರಿಯೆಗೆ ಒತ್ತಾಸೆ, ನಿಲುವು ಮತ್ತು ಪ್ರೇರಣೆಗಳು ಆಧುನಿಕ ಕಾಲಘಟ್ಟದಲ್ಲಿ ಮಿಶನರಿಗಳಿಂದ ಮೊದಲ್ಗೊಂಡು, ತುಳು ಸಾಹಿತ್ಯ ಚಳುವಳಿಯ ಕಾಲಕ್ಕೆ ಮುಂದುವರೆದು, ೧೯೭೦ರ ದಶಕಗಳ ನಂತರ ತುಳು ಪುನರುಜ್ಜೀವನದ ಆಶಯದಲ್ಲಿ ವ್ಯಾಪಕವಾಗಿ ಬೆಳೆದು ತುಳು ಅನುವಾದ ವಾಙ್ಮಯ ಸೃಷ್ಟಿಗೆ ಕಾರಣವಾಗಿದೆ. ವಸಾಹತು ಕಾಲಘಟ್ಟ ಮತ್ತು ವಸಾಹತೋತ್ತರ ಕಾಲಘಟ್ಟಗಳಲ್ಲಿ ವಿವಿಧ ರೂಪುರೇಷೆಗಳಲ್ಲಿ ಚಲನಶೀಲವಾಗಿದೆ. ವಸಾಹತು ಕಾಲಘಟ್ಟದಲ್ಲಿ ಪ್ರಾದೇಶಿಕ ಭಾಷೆಗಳ ಅನನ್ಯತೆಯ ಜಾಗೃತಿ, ವಸಾಹತುಶಾಹಿಯ ಸ್ಥಳೀಕರಣ, ರಾಷ್ಟ್ರೀಯತೆಯ ಉಗಮ, ಮುದ್ರಣ ತಂತ್ರಜ್ಞಾನ ಇತ್ಯಾದಿಗಳ ಪ್ರಭಾವದಿಂದ ತುಳುವಿನ ಸಾಂಸ್ಕೃತಿಕ ಪ್ರಜ್ಞೆಯೊಂದು ಸಾಮೂಹಿಕವಾಗಿ ರೂಪುಗೊಂಡು ಚಳುವಳಿಯ ಮನೋಧರ್ಮ ಬೆಳೆಯಿತು. ವಸಾಹತೋತ್ತರ ಕಾಲಘಟ್ಟದಲ್ಲಿ ಜನಭಾಷೆಗಳ ಎಚ್ಚರ, ದೇಸೀವಾದ,

ಕೆಳಸ್ತರದ ಚರಿತ್ರೆ ನಿರ್ಮಾಣದ ಅಶಯ, ಅರಿವಿನ ವಿಸ್ತಾರ, ತನ್ನತನದ ಹುಡುಕಾಟ, ಅಸ್ಮಿತೆಯ ಪ್ರಶ್ನೆ ಮತ್ತು ಶಾಸ್ತ್ರೀಯ ಸ್ಥಾನಮಾನ ಮುಂತಾದ ಶೈಕ್ಷಣಿಕ, ರಾಜಕೀಯ ನಿಲುವುಗಳಿಗೆ ಅನುಗುಣವಾಗಿ ತುಳುವಿನ ಸಂವರ್ಧನೆ ಮತ್ತು ವಿಸ್ತರಣೆಯ ಅಶಯಗಳು ಮುನ್ನೆಲೆಗೆ ಬಂದವು. ತುಳುವಿನ ಗುರುತಿನ ಇಕ್ಕಟ್ಟುಗಳನ್ನು ಮೀರುವುದಕ್ಕಾಗಿ ಮೌಖಿಕವಾಗಿದ್ದ ತುಳು ಭಾಷೆಯಲ್ಲಿ ಅರಂಭವಾದ ಬರವಣಿಗೆಯ ಕ್ರಿಯಾಚರಣೆಗೆ ಪೂರಕವಾಗಿ, ಸಾಧನವಾಗಿ ಅನುವಾದ ಚಟುವಟಿಕೆಗಳ ಅಗತ್ಯಗಳು ಮೂಡಿಬಂದವು.

ತುಳುವಿನ ಸಂಸ್ಕೃತೀಕರಣ ಪ್ರಕ್ರಿಯೆಯಲ್ಲಿ ತುಳುವಿನಲ್ಲಿ ಪ್ರಾಚೀನ ಮಹಾಕಾವ್ಯಗಳನ್ನು ಸಂಸ್ಕೃತದಿಂದ ಮರುಸೃಷ್ಟಿಸಿಕೊಂಡ ಬ್ರಾಹ್ಮಣರ ಪಾತ್ರ ಮತ್ತು ತುಳುವಿನಲ್ಲಿ ತುಳು ಗ್ರಂಥಸ್ಥ ಸಾಹಿತ್ಯವನ್ನು ಕನ್ನಡ ಲಿಪಿಯಲ್ಲಿ ನಿರೂಪಿಸಿ ಆಧುನೀಕರಣಗೊಳಿಸಿದ ಪ್ರಕ್ರಿಯೆಯಲ್ಲಿ ಮಿಶನರಿಗಳ ಪಾತ್ರವನ್ನು ಗುರುತಿಸಬಹುದು. ವಸಾಹತುಶಾಹಿಯ ಮಹತ್ತರ ಬದಲಾವಣೆ 'ಸ್ವ' ವನ್ನು ಅರಿಯುವ ಮತ್ತು 'ಅನ್ಯ'ವನ್ನು ಕಲ್ಪಿಸಿ ಕೊಳ್ಳುವ ಸ್ವರೂಪದಲ್ಲಿದೆ. ತುಳುವಿಗೆ ಲಿಪಿ ಇದೆ, ತುಳು ಲಿಪಿಯಲ್ಲಿ ರಚಿತವಾದ ಕಾವ್ಯಗಳಿವೆ ಎಂಬುವುದು ಮಿಶನರಿಗಳಿಗೆ ತಿಳಿದಿರಲಿಲ್ಲ. ಮಿಶನರಿಗಳು ತುಳು ಲಿಪಿಯ ಕುರಿತು ಯಾವುದೇ ಗೊಂದಲವಿಲ್ಲದೆ ಕನ್ನಡ ಲಿಪಿಯನ್ನು ಬಳಸಿಕೊಂಡರು. ಮಿಶನರಿಗಳು ಬೈಬಲನ್ನು ತುಳುವಿನ ಯಾವುದೇ ಸಾಹಿತ್ಯಿಕ ಮಾದರಿಗಳಿಲ್ಲದೆ ಭಾಷಾಂತರಿಸಿಕೊಂಡರು. ಬೈಬಲ್ ಅನುವಾದ ತುಳುವಿನಲ್ಲಿ ಅನುವಾದ ಪ್ರಕ್ರಿಯೆಯನ್ನು ಮಾತ್ರ ಹುಟ್ಟು ಹಾಕಿದ್ದಲ್ಲ. ಬದಲಾಗಿ 'ಕೃತಿ'ಯನ್ನು ಹುಟ್ಟು ಹಾಕಿತು. ಮಿಶನರಿಗಳು ತುಳುವಿನಲ್ಲಿ 'ಬರವಣಿಗೆ' ಎಂಬ ಪ್ರಕ್ರಿಯೆಯನ್ನು ಹುಟ್ಟು ಹಾಕಿದರು. ಯಾವುದೇ ಭಾಷೆ ಅತ್ಯಾಧುನಿಕ ಅನ್ನಿಸಿಕೊಳ್ಳಬೇಕಾದರೆ ಆ ಭಾಷೆಯಲ್ಲಿ ಸಾಹಿತ್ಯವಿರಬೇಕು ಅನ್ನುವ ಪಾಶ್ಚಾತ್ಯ ಚಿಂತನೆಗೆ ಅನುಗುಣವಾಗಿ ವ್ಯಾಕರಣ, ಶಬ್ದಕೋಶ, ಪಠ್ಯಪುಸ್ತಕಗಳನ್ನು ತಯಾರಿಸಿಕೊಂಡರು. Epistemology(ಜ್ಞಾನ ಮೀಮಾಂಸೆ) ಮಾಹಿತಿಯನ್ನು ತಿಳುವಳಿಕೆಯನ್ನಾಗಿ ಪರಿವರ್ತಿಸುವ ಈ ಪಾಶ್ಚಾತ್ಯ ಮನೋಭಾವಕ್ಕೆ ಪೂರಕವಾಗಿ ಮಿಶನರಿಗಳು ಕಟ್ಟಿಕೊಂಡ, ಕಲ್ಪಿಸಿಕೊಂಡ ತುಳುನಾಡಿನ ಮಾಹಿತಿಗಳನ್ನು ತಮ್ಮ ಪಶ್ಚಿಮದ ಯೋಜನೆ-ಯೋಚನೆಗೆ ಅನುಗುಣವಾಗಿ ಅನುಸಂಧಾನ ಮಾಡಿಕೊಂಡರು. ಮಿಶನರಿಗಳ ಅನುವಾದಗಳು ಅವುಗಳ ಮೂಲ ಉದ್ದೇಶಗಳನ್ನು ಮೀರಿಯೂ ತೌಳವ ಮುಂಚಲನೆಗೆ ಕಾರಣವಾಗಿದೆ. ತುಳುನಾಡು-ನುಡಿಯ ಪ್ರಜ್ಞೆ ಮತ್ತು ವಿಕಸನಕ್ಕೆ, ತುಳುವಿಗೊಂದು ಸಾಂಸ್ಕೃತಿಕ ಚರಿತ್ರೆಯ ನಿರ್ಮಾಣಕ್ಕೆ ಕಾರಣವಾಗಿದೆ. ಆದರೆ ಮಿಶನರಿ ಅನುವಾದಗಳು ತುಳು ಸಂಸ್ಕೃತಿ, ತುಳು ಆಡುಭಾಷೆಯ ಕಸು, ಕಾಲಘಟ್ಟದ ಅಗತ್ಯಗಳ ನಡುವೆ ಸಮತೋಲನವನ್ನು ಸಾಧಿಸಲಿಲ್ಲ. ತುಳು ಭಾಷೆಯನ್ನು ಸೃಜನಶೀಲಗೊಳಿಸುವುದಕ್ಕೆ ಮಿಶನರಿ ಅನುವಾದಗಳಿಂದ ಸಾಧ್ಯವಾಗಲಿಲ್ಲ.

ತುಳು ಯಕ್ಷಗಾನಗಳ ಅನುವಾದಗಳು ಭಾಷೆಯ ಬೆಳವಣಿಗೆಗೆ ಮಹತ್ತರ ಕೊಡುಗೆಯನ್ನು ನೀಡಿದೆ. ಸಾಮಾಜಿಕತೆ ಮತ್ತು ರಾಜಕೀಯ ಸ್ಥಿತ್ಯಂತರ ಕಾಲದಲ್ಲಿ ನಡೆದ ಅನುವಾದಗಳಿಗೆ ಭಾವನಾತ್ಮಕತೆ ಮತ್ತು ಪರಂಪರೆಯ ಕುರಿತಾದ ಹುಡುಕಾಟಗಳು ಕೂಡುಬಿಂದುವಾಗಿದೆ. ರಂಗಪಠ್ಯ ಮತ್ತು ಓದುಗರ ಪಠ್ಯ

ಹೀಗೆ ಎರಡು ರೀತಿಯಲ್ಲಿ ಬೆಳೆಯುವ ಸಾಧ್ಯತೆಗಳಿದ್ದರೂ, ಮನರಂಜನೆ ಮತ್ತು ಆರ್ಥಿಕ ಆಯಾಮಗಳನ್ನೇ ತುಳು ಭಾಷೆಯ ಬೆಳವಣಿಗೆಗೆ ಪೂರಕವಾಗಿ ಬಳಸಿಕೊಂಡಿದೆ.

ಅಕ್ಷರಿಕವಾಗಿ ಗುರುತಿಸಿಕೊಳ್ಳದ ತುಳು ಭಾಷೆ ಅಪಾರ ಜಾನಪದ ಸಾಹಿತ್ಯವನ್ನು ಸೃಷ್ಟಿಸಿಕೊಂಡಿದೆ. ತನ್ನ ಅಸ್ತಿತ್ವದ ಪ್ರತೀಕವಾಗಿ ರೂಪಿಸಿಕೊಂಡ ಈ ಮೌಖಿಕ ಸಂರಚನೆಗಳನ್ನು ತುಳು ಬಹುಶಿಸ್ತೀಯ ತಾತ್ವಿಕ ಭಿತ್ತಿಗಳಲ್ಲಿ ಇಂಗ್ಲೀಷ್, ಕನ್ನಡ ಮತ್ತು ಜರ್ಮನ್ ಮುಂತಾದ ಭಾಷೆಗಳಿಗೆ ಅನುವಾದಿಸಲಾಗಿದೆ. ತುಳುವಿನ ಸಾಂಸ್ಕೃತಿಕ ಚರಿತ್ರೆಯನ್ನು ಜಾಗತಿಕವಾಗಿ ಗುರುತಿಸುವ ದೃಷ್ಟಿಯಿಂದ ಶೈಕ್ಷಣಿಕ ನೆಲೆಯಲ್ಲಿ ಜಾನಪದ ಅನುವಾದಗಳು ನಡೆದಿವೆ.

ತುಳುವಿನ ಸಮಗ್ರ ಬೆಳವಣಿಗೆಯ ದೃಷ್ಟಿಯಿಂದ ೧೯೭೦ರ ದಶಕಗಳ ನಂತರದ ತುಳು ಪುನರುಜ್ಜೀವನದ ಕಾಲಘಟ್ಟ ಅತ್ಯಂತ ಮಹತ್ವದ್ದು. ತುಳು ಭಾಷೆ, ಸಾಹಿತ್ಯದ ಗ್ರಂಥಸ್ಥ ಅಭೀಪ್ಸೆಗೆ ಪೂರಕವಾಗಿ ಒದಗಿಬಂದದ್ದು ಕನ್ನಡ ಮತ್ತು ಇತರ ಭಾಷೆಗಳಿಂದ ಅನುವಾದಗೊಂಡ ಕತೆ, ಕಾದಂಬರಿ, ನಾಟಕ ಮುಂತಾದ ಸಾಹಿತ್ಯ ಪ್ರಕಾರಗಳು. ತುಳು ಜಾನಪದ ಸಂಶೋಧನೆ ಮತ್ತು ಅಧ್ಯಯನ ಇದಕ್ಕೆ ಪೂರಕವಾಗಿ ಒದಗಿಬಂದು ತುಳು ಭಾಷೆ, ಸಾಹಿತ್ಯದ ಸಂವರ್ಧನೆಯ ಆಶಯ ಸಾಂಸ್ಕೃತಿಕ, ರಾಜಕೀಯ ಅಪೇಕ್ಷೆಯ ರೂಪದಲ್ಲಿ ದುಡಿದಿವೆ. ತುಳುವಿಗೆ ಮೂಡಿದ ಅರಿವು ಮತ್ತು ಎಚ್ಚರದಿಂದ ನಡೆದ ಅನುವಾದ ಪ್ರಕ್ರಿಯೆಯಲ್ಲಿ ಆಕರ ಕೃತಿಗಿಂತ ಲಕ್ಷ್ಯಭಾಷೆಯ ಚಾರಿತ್ರಿಕ, ಸಾಂಸ್ಕೃತಿಕ ಅಂಶಗಳೇ ಅನುವಾದ ಪ್ರಕ್ರಿಯೆಯನ್ನು ಪ್ರಭಾವಿಸಿದೆ.

ಪುನರುಜ್ಜೀವನ ಕಾಲಘಟ್ಟದಲ್ಲಿ ತುಳುವಿಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಅನುವಾದ ನಡೆಸಿ ಆಧುನಿಕ ತುಳು ಸಾಹಿತ್ಯದ ಸಂವರ್ಧನೆ ಮತ್ತು ವಿಸ್ತರಣೆಗೆ ಕಾರಣರಾದವರು ಕೆದಂಬಾಡಿ ಜತ್ತಪ್ಪ ರೈಯವರು. ಇವರ 'ಚೋಮನದುಡಿ' ತುಳು ಸಾಹಿತ್ಯ ಕ್ಷೇತ್ರದ ಚಾರಿತ್ರಿಕ ಮಗ್ಗುಲು. ವೈಯಕ್ತಿಕವಾಗಿ ತುಳು ಅಭಿಮಾನ, ತುಳು ಪುನರುಜ್ಜೀವನದ ಆಕಾಂಕ್ಷೆಯಿಂದ ಹುಟ್ಟಿಕೊಂಡ ಈ ಅನುವಾದ ಕೃತಿ ತುಳು ಗದ್ಯ ಸಾಹಿತ್ಯ ನಿರ್ಮಾಣಕ್ಕೆ ಒಂದು ರಹದಾರಿಯಾಯಿತು. ಕೆದಂಬಾಡಿ ಜತ್ತಪ್ಪ ರೈಯವರ 'ಚೋಮನದುಡಿ' ಕೃತಿಯು ಅನುವಾದ ತಾತ್ವಿಕತೆಗಳ ಕುರಿತಾಗಿ ಅನುವಾದ ಕ್ಷೇತ್ರದಲ್ಲಿ ಪರಿಣಾಮಕಾರಿಯಾದ ಚರ್ಚೆಗೆ ಅವಕಾಶ ನೀಡಿದೆ. ಕನ್ನಡ 'ಚೋಮನದುಡಿ' ಮತ್ತು ತುಳು 'ಚೋಮನದುಡಿ'ಯ ತೌಲನಿಕ ಅಧ್ಯಯನದಿಂದ ಎರಡು ಭಾಷೆಗಳ ಪೋಷಕವಾಗಿ ನಡೆಯುವ ಅನುವಾದ ಪ್ರಕ್ರಿಯೆಗಿಂತ ಭಿನ್ನವಾಗಿರುವ ಅನುವಾದ ತಾತ್ವಿಕತೆಯು ಮುನ್ನೆಲೆಗೆ ಬಂದಿದೆ. ತುಳುವಿನ ಸಾಂಸ್ಕೃತಿಕ ಅರಿವಿನ ಲೋಕವನ್ನು ವಿಸ್ತರಿಸುವ ನಿಟ್ಟಿನಲ್ಲಿ 'ಚೋಮ' ಹೆಚ್ಚು ಸ್ಥಳೀಕರಣಕ್ಕೆ ಒಳಗಾಗುತ್ತಾನೆ. ತುಳುವಿನ 'ಸ್ವ' ಮರುವಿನ್ಯಾಸಗೊಳ್ಳುತ್ತದೆ. ಈ ಕೃತಿಯಲ್ಲಿ ತುಳು ಭಾಷೆ, ಸಂಸ್ಕೃತಿಯ ಜ್ಞಾನದ ಮರುಮಂಡನೆ ಒಟ್ಟು ತುಳು ಪುನರುಜ್ಜೀವನದ ಆಶಯಕ್ಕೆ ತಕ್ಕಂತೆ ನಡೆದಿದೆ. ತುಳು ಸಂಸ್ಕೃತಿಯ ಒಳಗಿನ ಕತೆಯಾಗಿರುವ ಕಾರಣದಿಂದಾಗಿ ಕನ್ನಡದ ಚೋಮನನ್ನು ತುಳುವಿನ ಚೋಮನನ್ನಾಗಿ ಮಾಡುವುದಕ್ಕೆ ಸಾಧ್ಯವಾಗಿದೆ. ಒಂದು ಸಾಹಿತ್ಯ ಕೃತಿ ಆಯಾ ಭಾಷೆಯ ಸಂಸ್ಕೃತಿಯ ನೆಲೆಯಿಂದ ಮರುಸೃಷ್ಟಿಕೊಂಡಾಗ ನಡೆಯಬಹುದಾದ ಸೃಜನಶೀಲ ವಿಸ್ತಾರಕ್ಕೆ ತುಳು

'ಚೋಮನದುಡಿ' ಉತ್ತಮ ಉದಾಹರಣೆಯಾಗಿದೆ. ತುಳು ಭಾಷೆಯ ಶಕ್ತಿ, ಸಾಂಸ್ಕೃತಿಕ ಅನನ್ಯತೆಗಳನ್ನು ಬಳಸಿಕೊಂಡು ಕನ್ನಡದ ಎದುರು ತುಳು ಭಾಷೆಯ ಸಾಹಿತ್ಯಿಕ ಸಾಮರ್ಥ್ಯವನ್ನು ಮುನ್ನೆಲೆಗೆ ತರುವುದಕ್ಕೆ ಕನ್ನಡ 'ಚೋಮನದುಡಿ' ಅವಕಾಶಗಳನ್ನು ನೀಡಿದೆ. ಆಕರ ಭಾಷೆ – ಲಕ್ಷ್ಯ ಭಾಷೆಯ ನಡುವಿನ ಸಂಬಂಧಗಳ ಇಕ್ಕಟ್ಟುಗಳನ್ನು ಮೀರುವುದಕ್ಕೆ ಅನುವಾದ ಪ್ರಕ್ರಿಯೆ ಒದಗಿಸುವ ಸಾಧ್ಯತೆಗಳನ್ನು ಈ ಕೃತಿ ಮುಂದಿರಿಸುತ್ತದೆ.

ಪದ್ಯಕೃತಿಗಳು, ಗದ್ಯಕೃತಿಗಳು ಬಹುಮುಖ್ಯವಾಗಿ ಕನ್ನಡದಿಂದ ತುಳುವಿಗೆ ಅನುವಾದಗೊಳ್ಳುವ ಮೂಲಕ ತುಳುವಿನಲ್ಲಿಯೂ ಕೂಡ ಅಧುನಿಕ ಸಾಹಿತ್ಯ ರಚನೆಗಳಾದ ನಾಟಕ, ಕಾದಂಬರಿ, ಸಣ್ಣಕತೆ ಮತ್ತು ಕವನಗಳ ಮಾದರಿಗಳು, ಪ್ರಕಾರಗಳು ಪರಿಚಯಗೊಂಡು ಸ್ವತಂತ್ರ ಸಾಹಿತ್ಯ ಸೃಷ್ಟಿಗೆ ಕಾರಣವಾಗಿದೆ. ತುಳು ಭಾಷೆ ಮತ್ತು ಸಾಹಿತ್ಯದ ಪುನರುಜ್ಜೀವನದ ಅಪೇಕ್ಷೆಯನ್ನು ಅನುವಾದಗಳಲ್ಲಿ ತೌಳವ ಸ್ಥಳೀಕರಣ ಮತ್ತು ತುಳು ಭಾಷೆಯನ್ನು ಶೈಕ್ಷಣಿಕ ಆಕರವನ್ನಾಗಿ ರೂಪಿಸುವುದರಲ್ಲಿ ಸಾಧಿಸಲಾಗಿದೆ.

ಕನ್ನಡ ಆಡಳಿತ ಮತ್ತು ಶೈಕ್ಷಣಿಕ ಭಾಷೆಯಾಗಿರುವ ಕರ್ನಾಟಕದೊಳಗಿನ ತುಳು ಭಾಷೆ ಕನ್ನಡದ ಕೃತಿಗಳನ್ನು ತನ್ನದಾಗಿಸಿಕೊಳ್ಳುವಾಗ ಆಕರ ಕೃತಿಯ ಅಧಿಕಾರದಲ್ಲಿ ಕರಗಿಹೋಗದಂತೆ ಭಾಷಿಕ ಅನುಸಂಧಾನ ನಡೆಸಿವೆ. ತುಳು ಅನುವಾದ ಪ್ರಕ್ರಿಯೆಯಲ್ಲಿ ಮೂರು ಭಾಷಿಕ ಮಾದರಿಗಳನ್ನು ಕಾಣಬಹುದು. ಒಂದು–ತುಳು ಜಾನಪದ ಭಾಷೆಯ ಬನಿ, ಕಸು, ಶಕ್ತಿಯ ಬಳಕೆ. ಎರಡು–ಸಂಸ್ಕೃತದ ಪ್ರಭಾವದಲ್ಲಿ ರೂಪುಗೊಂಡ ಭಾಷೆ. ಮೂರು–ಕನ್ನಡದ ಪ್ರಭಾವಲಯದಲ್ಲಿ ಬಳಕೆಯಾದ ಭಾಷೆ. ಆಧುನಿಕ ಕಾಲಘಟ್ಟದಲ್ಲಿ ಕನ್ನಡ ಪ್ರಭಾವಲಯದ ಓದುಗರ ವರ್ಗದ ಆಶಯಗಳಿಗೆ ಅನುಗುಣವಾಗಿ ಮತ್ತು ಕನ್ನಡ ಭಾಷೆ, ಸಾಹಿತ್ಯವನ್ನು ವಿರೋಧಿ ಭಾವದಿಂದ ನೋಡದಂತೆ ತುಳು ಅನುವಾದ ಸಾಹಿತ್ಯ ಸೃಷ್ಟಿಯಾಗಿದೆ. ತುಳುನಾಡಿನ ಬಹುಭಾಷಿಕತೆ ಮತ್ತು ದ್ವಿ–ಭಾಷಿಕತೆ ಇವೆರಡರ ಪ್ರಭಾವವನ್ನು ಅನುವಾದಗಳಲ್ಲಿ ಗುರುತಿಸಬಹುದು.

ತುಳುವಿನ ಅನುವಾದಗಳಲ್ಲಿ ಪ್ರಮುಖವಾಗಿ ಅನುಸಂಧಾನಗೊಂಡಿರುವುದು ತುಳುವಿನ ಸಾಂಸ್ಕೃತಿಕ ಅನನ್ಯತೆ. ತುಳುವಿನ ಎಲ್ಲಾ ಘಟ್ಟಗಳಲ್ಲಿನ ಅನುವಾದ ಚಟುವಟಿಕೆಗಳನ್ನು ಪ್ರಭಾವಿಸಿರುವ ಮತ್ತು ಪ್ರತಿನಿಧಿಸುವ ನೆಲೆ ಅದರ ಸಂಸ್ಕೃತಿ. ಸಂಸ್ಕೃತಿ ಕೇಂದ್ರಿತ ಪಠ್ಯಗಳು ತುಳು ಅನುವಾದ ಪ್ರಕ್ರಿಯೆಯ ಮಹತ್ವದ ಅಂಶ.

ತುಳು ಅನುವಾದ ಪ್ರಕ್ರಿಯೆಯನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ವಿವರಿಸಿಕೊಂಡಾಗ ಎರಡು ಸೃಷ್ಟಿಶೀಲ ಹಂಬಲಗಳು ಕಾಣುತ್ತವೆ. ಒಂದು–ತನ್ನ ಬಳಕೆಯ ಅಥವಾ ತಾನು ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿರುವ ಭಾಷೆಯಲ್ಲಿ ಮೈ ತಳೆದ ಸ್ತ್ರೀತ್ವದ ಅನುಭವ, ಸಂವೇದನೆ, ತಿಳಿವನ್ನು ಬೇರೆ ಬೇರೆ ಭಾಷೆಗಳಿಗೆ ದಾಟಿಸುವುದು. ಇನ್ನೊಂದು – ತನ್ನ ಭಾಷೆಯಲ್ಲಿ ಇಲ್ಲದ, ತನ್ನ ಬರಹದ ವ್ಯಾಪ್ತಿಗಳಲ್ಲಿ ಇಲ್ಲದ ವಿಚಾರಗಳನ್ನು ಬೇರೆ ಭಾಷೆಗಳಿಂದ ಕೊಂಡು ತರುವುದು. ಈ ಎರಡು ಹಂಬಲಗಳು ಸ್ತ್ರೀಪರ ಚಿಂತನಾ ಕ್ರಮವೊಂದನ್ನು ವ್ಯಾಪಕಗೊಳಿಸುವ, ಚೈತನ್ಯಗೊಳಿಸುವ ಪರಿಭಾಷೆಯನ್ನು ಹೊಂದಿವೆ. ತುಳು

ನಾಡುನುಡಿ, ಪರಿಸರದೊಳಗೆ ಬಾಳಿ ಬದುಕಿದ 'ಮಿತ್ತಬೈಲ್ ಯಮುನಕ್ಕೆ'ಯಂತವರಿಗೆ ಸಾಮಾಜಿಕ ವ್ಯವಸ್ಥೆ ಪೂರಕವಾಗಿ ಒದಗಿ ಬಂದ ಬಗೆಯನ್ನು ವಿಶಾಲವ್ಯಾಪ್ತಿಯಲ್ಲಿ ಚರ್ಚೆಗೆ ಒಳಪಡಿಸುವ ಸಂದರ್ಭದಲ್ಲಿ ಲಿಂಗತ್ವದ ಭಿನ್ನ ಪ್ರತಿಮೆಗಳು ಹೊಸ ಸಿದ್ಧಾಂತಗಳ ನಿರ್ಮಾಣಕ್ಕೆ ದಾರಿಮಾಡಿಕೊಡುವುದಕ್ಕೆ ಅವಕಾಶಗಳಿವೆ. ಆದರೆ ಆಧುನಿಕ ತುಳು ಸಾಹಿತ್ಯ ಕೃತಿಗಳನ್ನು ಸಂಸ್ಕೃತಿ ಪಠ್ಯಗಳನ್ನಾಗಿಯೇ ಗ್ರಹಿಸಿ ಅನುವಾದಕ್ಕೆ ಆರಿಸಿಕೊಳ್ಳಲಾಗುತ್ತಿರುವ ಪ್ರಕ್ರಿಯೆಯ ಹಿಂದಿನ ಆಲೋಚನಾ ವಿನ್ಯಾಸಗಳು ಕೃತಿಯ ಒಳ ಹರಿವಿನ ತಾತ್ವಿಕತೆಗಳಿಗೆ ತಡೆಯುಂಟುಮಾಡುವುದನ್ನು ತುಳು ಅನುವಾದ ಅಧ್ಯಯನಗಳು ನಿರೂಪಿಸುತ್ತವೆ. ತುಳು ಮಾತೃರೂಪಿ ಸಂಸ್ಕೃತಿಯನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ನೋಡಿ, ಸ್ತ್ರೀವಾದಿ ಜಾನಪದದ ಅಧ್ಯಯನಗಳಿಗೆ ಮತ್ತು ಮಹಿಳಾ ಸಬಲೀಕರಣದ ಆಲೋಚನೆಗಳಿಗೆ ಅನುವು ಮಾಡಿಕೊಳ್ಳಲಾಗಿದೆ. 'ಸಿರಿ' ಪಾಡ್ದನದ ಕಥನ ಒಂದು ಆರಾಧನೆಯ, ಆಚರಣೆಯ ಭಾಗವಾಗಿ ಮಾತ್ರ ಉಳಿಯದೆ ಮಹಿಳಾ ವಿಮೋಚನೆಯ ಸಂಕಥನವಾಗಿ, ಮಾತೃಮೂಲೀಯ ತೌಳವ ಕುಟುಂಬ ವ್ಯವಸ್ಥೆಯಲ್ಲಿನ ಹೆಣ್ಣಿನ ಅಸ್ತಿತ್ವದ ಪ್ರತಿನಿಧೀಕರಣ ಮತ್ತು ಅಭಿವ್ಯಕ್ತಿಯ ಸಾಧ್ಯತೆಗಳಿಗೆ ಅವಕಾಶಗಳನ್ನು, ಸಾಧ್ಯತೆಗಳನ್ನು ಒದಗಿಸಿರುವುದನ್ನು ಕಂಡುಕೊಳ್ಳಲಾಗಿದೆ. ತುಳುವಿನಲ್ಲಿನ ಮಾತೃಮೂಲೀಯ ವ್ಯವಸ್ಥೆ ತುಳುವಿನ ಸಾಹಿತ್ಯ ಕೃತಿಗಳಿಗೆ ವಿಭಿನ್ನವಾದ ಸಾಂಸ್ಕೃತಿಕ, ಕೌಟುಂಬಿಕ ಚಹರೆಗಳನ್ನು ನೀಡಿದೆ. ಮೌಖಿಕ ಕೃತಿಗಳು ಮತ್ತು ಸೃಜನಶೀಲ ಕೃತಿಗಳಲ್ಲಿ ಹಾಸುಹೊಕ್ಕಾಗಿರುವ ಮಾತೃಮೂಲೀಯ ವ್ಯವಸ್ಥೆಯ ಚಹರೆಗಳು ತುಳು ಅನುವಾದ ಪ್ರಕ್ರಿಯೆಯಲ್ಲಿ ಮಹಿಳಾ ಪ್ರತಿನಿಧೀಕರಣವನ್ನು ಸಾಧ್ಯವಾಗಿಸಿದೆ. ಜನಪದ ಮಹಾಕಾವ್ಯದ ಅನುವಾದಗಳು, ಡಿ.ಕೆ ಚೌಟರ ಕೃತಿಗಳ ಅನುವಾದಗಳು ಮಹಿಳಾ ಹಕ್ಕಿನ ಪ್ರಶ್ನೆಗಳನ್ನು ಜಾಗತಿಕವಾಗಿ ಮರುನಿರ್ವಚಿಸಲು ಅವಕಾಶ ನೀಡುತ್ತವೆ.

ಅನುವಾದಗೊಳ್ಳಲಿರುವ ಆಕರ ಕೃತಿಯ ಪ್ರತಿಯೊಂದು ಪದವನ್ನು ಅರ್ಥಮಾಡಿಕೊಳ್ಳದೇ ಅನುವಾದ ಸಾಧ್ಯವಿಲ್ಲ. ಒಂದು ಸಾಹಿತ್ಯ ಕೃತಿಯನ್ನು ಸಂಪೂರ್ಣವಾಗಿ ಬಗೆಯದೇ, ಒಳಗು ಮಾಡಿಕೊಳ್ಳದೇ ಸಾಹಿತ್ಯ ಕೃತಿಯೊಂದರ ಓದನ್ನು ಓದುಗರು ಮುಗಿಸಬಹುದು. ಆದರೆ ಅನುವಾದಕರು ಪ್ರತಿಯೊಂದು ಪದದ ಒಳಹೊರಗನ್ನು ಅರ್ಥೈಸಿಕೊಳ್ಳಬೇಕಾದುದರಿಂದ ಪೂರ್ಣಪ್ರಮಾಣದ ಓದುಗರು ಯಾವತ್ತಿಗೂ ಅನುವಾದಕರೇ ಆಗಿರುತ್ತದೆ. ಅನುವಾದ ಒಂದು ಸೃಷ್ಟಿಕಾರ್ಯ. ಅಲ್ಲಿ ಪದ ಸೃಷ್ಟಿ, ಅರ್ಥ ಸೃಷ್ಟಿ ಮತ್ತು ಆಶಯ ಸೃಷ್ಟಿ ಎಂಬ ಮೂರು ನೆಲೆಗಳಿವೆ ಎನ್ನುವುದನ್ನು ಈ ಅಧ್ಯಯನ ಗುರುತಿಕೊಂಡಿದೆ.

ಜಾನಪದ ಪಠ್ಯಗಳು ಮತ್ತು ಸೃಜನಶೀಲ ಪಠ್ಯಗಳು ಇವೆರಡರ ಓದುಗರ ವರ್ಗ ಬೇರೆ ಬೇರೆ. ವಿಭಿನ್ನ ಮನೋಧರ್ಮದವರು. ತುಳು ಜನಪದ ಮಹಾಕಾವ್ಯವನ್ನು ಅನುವಾದ ಮಾಡುವ ವಿಧಾನವೇ ಬೇರೆ. ಕತೆ, ಕಾದಂಬರಿ, ಕವನಗಳನ್ನು ಅನುವಾದ ಮಾಡುವ ವಿಧಾನವೇ ಬೇರೆ. ಸೃಜನಶೀಲ ಬರಹಗಳ ಓದು ಸರಳ ಮತ್ತು ನಿರಾಳವಾಗಿರಬೇಕು. ಈ ಓದಿನ ಸಂದರ್ಭದಲ್ಲಿ ರಾಶಿ ರಾಶಿಯಾಗಿ ಮೂಲಪದಗಳು, ಸಾಂಸ್ಕೃತಿಕ ಪದಗಳು, ಪಾರಿಭಾಷಿಕ ಪದಗಳು ದೊರೆತರೆ ಓದುಗರ ದಾರಿಗೆ ತೊಡಕುಂಟಾಗಿ

ರಸಭಂಗವಾಗುತ್ತದೆ. ಇಂತಹ ಸಂದರ್ಭಗಳಲ್ಲಿ ವಿವರಣಾತ್ಮಕವಾದ ಅನುವಾದ ನೀಡಲಾಗಿದೆ. ಸಾಂಸ್ಕೃತಿಕ ಪದಕೋಶವನ್ನು ನೀಡಲಾಗಿದೆ.

ತುಳುನಾಡಿನೊಳಗಿನ ದ್ವಿಭಾಷಿಕತೆ ತುಳು ಅನುವಾದಗಳನ್ನು ಪ್ರೇರೇಪಿಸಿವೆ. ತುಳುವಿನ ಅನುವಾದ ಪ್ರಕ್ರಿಯೆಯಲ್ಲಿ ವಿವಿಧ ಭಾಷಿಕ ಮಾದರಿಗಳನ್ನು ಕಂಡುಕೊಳ್ಳಬಹುದು. ಭಾಷಿಕ ಸ್ವೀಕರಣೆ ಮತ್ತು ಭಾಷಾ ಬಾಂಧವ್ಯದ ಸಾಂಸ್ಕೃತಿಕ ಸ್ವೀಕರಣೆಯು ನಡೆದಿದೆ. ತುಳುಮಣ್ಣಿನ ವಾಸನೆಯನ್ನು ಕಡ್ಡಾಯವಾಗಿ ಸೃಷ್ಟಿಸಿಕೊಳ್ಳಬೇಕೆಂಬ ದೃಷ್ಟಿಯಿಂದ ತುಳುವಿನ ಸಾಂಸ್ಕೃತಿಕ ಪದಗಳನ್ನು ಯಥೇಚ್ಛವಾಗಿ ಬಳಸಿಕೊಳ್ಳಲಾಗಿದೆ. ಕನ್ನಡ, ಸಂಸ್ಕೃತ ಪದಗಳಿಗೆ ತದ್ಭವಗಳನ್ನು ಟಂಕಿಸಿಕೊಳ್ಳಲಾಗಿದೆ. ತುಳು ನುಡಿಗಟ್ಟು, ಗಾದೆ, ಆರಾಧನೆ, ಜಾನಪದ ಪರಂಪರೆಗಳನ್ನು ಬಳಸಿಕೊಳ್ಳುವ ಮೂಲಕ ಅನುವಾದ ಕೃತಿಗಳನ್ನು ಸ್ಥಳೀಕರಣಗೊಳಿಸುವ ಪ್ರಯತ್ನವನ್ನು ಮಾಡಲಾಗಿದೆ. ಅನುವಾದಗಳಲ್ಲಿ ಪದ ಮತ್ತು ಭಾಷಾ ಶೈಲಿ ಸ್ಥಳೀಕರಣ ಹೊಂದಿದೆ. ಆಕರ ಭಾಷೆಯಿಂದಲೂ ಪದ ಸ್ವೀಕಾರ, ಹೊಸ ಪದ ನಿರ್ಮಾಣ, ಹೊಸ ಅರ್ಥಧಾರಣೆ, ನುಡಿಬೆರಕೆ, ಪರ್ಯಾಯ ಪದಶೋಧ–ಸೃಷ್ಟಿ ಇತ್ಯಾದಿಗಳನ್ನು ನಡೆಸಿವೆ. ಮೂಲ ಕೃತಿಯ ಭಾಷೆ, ಛಂದಸ್ಸು, ಕಥಾವಸ್ತು, ಸಂವಿಧಾನ, ನಿರೂಪಣಾ ಕ್ರಮ, ತಾತ್ವಿಕತೆ ಇವೆಲ್ಲವುಗಳನ್ನು ಅನುಸರಣೆ ಇಲ್ಲವೇ ಅನುಸೃಷ್ಟಿಗಳ ಮೂಲಕ ಸಾಧಿಸಿದೆ.

ತುಳುವಿನ ಗುರುತಿನ ಪ್ರಶ್ನೆ ಮತ್ತು ಸ್ವಾಯತ್ತತೆಯ ಪ್ರಶ್ನೆಗಳು ತುಳುವಿನ ಅನುವಾದಗಳನ್ನು ಪ್ರಭಾವಿಸಿದೆ. ತುಳುನಾಡು ಮತ್ತು ನುಡಿಯನ್ನು ಎಚ್ಚರಿಸುವ ಭಾಗವಾಗಿದೆ. ತುಳು ಅನುವಾದ ಪ್ರಕ್ರಿಯೆಯನ್ನು ಒಂದು ಭಾಷಿಕ ಕ್ರಿಯೆಯನ್ನಾಗಿ ಮಾತ್ರ ನೋಡದೆ ಅದನ್ನು ಒಳಗು ಮಾಡಿಕೊಳ್ಳುವತ್ತ ಆಸಕ್ತವಾಗಿದೆ. ತುಳು ಅನುವಾದ ಪ್ರಕ್ರಿಯೆಯಲ್ಲಿ ಪದಶಃ ಅನುವಾದಕ್ಕಿಂತಲೂ ರೂಪಾಂತರ, ಭಾವಾನುವಾದ, ಸೃಜನಶೀಲ ಮಾದರಿಗಳು ಹೆಚ್ಚು. ಪರಿಷ್ಕರಣ, ವಿಸ್ತರಣೆ, ಸಂಕ್ಷೇಪೀಕರಣ ಮುಂತಾದ ಆಯಾಮಗಳು ತುಳು ಭಾಷೆಯ ಶಕ್ತಿಯನ್ನು ತೋರ್ಪಡಿಸಿ ಭಾಷೆಯ ಅಸ್ತಿತ್ವವನ್ನು ಸಾಕಾರಗೊಳಿಸುವುದಕ್ಕೆ ಬಳಕೆಯಾಗಿದೆ. ತಾವು ಆಯ್ಕೆ ಮಾಡಿಕೊಂಡ ಮೂಲಕ್ಕೆ ಮರುಸೃಷ್ಟಿಸಿಕೊಳ್ಳುವುದು, ಬೇಕಾದಂತೆ ವಿಸ್ತರಿಸಿಕೊಳ್ಳುವುದು, ಮೂಲ ಮತ್ತು ಲಕ್ಷ್ಯದ ಕುರಿತಾಗಿ ಶಾಸ್ತ್ರೀಯವಾದ ಅನುಸಂಧಾನಗಳಿಗಿಂತಲೂ ತುಳು ಸಾಹಿತ್ಯ ನಿರ್ಮಾಣದ ನಿಲುವು, ಒತ್ತಾಸೆಗಳೇ ಹೆಚ್ಚು ಮುನ್ನೆಲೆಗೆ ಬಂದಿದೆ.

ತುಳುವಿನ ಪ್ರಾಚೀನ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ವಿಚಾರಗಳನ್ನು ಅರಿಯುವುದಕ್ಕೆ ಶಾಸನ, ಲಿಖಿತ ಸಾಹಿತ್ಯ ಬರಹಗಳ ಕೊರತೆ ಇರುವುದರಿಂದ ತುಳು ಜಾನಪದ ಸಾಹಿತ್ಯವನ್ನು ಈ ಹಿನ್ನೆಲೆಯಲ್ಲಿ ಆಶ್ರಯಿಸಿಕೊಳ್ಳುವುದು ಅನಿವಾರ್ಯ. ಪಾಡ್ದನ ಆಧಾರಿತ ಧಾರ್ಮಿಕ ರಂಗಭೂಮಿಯನ್ನು ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ರಂಗಭೂಮಿಯ ಸ್ವರೂಪದಲ್ಲಿ, ಉರಲ್, ಮದಿಪು, ಪಾರಿ, ನುಡಿಗಟ್ಟು, ಗಾದೆ, ಒಗಟುಗಳನ್ನು ಸಾಹಿತ್ಯಿಕ ಸ್ವರೂಪಗಳಲ್ಲಿ, ಆಚರಣಾತ್ಮಕ ಕುಣಿತಗಳು ಮತ್ತು ಅವುಗಳಿಗೆ ಸಂಬಂಧಿಸಿದ ಹಿನ್ನೆಲೆಗಳಲ್ಲಿ ತುಳುವಿನ ಸಾಂಸ್ಕೃತಿಕ ಮತ್ತು ಭಾಷಿಕ ಸಾಮರ್ಥ್ಯವನ್ನು ಗುರುತಿಸಿ, ಅಧ್ಯಯನ ನಡೆಸಲು ವಿವಿಧ ಭಾಷೆಗಳಿಗೆ ಅನುವಾದಿಸಿಕೊಳ್ಳಲಾಗಿದೆ. ಈ ಅನುವಾದಗಳು

ಸಂಪೂರ್ಣವಾಗಿ ಅಧ್ಯಯನ ಮತ್ತು ಶೈಕ್ಷಣಿಕ ಮನೋಧರ್ಮದ್ದೇ ಹೊರತು ಸೃಜನಶೀಲ ಮಾದರಿಯದ್ದಲ್ಲ.

ಶೈಕ್ಷಣಿಕವಾಗಿ, ರಾಜಕೀಯವಾಗಿ, ಅವಗಣನೆಗೆ ಒಳಗಾದ ತುಳು ಸಾಂಸ್ಕೃತಿಕವಾಗಿ ಶ್ರೀಮಂತವಾದ ಮೌಖಿಕ ಸಾಹಿತ್ಯಪರಂಪರೆಯನ್ನು ಸೃಷ್ಟಿಸಿಕೊಂಡಿದೆ. ಆಧುನಿಕ ಕಾಲಘಟ್ಟದಲ್ಲಿ ತುಳುವಿನಲ್ಲಿ ಉಂಟಾದ ಭಾಷಿಕ ಎಚ್ಚರ, ತುಳು ಸಾಹಿತ್ಯ ಸೃಷ್ಟಿಗೆ ಅನುವು ಮಾಡಿಕೊಟ್ಟಿತು. ತುಳುವಿನಲ್ಲಿ ಸೃಷ್ಟಿಶೀಲ ಸಾಹಿತ್ಯ ರಚನೆಯ ಜೊತೆ ಜೊತೆಗೆ ಅನುವಾದಗಳ ಮೂಲಕವೂ ತುಳುವಿನ ಸಾಹಿತ್ಯಿಕ ಆವರಣವನ್ನು ವ್ಯಾಪಕಗೊಳಿಸುವ ಪ್ರಯತ್ನ ನಡೆಯಿತು. ತುಳುವಿನಲ್ಲಿ ಸಮೃದ್ಧವಾದ ಜೀವನಾನುಭವ, ಲೋಕಾನುಭವ ಇದೆ. ಆದರೆ ಪರಂಪರೆಯ ಅಕ್ಷರ ಸಾಹಿತ್ಯ ಇಲ್ಲ. ತುಳು ತನ್ನ ಅಸ್ತಿತ್ವದ ಪ್ರತಿಪಾದನೆಗಾಗಿ ಅನುವಾದಗಳಿಗೆ ಅವಕಾಶ ನೀಡಿದೆ. ನೆಲಮೂಲದ ಜ್ಞಾನವನ್ನು ಪ್ರಸ್ತುತಪಡಿಸಬೇಕಾದ ಆಕೃತಿ ಮತ್ತು ತಾಂತ್ರಿಕತೆಯ ಕೊರತೆಯನ್ನು ಈ ಅನುವಾದಗಳು ತುಂಬಿಕೊಡುತ್ತದೆ. ತುಳುವಿನ ಸ್ವತಂತ್ರ ಸಾಹಿತ್ಯ ಸೃಷ್ಟಿಗೆ ಸಾಹಿತ್ಯಿಕ ಮಾದರಿಗಳು, ಸಾಹಿತ್ಯ ಪ್ರಕಾರಗಳು, ಛಂದಸ್ಸು ಮುಂತಾದವುಗಳಿಗೆ ಕನ್ನಡ ಕೃತಿಗಳು ಮತ್ತು ಇತರ ಭಾಷೆಯ ಕೃತಿಗಳು ಮಾದರಿಯಾದವು.

ಇತರ ಭಾಷೆಗಳಿಂದ ಭಾಷೆಯೊಂದು ಸಾಹಿತ್ಯ ಕೃತಿಗಳನ್ನು ಅನುವಾದಿಸಿಕೊಳ್ಳುವುದರಿಂದ ಲಕ್ಷ್ಯ ಭಾಷೆಯೂ ಸಂವರ್ಧನೆಗೊಳ್ಳುತ್ತದೆ. ಭಾಷೆಯೊಂದರ ಸಾಹಿತ್ಯ ಕೃತಿಗಳು ಇತರ ಭಾಷೆಗಳಿಗೆ ಅನುವಾದಗೊಳ್ಳುವ ಮೂಲಕ ಭಾಷೆ, ಸಂಸ್ಕೃತಿ ವಿಸ್ತರಣೆಯನ್ನು ಪಡೆಯುತ್ತದೆ. ಆಕರ ಕೃತಿ ಮತ್ತು ಅನುವಾದ ಕೃತಿಗಳನ್ನು ತೌಲನಿಕ ಅಧ್ಯಯನ ಮಾಡುವ ಮೂಲಕ ಅನುವಾದದ ಉದ್ದೇಶ, ಅನುವಾದ ತಾತ್ವಿಕತೆಯನ್ನು ಅರಿಯಬಹುದು. ಅನುವಾದ ಅನ್ನುವ ರವಾನೆ ಮತ್ತು ಕೊರತೆ ನೀಗುವ ಪ್ರಕ್ರಿಯೆಯ ನಡುವೆ ಮೂಲಪಠ್ಯ ಮತ್ತು ಉದ್ದೇಶಿತ ಪಠ್ಯದ ನಡುವೆ ಒಂದು ಒಡಂಬಡಿಕೆಯ ಅನುಸಂಧಾನವಿರುತ್ತದೆ. ಸ್ವೀಕಾರ ಭಾಷೆಗೆ ಬೇಕಾದ ವಾತಾವರಣ, ಸನ್ನಿವೇಶ, ಸಾಂಸ್ಕೃತಿಕ ಅನುವು, ಆಯ್ಕೆಯ ಖಚಿತತೆ ಇರುತ್ತದೆ. ಆಕರ ಕೃತಿಯ ಭಾಷೆಯ ಅಧಿಕಾರದಲ್ಲಿ ಕರಗಿ ಹೋಗದಂತೆ ತುಳು ಅನುವಾದಗಳು ತಮ್ಮನ್ನು ತಾವು ಅಭಿವ್ಯಕ್ತಿಸಿಕೊಂಡಿದೆ. ತುಳು ಯಕ್ಷಗಾನ ಅನುವಾದ ಮತ್ತು ಪ್ರದರ್ಶನದ ಬಹುರೂಪಿ ಸಾಧ್ಯತೆಗಳಿಂದ ತುಳುನಾಡಿನೊಳಗೆ ಸಾಂಸ್ಕೃತಿಕ ಪಾಲುದಾರಿಕೆಯಲ್ಲಿ ಹೊಸ ಸಮೀಕರಣ ಮತ್ತು ಚಿಂತನೆಯಲ್ಲಿ ಸಾಂಸ್ಕೃತಿಕ ಪರಿಶೀಲನೆ ಮುನ್ನೆಲೆಗೆ ಬಂದಿದೆ.

ಮಾತಿಗೆ ತುಳು, ಕಲಿಕೆಗೆ ಕನ್ನಡ ಎಂದಾಗಿರುವಲ್ಲಿ ತುಳುವಿನಲ್ಲಿ ಬರೆಯುವ ಕನ್ನಡದ ಮನಸ್ಸಗಳು ಎರಡು ಭಿನ್ನ ಸಂಸ್ಕೃತಿಗಳ ಪೋಷಣೆಯ ಹಿನ್ನೆಲೆಯಲ್ಲಿ ಅನುವಾದಗಳನ್ನು ಕಂಡುಕೊಂಡಿರುವುದು ಇದೆ. ಆದರೆ ಸಾಹಿತ್ಯ ರಸಾನುಭೂತಿಯ ಉತ್ಪನ್ನ ಎಂಬ ಪ್ರಜ್ಞೆಯ ಕಾರಣದಿಂದಾಗಿ ತುಳುವಿನಲ್ಲಿ ಅನುವಾದಗಳು ನಡೆಯುತ್ತಿಲ್ಲ. ತುಳುವಿನಿಂದ ಇತರ ಭಾಷೆಗಳಿಗೆ ಅನುವಾದ ನಡೆಸುವಾಗ ತುಳು ಕೃತಿಗಳಲ್ಲಿ 'ತುಳುತನ' ಎಂಬುದನ್ನು ಮುಖ್ಯ ಸಾಂಸ್ಕೃತಿಕ ಪರಿಭಾಷೆಯಾಗಿ ಪರಿಗಣಿಸಲಾಗಿದೆ.

ತುಳುವಿನಿಂದ ಕನ್ನಡ ಮತ್ತು ಇಂಗ್ಲೀಷಿಗೆ ನಡೆದ ಅನುವಾದಗಳು ತುಳು ಅನುವಾದ ಚಟುವಟಿಕೆಗಳ ಭಾಗವೇ ಆಗಿದೆ ಹೊರತು ಅನ್ಯಭಾಷಾ ಚಟುವಟಿಕೆಗಳ ಪರಿಣಾಮದಿಂದ ನಡೆದದ್ದು ಕಡಿಮೆ.

ತುಳುವಿನ ಅನುವಾದ ಕೃತಿಗಳ ಭಾಷೆಯನ್ನು ವಿಶ್ಲೇಷಿಸಿಕೊಂಡಾಗ ತುಳು ಮನೋರಂಜನೆ ಮತ್ತು ವ್ಯವಹಾರಕ್ಕೆ ಮಾತ್ರ ಸೀಮಿತವಾದ ಭಾಷೆಯಲ್ಲ. ಅನುವಾದಗಳಲ್ಲಿ ಬಳಕೆಯಾದ ಭಾಷೆ, ನುಡಿಗಟ್ಟುಗಳು, ಸಾಂಸ್ಕೃತಿಕ ಹರವು ಇವುಗಳು ತುಳುವನ್ನು ಅಧೀನ ಜಾಯಮಾನವುಳ್ಳ ಭಾಷೆ ಅಲ್ಲ ಎಂದು ನಿರೂಪಿಸುತ್ತದೆ.

ಪಶ್ಚಿಮದ ಆಧುನಿಕತೆ ಮತ್ತು ಪೂರ್ವದ ಅಸ್ಮಿತೆ ಪ್ರಜ್ಞೆಯ ಕೂಡುಗೆರೆಯೇ ತುಳು ಅನುವಾದ ಚರಿತ್ರೆ. ಆಧುನಿಕತೆ ಮತ್ತು ಅಸ್ಮಿತೆ ಒಟ್ಟಾಗಿ ತುಳುವಿಗೆ ದಕ್ಕಿತು. ತುಳುವಿನಲ್ಲಿ ನಡೆದ ಅನುವಾದಗಳು ಭಾಷೆಯ ಅದಲು-ಬದಲು ಎನ್ನುವುದಕ್ಕಿಂತ ತುಳುವನ್ನು ನೋಡುವ ಮನಃಸ್ಥಿತಿಯನ್ನು ಬದಲಾಯಿಸುವ ಉದ್ದೇಶವುಳ್ಳದ್ದು. ತುಳುವಿನ ಅನುವಾದ ಪ್ರಕ್ರಿಯೆಯಲ್ಲಿ ನಡೆದ ಅನುವಾದಗಳಲ್ಲಿ ತುಳುವಿನ ಸಾಂಸ್ಕೃತಿಕ ಪರಿಸರವನ್ನು ಒಂದು ಮಹತ್ವದ ಅಂಶವೆಂದು ಪರಿಗಣಿಸಲಾಗಿದೆ. ತುಳು ಭಾಷಿಕ ಸಂರಚನೆಗೆ ಪ್ರಾಧಾನ್ಯತೆ, ತುಳು ಸಂಸ್ಕೃತಿ ಪ್ರಜ್ಞೆ ಮತ್ತು ತುಳುತನದ ಅಭಿಮಾನ ತುಳು ಅನುವಾದ ಮಿಮಾಂಸೆಯನ್ನು ಪ್ರಭಾವಿಸಿದೆ.

ತುಳು ಸಂವರ್ಧನೆಯ ಭಾವನಾತ್ಮಕ ಆಸಕ್ತಿಗಳೇ ತುಳು ಅನುವಾದದ ಮೂಲ ಪ್ರೇರಣೆಗಳು. ತುಳುವನ್ನು ಒಂದು ಸಾಹಿತ್ಯಿಕ, ಸಾಂಸ್ಕೃತಿಕ ಭಾಷೆಯನ್ನಾಗಿ ರೂಪಿಸುವುದು, ತುಳುವಿನ ಪರಂಪರೆಯ ಸಂಸ್ಕೃತಿಯನ್ನು ಅದರ ಸೂಕ್ಷ್ಮ ಸಂವೇದನೆಗಳ ಮೂಲಕ ಪ್ರಕಟಪಡಿಸುವುದು, ತುಳುವಿನ ಸಾಂಸ್ಕೃತಿಕ ಮೌಲ್ಯಗಳನ್ನು ಗುರುತಿಸುವುದು ಮತ್ತು ತುಳುವನ್ನು ಒಂದು ಗ್ರಂಥಸ್ಥ ಭಾಷೆಯನ್ನಾಗಿ ರೂಪಿಸುವುದು ಇವುಗಳು ತುಳು ಅನುವಾದ ಸಾಹಿತ್ಯ ಚರಿತ್ರೆಯ ಚಲನೆಗಳ ಮೂಲವಾಗಿವೆ.

ಮುಂದಿನ ಅಧ್ಯಯನದ ಸಾಧ್ಯತೆಗಳು

"ತುಳು ಅನುವಾದ ವಾಙ್ಮಯ : ಸಾಂಸ್ಕೃತಿಕ ಅನುಸಂಧಾನದ ನೆಲೆಗಳು" ಈ ಸಂಶೋಧನಾ ಅಧ್ಯಯನ ತುಳುವಿನ ಅನುವಾದ ಸಾಹಿತ್ಯದ ದೃಷ್ಟಿಯಿಂದ ಮೊದಲ ಅಧ್ಯಯನ ಕೃತಿಯಾಗಿದೆ. ಈ ಹಿನ್ನೆಲೆಯಲ್ಲಿ ತುಳು ಅನುವಾದ ಸಾಹಿತ್ಯದ ಸಮಗ್ರ ಶೋಧ, ಮಾಹಿತಿ ಕ್ರೋಢೀಕರಣ ಮತ್ತು ವಿಶ್ಲೇಷಣೆಯನ್ನು ಮುಖ್ಯವಾಗಿ ಇರಿಸಿಕೊಳ್ಳಲಾಗಿದೆ. ಅನುವಾದ ಸಿದ್ಧಾಂತ ಮತ್ತು ಸಾಂಸ್ಕೃತಿಕ ಚಿಂತನೆಗಳನ್ನು ಪೂರಕವಾಗಿ ಇರಿಸಿಕೊಂಡು ಈ ಅಧ್ಯಯನವನ್ನು ನಡೆಸಲಾಗಿದೆ. ತುಳು ಅನುವಾದ ಸಾಹಿತ್ಯ ತುಳು ಭಾಷೆಯಲ್ಲಿ ಬೆಳವಣಿಗೆಯಾದ ಬಗೆಯನ್ನು ಇಲ್ಲಿ ಪರಿಶೀಲಿಸಿಕೊಳ್ಳಲಾಗಿದೆ. ಈ ಅಧ್ಯಯನದ ಮುಂದುವರಿಕೆಯಾಗಿ ಬಹುಮುಖಿ ಸಂಶೋಧನೆಗೆ ಅವಕಾಶಗಳಿವೆ.

ತುಳು ಅನುವಾದ ಪ್ರಕ್ರಿಯೆಯಲ್ಲಿ ಮುಖ್ಯವಾಗಿ ಜಾನಪದ ಕಥಾನಕಗಳು, ಯಕ್ಷಗಾನ ಮತ್ತು ನಾಟಕ ಕ್ಷೇತ್ರಗಳಲ್ಲಿನ ರೂಪಾಂತರಗಳ ಕುರಿತು ಪ್ರತ್ಯೇಕ ಅಧ್ಯಯನಗಳಿಗೆ ಸಾಧ್ಯತೆಗಳಿವೆ. ತುಳು ಅನುವಾದ ಪ್ರಕ್ರಿಯೆಯಲ್ಲಿ ತುಳು-ಸಂಸ್ಕೃತ, ತುಳು-ಕನ್ನಡ, ತುಳು-ಇಂಗ್ಲೀಷ್ ಭಾಷೆಗಳ ಪರಸ್ಪರ ಬಳಕೆಯನ್ನು ಭಾಷಾ

ವಿಜ್ಞಾನ ಮತ್ತು ಭಾಷಿಕ, ಸಾಮಾಜಿಕ ಸಂಬಂಧಗಳ ಹಿನ್ನೆಲೆಯಿಂದ ಪರಿಶೀಲಿಸಬಹುದು. ತುಳುವಿನಿಂದ ಇಂಗ್ಲೀಷ್ ಮತ್ತು ಜರ್ಮನಿ ಭಾಷೆಗೆ ನಡೆದಿರುವ ತುಳು ಜನಪದ ಮಹಾಕಾವ್ಯಗಳ ಕುರಿತಾಗಿ ಅಧ್ಯಯನಕ್ಕೆ ಅವಕಾಶಗಳಿವೆ. ಆಕರ ಭಾಷೆ ಮತ್ತು ಉದ್ದೇಶಿತ ಭಾಷೆಯ ಒಳಗಿನವರು ಮತ್ತು ಹೊರಗಿನವರು (ತಮ್ಮದಲ್ಲದ ಪರಕೀಯ ಭಾಷೆಯ ಅಥವಾ ಭಾಷೆಗಳ) ಅನುವಾದ ಪ್ರಕ್ರಿಯೆ ನಡೆಸುವಾಗ ನಡೆಯುವ ವ್ಯತ್ಯಾಸ ಮತ್ತು ಪರಿಣಾಮಗಳ ಕುರಿತು ಅಧ್ಯಯನ ಮಾಡುವುದಕ್ಕೆ ಅವಕಾಶಗಳು ಇವೆ. ನಿರ್ದಿಷ್ಟ ಆಕರ ಪಠ್ಯ ಮತ್ತು ಅನುವಾದ ಪಠ್ಯಗಳ ತೌಲನಿಕ ಅಧ್ಯಯನಕ್ಕೆ ಅವಕಾಶಗಳಿವೆ.

ಅನುಬಂಧ

ಈ ಸಂಶೋಧನಾ ಮಹಾಪ್ರಬಂಧದ ಕೊನೆಯಲ್ಲಿ ಅನುಬಂಧವನ್ನು ನೀಡಲಾಗಿದ್ದು ಇದರಲ್ಲಿ ತುಳು ಅನುವಾದ ವಾಙ್ಮಯದ ಮಾಹಿತಿಯುಳ್ಳ ವಿವರಣಾತ್ಮಕ ಪಟ್ಟಿಯನ್ನು ನೀಡಲಾಗಿದೆ. ಇದರಲ್ಲಿ ತುಳು ಅನುವಾದ ಪ್ರಕ್ರಿಯೆಯಲ್ಲಿ ರೂಪಿತವಾಗಿರುವ ಯಕ್ಷಗಾನ ಕೃತಿಗಳು, ಜಾನಪದ ಕೃತಿಗಳು, ನಾಟಕ, ಕಾದಂಬರಿ, ಸಣ್ಣಕತೆ, ಕವನ ಮತ್ತು ಸಂಕೀರ್ಣ ಬರಹಗಳ ವಿವರಗಳಿವೆ. ಇವುಗಳನ್ನು ಈ ಅಧ್ಯಯನಕ್ಕೆ ಪ್ರಧಾನ ಆಕರಗಳೆಂದು ಪರಿಗಣಿಸಿಕೊಳ್ಳಲಾಗಿದೆ. ತುಳುವಿನಿಂದ ಇತರ ಭಾಷೆಗಳಿಗೆ ಮತ್ತು ಇತರ ಭಾಷೆಗಳಿಂದ ತುಳುವಿಗೆ ನಡೆದಿರುವ ಅನುವಾದಗಳ ಕ್ರೋಢೀಕರಣವನ್ನು ತುಳು ಅನುವಾದ ವಾಙ್ಮಯವೆಂಬ ಹೆಸರಿನಲ್ಲಿ ನೀಡಿದ ಪ್ರಥಮ ಪ್ರಯತ್ನ ಇದಾಗಿದೆ. ಪ್ರಕಟಿತ ಕೃತಿಗಳನ್ನು ಮಾತ್ರ ಗುರುತಿಸಿಕೊಳ್ಳಲಾಗಿದೆ.

ಅನುವಾದ ಕೃತಿ ಮತ್ತು ಆಕರ ಕೃತಿಯ ತೌಲನಿಕ ಅಧ್ಯಯನದಲ್ಲಿ ಪರಿಶೀಲಿಸಿಕೊಂಡ ಆಕರ ಕೃತಿಗಳನ್ನು ಮತ್ತು ಅಧ್ಯಯನದ ವಿಶ್ಲೇಷಣೆ, ಫಲಿತಗಳ ಸಮರ್ಥನೆಗೆ ಬಳಸಿಕೊಂಡ ಪರಾಮರ್ಶನ ಕೃತಿಗಳ ವಿವರಗಳನ್ನು ಆನುಷಂಗಿಕ ಆಕರಗಳೆಂದು ನೀಡಲಾಗಿದೆ.